ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ದುಬಾರಿ ದಸರಾ ಬೇಕಿತ್ತಾ?



ಸಂಪುಟ 13 | ಸಂಚಿಕೆ 41 | ಅಕ್ಟೋಬರ್ 7-13, 2019 | ಪುಟ 16 | ರೂ. 10/-


web: www.janashakthi.co.in e-mail : js_weekly@yahoo.com



ಮೋದಿ-2 ಸರ್ಕಾರದ ಮುಖವಾಡವನ್ನು ಕಳಚಲಿದೆ ಮತ್ತೊಂದು ಕಾರ್ಮಿಕರ ರಾಷ್ಟ್ರೀಯ ಮುಷ್ಕರ

ಬಯಲು ಶೌಚ ಮಾಡಿದ ದಲಿತ ಕಂದಮ್ಮಗಳ ಕಗ್ಗೊಲೆ





ಕಾರ್ಪೊರೇಟ್ ತೆರಿಗೆ ಕಡಿತ : ನಿರ್ಲಜ್ಜ ವರ್ಗ ಪಕ್ಷಪಾತ

ಜಮ್ಮು ಮತ್ತು ಕಾಶ್ಮೀರದಲ್ಲಿ ಈಗ ಬಿಡಿಸಿ ಚುನಾವಣೆಗಳ ಪ್ರಹಸನ–ಸಿಪಿಐ(ಎಂ) ಪೊಲಿಟ್ ಬ್ಯುರೊ
"ದೇಶದ ಗೃಹಮಂತ್ರಿಗಳು ಅಸತ್ಯಗಳ ಮೂಲಕ ದೇಶವನ್ನು ದಾರಿ ತಪ್ಪಿಸುವುದನ್ನು ನಿಲ್ಲಿಸಬೇಕು"

ಜಮ್ಮು ಮತ್ತು ಕಾಶ್ಮೀರದಲ್ಲಿ ಅಕ್ಟೋಬರ್ 24ರಂದು ಬ್ಲಾಕ್ ಆಭಿವೃದ್ಧಿ ಮಂಡಳಿ(ಬಿಡಿಸಿ)ಗಳಿಗೆ ಮತದಾನ ನಡೆಯುತ್ತದೆ ಎಂದು ಅಲ್ಲಿನ ಮುಖ್ಯ ಚುನಾವಣಾ ಆಯುಕ್ತರು ಪ್ರಕಟಿಸಿರುವುದು ಪ್ರಜಾಪ್ರಭುತ್ವದ ಒಂದು ಅಣಕ. ಇದು, ವಾಸ್ತವವಾಗಿ ಅಲ್ಲಿ ಕಳೆದ ಎರಡು ತಿಂಗಳಿಂದ ಸಂಪರ್ಕಗಳನ್ನು, ನಾಗರಿಕರ ಚಲವಲನಗಳನ್ನು ಹಿಂದೆಂದೂ ಕಾಣದ ರೀತಿಯಲ್ಲಿ ನಿರ್ಬಂಧಿಸಿಟ್ಟಿದ್ದರೂ, ರಾಜಕೀಯ ಮುಖಂಡರು ಮತ್ತು ಕಾರ್ಯಕರ್ತರನ್ನು ಈಗಲೂ ಜೈಲುಗಳಲ್ಲಿಟ್ಟಿದ್ದರೂ, ಪರಿಸ್ಥಿತಿ "ಸಾಮಾನ್ಯವಾಗಿದೆ" ಎಂದು ಜಗತ್ತಿಗೆ ಚಿತ್ರಿಸುವ ಒಂದು ಪ್ರಯತ್ನ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಟೀಕಿಸಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಬಿಡಿಸಿ ಗಳಿಗೆ ಚುನಾವಣೆಯೆಂಬುದು ಕಪಟತನವಲ್ಲದೇ ಬೇರೇನೂ ಅಲ್ಲ ಎಂದು ಅದು ಹೇಳಿದೆ.

ಇದಲ್ಲದೆ, ಬಿಡಿಸಿ ಚುನಾವಣೆಗಳಲ್ಲಿ ಮತನೀಡಬೇಕಾದವರು ಗ್ರಾಮ ಪಂಚಾಯತುಗಳ ಚುನಾಯಿತ ಪಂಚರು ಮತ್ತು ಸರಪಂಚರು. ಆದರೆ 61%ಕ್ಕೂ ಹೆಚ್ಚು ಪಂಚರು ಮತ್ತು ಸರಪಂಚರ ಸ್ಥಾನಗಳು ಖಾಲಿಯಾಗಿಯೇ ಉಳಿದಿದೆ. ಏಕೆಂದರೆ ಡಿಸೆಂಬರ್ 2018ರಲ್ಲಿ ನಡೆದ ಚುನಾವಣೆಗಳಲ್ಲಿ ಜನಗಳು, ವಿಶೇಷವಾಗಿ ಕಣಿವೆಯ 138 ಬ್ಲಾಕುಗಳಲ್ಲಿ, ಮತದಾನದಲ್ಲಿ ಭಾಗವಹಿಸಲಿಲ್ಲ. ಬಿಡಿಸಿ ಚುನಾವಣೆಗಳನ್ನು ನಡೆಸುವ ಮೊದಲು ರಾಜ್ಯ ಚುನಾವಣಾ ಆಯೋಗ ಈ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಚುನಾವಣೆಗಳನ್ನು ನಡೆಸಬೇಕಾಗಿತ್ತು ಎಂಬುದು ಸ್ವಯಂವೇದ್ಯ.

ಈ ಸಮಸ್ತ ಪ್ರಹಸನಕಾರೀ ಕಸರತ್ತನ್ನು ಯೋಜಿಸಿರುವುದು ಕೇಂದ್ರ ಸರಕಾರ. ಅದೇ ಸಮಯದಲ್ಲಿ ದೇಶದ ಗೃಹಮಂತ್ರಿ ಅಮಿತ್ ಷಾ ಜಮ್ಮು ಮತ್ತು ಕಾಶ್ಮೀರದಲ್ಲಿ ಯಾವುದೇ ನಿರ್ಬಂಧಗಳಿಲ್ಲ, ಇವೆಲ್ಲವೂ ಇರುವುದು ಸರಕಾರವನ್ನು ವಿರೋಧಿಸುವ ಪ್ರತಿಪಕ್ಷಗಳ ಮನಸ್ಸಿನಲ್ಲಿ ಮಾತ್ರ ಎಂದು ಹೇಳಿಕೆ ನೀಡಿದ್ದಾರೆ. ಆಸ್ಪತ್ರೆಗಳ ಹೊರರೋಗಿ ವಿಭಾಗಗಳಲ್ಲಿ ಎಷ್ಟು ರೋಗಿಗಳಿದ್ದಾರೆ, ಎಷ್ಟು ಟೆಲಿಫೋನ್ ಲೈನುಗಳು ಕೆಲಸ ಮಾಡುತ್ತಿವೆ ಎಂಬ ಅಂಕೆ–ಸಂಖ್ಯೆಗಳನ್ನು ಉದ್ಧರಿಸುವ ಬದಲು, ಅವರು ಇಂಟರ್ನೆಟ್ ಮತ್ತು ಮೊಬೈಲ್ ಫೋನ್ ಸಂಪರ್ಕಗಳನ್ನು ಏಕೆ ಮತ್ತೆ ನೀಡಿಲ್ಲ, ಮುಖ್ಯ ಬಾಜಾರುಗಳು ಮತ್ತು ಅಂಗಡಿಗಳು ಈಗಲೂ ಏಕೆ ಮುಚ್ಚಿವೆ, ಶಾಲೆಗಳು ಏಕೆ ನಡೆಯುತ್ತಿಲ್ಲ, ಕಚೇರಿಗಳಲ್ಲಿ ಹಾಜರಾತಿ ಈಗಲೂ ಏಕೆ ಕಡಿಮೆಯಿದೆ ಮತ್ತು ಎಲ್ಲ ಮುಖಂಡರೂ ಇನ್ನೂ ಏಕೆ ಜೈಲುಗಳಲ್ಲಿದ್ದಾರೆ ಎಂದು ಪ್ರಶ್ನಿಸುತ್ತ ಇವಕ್ಕೆಲ್ಲ ಮೊದಲು ಉತ್ತರ ಕೊಡಬೇಕಾಗಿತ್ತು, ಇವೆಲ್ಲ ಕೇವಲ ನಿರ್ಬಂಧಗಳಲ್ಲ, ಪ್ರಕಜಾಪ್ರಭುತ್ವದ ಮೇಲೆ ಮುಂದುವರೆಯುತ್ತಿರುವ ಹೊಡೆತಗಳು ಎಂದು ಪೊಲಿಟ್ ಬ್ಯುರೊ ವರ್ಣಿಸಿದೆ. ದೇಶದ ಗೃಹಮಂತ್ರಿಗಳು ಅಸತ್ಯಗಳ ಮೂಲಕ ದೇಶವನ್ನು ದಾರಿ ತಪ್ಪಿಸುವುದನ್ನು ನಿಲ್ಲಿಸಬೇಕು ಎಂದು ಅದು ಆಗ್ರಹಿಸಿದೆ.

ಸಾಮಾನ್ಯ ಸ್ಥಿತಿ ಮತ್ತೆ ನೆಲೆಗೊಳ್ಳುವಂತೆ ಮಾಡಬೇಕು, ಎಲ್ಲ ರಾಜಕೀಯ ಮುಖಂಡರು ಮತ್ತು ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು ಮತ್ತು ರಾಜಕೀಯ ಚಟುವಟಿಕೆಯ ಹಕ್ಕನ್ನು ಮತ್ತೆ ನೆಲೆಗೊಳಿಸಿದ ಮೇಲೆಯೇ ಚುನಾವಣೆಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಪುನರುಚ್ಚರಿಸಿದೆ.

ಬಹಿರಂಗ ಶೌಚಕ್ಕಾಗಿ ದಲಿತ ಮಕ್ಕಳ ಹತ್ಯೆ

ದೇಶದ ಪ್ರಧಾನ ಮಂತ್ರಿಗಳು ಗ್ರಾಮೀಣ ಭಾರತ ಸಂಪೂರ್ಣವಾಗಿ "ಬಹಿರಂಗ ಶೌಚ ಮುಕ್ತ" ಎಂದು ಘೋಷಿಸುವ ಸರಿಯಾಗಿ ಒಂದು ವಾರದ ಮೊದಲು, ಸಪ್ಟಂಬರ್ 25ರಂದು ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯ ಭವಕೇರಿ ಗ್ರಾಮದ 12 ವರ್ಷದ ರೋಶನಿ ಮತ್ತು 10 ವರ್ಷದ ಅವಿನಾಶನನ್ನು ಬಹಿರಂಗ ಶೌಚದ ಹೆಸರಲ್ಲಿ ಸಾಯಿಸಿದ ಘಟನೆ, ಅದರಲ್ಲೂ ಇವರು ಕಡುಬಡತನದಲ್ಲಿರುವ ದಲಿತ ಕುಟುಂಬವೊಂದರ ಮಕ್ಕಳು ಎಂಬ ಸಂಗತಿ ದೇಶದ ಪ್ರಜಾಪ್ರಭುತ್ವವಾದಿಗಳೆಲ್ಲರನ್ನು ತಲ್ಲಣಗೊಳಿಸಿದೆ.

ಮಧ್ಯಪ್ರದೇಶದ ಸಿಪಿಐ(ಎಂ) ಮತ್ತು ದಲಿತ ಶೋಷಣ ಮುಕ್ತಿ ಮಂಚ್‌ನ ರಾಜ್ಯ ಘಟಕಗಳ ಮುಖಂಡರು ಈ ದಲಿತ ಕುಟುಂಬವನ್ನು ಭೇಟಿ ಮಾಡಿದಾಗ ತಿಳಿದ ವಿಷಯಗಳು ಇನ್ನಷ್ಟು ತಲ್ಲಣಕಾರಿ.

ಈ ಅಮಾನುಷ ಕೊಲೆಗಳನ್ನು ನಡೆಸಿದವರು ದೇವರು ತಮ್ಮ ಕನಸಿನಲ್ಲಿ ಬಂದು ರಾಕ್ಷಸರನ್ನು ಕೊಲ್ಲಬೇಕು ಎಂದು ಹೇ:ಳಿದ್ದಕ್ಕಾಗಿ ತಾವು ಈ ಕೃತ್ಯ ನಡೆಸಿರುವುದಾಗಿ ಹೇಳಿಕೊಂಡಿದ್ದಾರಂತೆ. ಈ ಇಬ್ಬರು ದಲಿತ ಹಸುಳೆಗಳು ಅವರಿಗೆ ಹೇಗೆ ರಾಕ್ಷಸರಾಗಿ ಕಂಡರು ಎಂದು ಸಿಪಿಐ(ಎಂ)–ಡಿಎಸ್‌ಎಂಎಂ ನಿಯೋಗಕ್ಕೆ ಆಚ್ಚರಿಯೆನಿಸಿತು.ಆದರೆ ಅವಿನಾಶ್‌ನ ತಂದೆ ಮನೋಜ್ ಮತ್ತು ರೋಶನಿ ತಂದೆ ಕಲ್ಲ ವಾಲ್ಮೀಕಿಯಿಂದ ತಿಳಿದ ವಿಷಯಗಳು ಇದೊಂದು ಪೂರ್ವಯೋಜಿತ ಕೊಲೆ ಎಂದು ತೋರಿಸುತ್ತವೆ ಎಂದು ನಿಯೋಗ ಅಭಿಪ್ರಾಯ ಪಟ್ಟಿದೆ.

ರೋಶನಿಗೆ ಇದೇ ಮಂದಿ ಕೆಲವು ದಿನಗಳ ಹಿಂದೆ ಕಿರುಕುಳ ಕೊಟ್ಟಿದ್ದರು. ಈ ಬಗ್ಗೆ ಗ್ರಾಮದ ಸರಪಂಚನಿಗೆ ದೂರನ್ನೂ ಕೊಡಲಾಗಿತ್ತು. ಈ ಎರಡು ಮಕ್ಕಳೂ ಗ್ರಾಮದ ಶಾಲೆಯಲ್ಲೂ ಬಹಳ ಕಿರುಕುಳಗಳನ್ನು ಅನುಭವಿಸುತ್ತಿದ್ದರು. ರೋಶಚಿಡೀ ಶಾಲೆಯ ಕಸಗುಡಿಸಬೇಕಾಗಿತ್ತು, ಮತ್ತು ಅವಿನಾಶ್ ಶೌಚಾಲಯವನ್ನು ಸ್ವಚ್ಛಗೊಳಿಸುವಂತೆ ಬಲವಂತ ಮಾಡಲಾಗುತ್ತಿತ್ತು. ಈ ಕುಟುಂಬಗಳು ಹತ್ತಿರದಲ್ಲೇ ಬಾವಿ ಇದ್ದರೂ ಒಂದು ಕಿ.ಮೀ. ದೂರದಿಂದ ನೀರು ತರಬೇಕಾಗಿದೆ.

ಈ ಎರಡೂ ಕುಟುಂಬಗಳು ಬಡತನದ ರೇಖೆಯ ಕೆಳಗಿನ ಕುಟುಂಬಗಳೆನಿಸಿದರೂ ಅವರಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನಾದ ಅಡಿಯಲ್ಲಿ ಮನೆಯೂ ಸಿಕ್ಕಿಲ್ಲ, ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಶೌಚಾಲಯಕ್ಕೆ ಹಾಕಿದ್ದ ಈ ಎರಡೂ ದಲಿತ ಕುಟುಂಬಗಳ ಅರ್ಜಿಗಳನ್ನು ಕೂಡ ಊರ ಸರಪಂಚ ತಿರಸ್ಕರಿಸಿದ್ದಾನೆ.

ಈ ಮಕ್ಕಳನ್ನು ಕೊಂದವರು ಬಿಜೆಪಿಯ ಸ್ಥಳೀಯ ಮುಖಂಡರೊಂದಿಗೆ ಸಂಪರ್ಕ ಇರುವವರು ಎಂದೂ ಊರ ಜನಗಳಿಂದ ನಿಯೋಗಕ್ಕೆ ತಿಳಿದು ಬಂದಿದೆ. ಅವರು ಈ ಎರಡೂ ಕುಟುಂಬಗಳನ್ನು ಎಷ್ಟೊಂದು ಬೆದರಿಸಿದ್ದಾರೆಂದರೆ, ಈಗ ಅವರು ಊರು ಬಿಟ್ಟು ಪಟ್ಟಣಕ್ಕೆ ವಲಸೆ ಹೋಗುವ ಯೋಚನೆ ಮಾಡುತ್ತಿದ್ದಾರೆ ಎಂದು ತಿಳಿದು ಬಂತು.

ಅಕ್ಟೋಬರ್ 4ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಈ ಜಘನ್ಯ ಹತ್ಯೆಯನ್ನು ಖಂಡಿಸಿ ಡಿಎಸ್‌ಎಂಎಂ ಕರೆಯ ಮೇರೆಗೆ ಒಂದು ಧರಣಿ ಪ್ರತಿಭಟನೆ ನಡೆಯಿತು.



ದಿಲ್ಲಿಯಲ್ಲಿ ಸುರ್ಜಿತ್ ಭವನ ಉದ್ಘಾಟನೆ

ಭಾರತದ ಕಮ್ಯುನಿಸ್ಟ್ ಆಂದೋಲನದ ಒಬ್ಬ ಪ್ರಮುಖ ನೇತಾರ, ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯೂ ಆಗಿದ್ದ ಹರ್ಕಿಶನ್ ಸಿಂಗ್ ಸುರ್ಜಿತ್‌ರವರ ನೆನಪಿನ ಭವನ ದಿಲ್ಲಿಯಲ್ಲಿ ಅಕ್ಟೋಬರ್ 2ರಂದು ಉದ್ಘಾಟನೆಯಾಯಿತು. ಇದನನು ಪಕ್ಷದ ಕಾರ್ಯಕರ್ತರಿಗೆ ಮಾರ್ಕ್ಸ್‌ವಾದದ ವಿಜ್ಞಾನದಲ್ಲಿ ತರಬೇತಿ ನೀಡುವ ಒಂದು ಕಾಯಂ ಕೇಂದ್ರೀಯ ಶಾಲೆಯಾಗಿ ನಿರ್ಮಿಸಲಾಗಿದೆ. ಪ್ರಸಕ್ತ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಇದನ್ನು ಉದ್ಘಾಟಿಸಿದರು. ಇದರ ಮೊದಲು ಪಕ್ಷದ ಅತ್ಯಂತ ಹಿರಿಯ ಪೊಲಿಟ್‌ಬ್ಯುರೊ ಸದಸ್ಯರಾದ ಎಸ್. ಆರ್.ಪಿಳ್ಳ ಧ್ವಜಾರೋಹಣ ಮಾಡಿದರು, ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರಾದ ಬಿಮನ್ ಬಸು ಸುರ್ಜಿತ್‌ರವರ ಪ್ರತಿಮೆಯ ಅನಾವರಣ ನಡೆಸಿದರು. ಪ್ರಕಾಶ ಕಾರಟ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರು ಪಕ್ಷದ ಕೇಂದ್ರೀಯ ಶಾಲೆಯಾಗಿ ಇದರ ರಚನೆಯ ಹಿನ್ನೆಲೆಯನ್ನು ನಿರೂಪಿಸಿದರು.



2005ರಲ್ಲಿ ಕೇಂದ್ರ ಸರಕಾರ ವಿವಿಧ ರಾಷ್ಟ್ರೀಯ ಪಕ್ಷಗಳಿಗೆ ಸಂಸತ್ತಿನಲ್ಲಿ ಅವುಗಳ ಸಂಖ್ಯಾಬಲಕ್ಕೆ ಅನುಗುಣವಾಗಿ ನಿವೇಶನಗಳನ್ನು ಕೊಟ್ಟಿತು. ಹೀಗೆ ಪಡೆದ ನಿವೇಶನದಲ್ಲಿ ಸಿಪಿಐ(ಎಂ) ತನ್ನ ಕೇಂದ್ರೀಯ ಶಾಲೆಯನ್ನು ನಿರ್ಮಿಸಲು ನಿರ್ಧರಿಸಿತು. ಇದು ಪಕ್ಷದ 10 ಲಕ್ಷ ಸದಸ್ಯರ ವಂತಿಗೆಗಳಿಂದ ನಿರ್ಮಾಣಗೊಂಡಿದೆ. ಕೇರಳದ ಸಂಗಾತಿಗಳ ಕೊಡುಗೆಯ ಉದಾಹರಣೆಯನ್ನು ಕೊಡುತ್ತ ಹೇಗೆ ಅವರು 48ಗಂಟೆಗಳಲ್ಲಿ ಬೀದಿಗಳಲ್ಲಿ ಬಕೆಟ್‌ಗಳಲ್ಲಿ 9 ಕೋಟಿ ರೂ.ಗಳನ್ನು ಸಂಗ್ರಹಿಸಿ ಕೊಟ್ಟರು ಎಂಬುದನ್ನು ಪ್ರಕಾಶ್ ಕಾರಟ್ ಹೇಳಿದರು.


ಇದು ಪಕ್ಷದ ಕೇಂದ್ರೀಯ ತರಬೇತಿ ಕೇಂದ್ರವಾಗಿರುತ್ತದೆ. ಅಲ್ಲದೆ ಇತರ ಪ್ರಜಾಪ್ರಭುತ್ವ ಮತ್ತು ಸಾಂಸ್ಕೃತಿಕ ಶಕ್ತಿಗಳ ಚಟುವಟಿಕೆಗಳಿಗೂ ಲಭ್ಯವಿರುತ್ತದೆ ಎಂದು ಪ್ರಕಾಶ ಕಾರಟ್ ಹೇಳಿದರು.

ಸೀತಾರಾಮ್ ಯೆಚುರಿಯವರು ಮಾತನಾಡುತ್ತ ವಯಸ್ಕರಾಗುವ ಮೊದಲೇ ಸ್ವಾತಂತ್ರ್ಯ ಆಂದೋಲನಕ್ಕೆ 'ಲಂಡನ್ ತೋಡ್ ಸಿಂಗ್' ಎಂದು ಧುಮುಕಿದ ಸುರ್ಜಿತ್‌ರವರು ಔಪಚಾರಿಕ ಶಿಕ್ಷಣದಿಂದ ವಂಚಿತರಾದವರು. ಆದರೆ ಅವರು ಶ್ರದ್ಧಾಪೂರ್ಣ ವಿದ್ಯಾರ್ಥಿಯಾಗಿದ್ದರು. ಪಕ್ಷವನ್ನು ಸೈದ್ಧಾಂತಿಕವಾಗಿ ಕಟ್ಟಿ ಬೆಳೆಸಲು ಒತ್ತು ನೀಡಿದ್ದರು. ಯೆಚುರಿಯವರು ತಮ್ಮ ಭಾಷಣದಲ್ಲಿ ತಾವು ಕೇಳಿರುವ ಸುರ್ಜಿತ್ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಇತರ ಕ್ರಾಂತಿಕಾರಿಗಳ ಜ್ಞಾನದ ಹಸಿವಿನ ಕಥನಗಳನ್ನು ಹಂಚಿಕೊಂಡರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ ಅವರೂ ಸಮಾರಂಭವನ್ನು ಉದ್ದೇಶಿಸಿ ಮಾತಾಡಿದರು. ಈ ಸಮಾರಂಭದಲ್ಲಿ ದೇಶದ ಹಲವೆಡೆಗಳಿಂದ ಮಾತ್ರವಲ್ಲ, ಇಂಗ್ಲೆಂಡ್ ಮತ್ತು ಕೆನಡಾದಿಂದಲೂ ಭಾರತೀಯ ಮೂಲದ ಕಾರ್ಮಿಕರ ಪ್ರತಿನಿಧಿಗಳು ಬಂದಿದ್ದರು. ಸುರ್ಜಿತ್‌ರವರ ಕುಟುಂಬದ ಸದಸ್ಯರೂ ಭಾಗವಹಿಸಿದ್ದರು.







ಸಂಪಾದಕೀಯ

ದುಬಾರಿ ದಸರಾ ಬೇಕಿತ್ತಾ ?

ರಾಜ್ಯದಲ್ಲಿ ಮತ್ತು ದೇಶದ ಇತರ ರಾಜ್ಯಗಳಲ್ಲಿ ಹಿಂದೆಂದೂ ಕಂಡರಿಯದ ಪ್ರವಾಹದಿಂದಾಗಿ ಭಾರೀ ಪ್ರಮಾಣದ ಕಷ್ಟ ನಷ್ಟಗಳು ಸಾವು ನೋವುಗಳು ಸಂಭವಿಸಿವೆ. ಕೆಲವು ಕಡೆ ಇನ್ನೂ ಮಳೆ ನಿಂತಿಲ್ಲ, ಪ್ರವಾಹ ಇಳಿದಿಲ್ಲ ಮನೆ ಮನೆಗಳಲ್ಲಿ ಶೋಕ! ನೆರೆ ಪೀಡಿತ ಪ್ರದೇಶದ ಮನೆಗಳಲ್ಲಿ ಒಬ್ಬರಾದರೂ ಸಾವನ್ನಪ್ಪಿರುತ್ತಾರೆ ಇಲ್ಲವೆ ಇದುವರೆಗೂ ಕಾಣೆಯಾಗಿರುತ್ತಾರೆ. ಸಾವಿರಾರು ಜನ ತಮ್ಮ ಮನೆಗಳನ್ನು ಕಳೆದು ಕೊಂಡುವರು ಅನಿವಾರ್ಯವಾಗಿ ಗಂಜಿ ಕೇಂದ್ರಗಳಲ್ಲಿ ಗಂಜಿ ಕಾಣದೆ ಪರಿತಪಿಸುತ್ತಿದ್ದಾರೆ. ನಮ್ಮ ಯಾವ ತಪ್ಪಿಗೆ ಈ ಶಿಕ್ಷೆ ಎಂದು ರೋಧಿಸುತ್ತಿದ್ದಾರೆ. ಎಲ್ಲವನ್ನೂ ಕಳೆದು ಕೊಂಡು ನಿರ್ಗತಿಕರಾಗಿದ್ದಾರೆ. ಮುಂದೇನು ಮಾಡ ಬೇಕು ಎಂಬ ಚಿಂತೆಯಿಂದ ಸೊರಗುತ್ತಿದ್ದಾರೆ. ಇಂತಹ ಸಂಕಷ್ಟದ ದಿನಗಳಲ್ಲಿ ಇಷ್ಟೊಂದು ಆಡಂಬರದ ದಸರಾ ಬೇಕಿತ್ತಾ ಎಂಬ ಪ್ರಶ್ನೆ ಹೃದಯವಂತರನ್ನು ಕಾಡದೆ ಇರಲಾರದು.

ನಮ್ಮ ಮನೆಯಲ್ಲಿ ಸಾವು ಸಂಭವಿಸಿದಾಗ ನಾವು ಹಲವು ದಿನಗಳ ಕಾಲ ಯಾವ ಹಬ್ಬ ಹರಿದಿನಗಳನ್ನುಆಚರಿಸುವುದಿಲ್ಲ. ದು:ಖದಲ್ಲೇ ಕಾಲ ಕಳೆಯುತ್ತೇವೆ.ಇದು ನಮ್ಮ ಸಂಸ್ಕೃತಿ. ಇದು ಮಾನವೀಯ ಸ್ಪಂದನೆ. ಆದರೆ ರಾಜ್ಯದಲ್ಲಿ ಸಂಭವಿಸಿದ ಈ ದುರಂತವನ್ನು ಮರೆತು ನಾವು ದಸರಾದಂತಹ ಆಚರಣೆಯಲ್ಲಿ ಮೈ ಮರೆಯುವುದು ಸರಿಯೇ

ದಸರಾ ಯಶಸ್ವಿಗಾಗಿ ಸರ್ಕಾರ ಕೋಟಿಗಟ್ಟಲೆ ರೂ ಅನುದಾನ ನೀಡಿದೆ. ಇದೊಂದು ವಿಶ್ವ ವಿಖ್ಯಾತ ಸಂದರ್ಭ ಎಂಬುದೇನೋ ನಿಜ. ನಮ್ಮ ವಿವಿಧ ಸಾಂಸ್ಕೃತಿಕ ಪರಂಪರೆಗಳಿಗೆ ಈ ಮೂಲಕ ಪ್ರೋತ್ಸಾಹ ಕೊಡುವುದು ಸರಿಯಾಗಿದೆ. ಆದರೆ ಮನೆಯೊಳಗೆ ಮೃತ ದೇಹವೊಂದನ್ನು ಇಟ್ಟುಕೊಂಡು ನಾವು ಸಂಭ್ರಮಿಸಲು ಸಾಧ್ಯವೆ? ಅಷ್ಟೊಂದು ಹಣವನ್ನು ಅಲ್ಲಿ ಮೈಸೂರಿನಲ್ಲಿ ವೆಚ್ಚ ಮಾಡುವ ಬದಲು ನೆರೆ ಸಂತ್ರಸ್ತರ ಪರಿಹಾರ ಕಾಮಗಾರಿ ಗಳಿಗೆ, ತುರ್ತು ಪರಿಹಾರಕ್ಕೆ ವರ್ಗಾಯಿಸ ಬಹುದಾಗಿತ್ತಲ್ಲವೆ? ಎಷ್ಟೆಂದರೂ, ಆ ಹಣ ಜನರು ನೀಡಿದ ತೆರಿಗೆಯಿಂದ ಸಂಗ್ರಹವಾದ ಹಣವಲ್ಲವೆ? ಇಂತಹ ಒಂದು ರಾಷ್ಟ್ರೀಯ ವಿಪತ್ತು ಸಂಭವಿಸಿದಾಗ ನಾವು ಉಳಿದ ಅನಗತ್ಯ ಖರ್ಚು ವೆಚ್ಚಗಳನ್ನು ಕಡಿತ ಮಾಡಿ ನೊಂದವರ ಪರಿಹಾರಕ್ಕೆ ಬಳಸ ಬಹುದಾಗಿತ್ತು ಎಂದು ಹೇಳುವುದು ತಪ್ಪೇ.

ದಸರಾ ಮತ್ತೆ ಮತ್ತೆ ಬರುತ್ತದೆ. ಸಂತೋಷ ಪಡಲು, ಅವಕಾಶಗಳು ಬಂದೇ ಬರುತ್ತವೆ. ಆದರೆ ನಮ್ಮ ಅಸಂಖ್ಯಾತ ಬಂಧುಗಳು ಕಷ್ಟದಲ್ಲಿದ್ದಾಗ, ಊಟಕ್ಕೊ ಗತಿ ಇಲ್ಲದೆ ಪರದಾಡುತ್ತಿರುವಾಗ ನಾವು ಮಾತ್ರ ಏನೂ ಆಗಿಲ್ಲ ಎನ್ನುವಂತೆ ಯಥಾ ಪ್ರಕಾರ ಮಜಾ ಮಾಡುವುದರಲ್ಲಿ ತೊಡಗುವುದು ನ್ಯಾಯವೆ? ನಾವು ಮೃಗಗಳಲ್ಲ. ಮನುಷ್ಯನಿಗೆ ಮಾತ್ರ ಇನ್ನೊಬ್ಬನ ನೋವು ಅರ್ಥವಾಗುತ್ತದೆ. ನಮಗೆ ಸಂತ್ರಸ್ತರ ಗೋಳು ಕಾಣದೆ ಹೋದರೆ ನಾವು ಮೃಗಗಳಿಗಿಂತ ಕಡೆ!

ಯಾಕೋ ಏನೋ ಕೇಂದ್ರ ಮತ್ತು ರಾಜ್ಯದಲ್ಲಿ ಜನರ ನೋವಿಗೆ ಸ್ಪಂದಿಸದ ಕಲ್ಲಿನಂತಹ ಹ್ರದಯವುಳ್ಳ ಸರ್ಕಾರಗಳು ಆಳುತ್ತಿವೆ. ಪ್ರಧಾನಿ ಮೋದಿಯವರಿಗೆ ದೇಶ ಕ್ಕಿಂತ ವಿದೇಶಗಳಲ್ಲಿ ಭಾರಿ ಕೆಲಸ ಇದೆ. ಟ್ರಂಪ್ ಮಹರಾಜರನ್ನು ಮುಂದಿನ ಚುನಾವಣೆಯಲ್ಲಿ ಗೆಲ್ಲಿಸುವ ಜವಾಬ್ದಾರಿ ಇದೆ! ದೇಶದೊಳಗೆ ಸಾಯುವವರ ಸಂಖ್ಯೆ ಹೆಚ್ಚಾದರೆ ಅವರಿಗೆ ದೇಶದೊಳಗಿನ ಜವಾಬ್ದಾರಿ ಕಡಿಮೆಯಾಗಿ ಹೆಚ್ಚು ಸಮಯವನ್ನು ಅವರು ವಿದೇಶಗಳಲ್ಲಿ ಕಳೆಯಲು ಸಾಧ್ಯವಾಗ ಬಹುದು

ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಈಗ ರೈತರು ಪ್ರವಾಹದಲ್ಲಿ ಕೊಚ್ಚಿ ಹೋಗಿರುವ ತಮ್ಮ ಭೂಮಿಗಾಗಿ ಪರಿತಪಿಸುತ್ತಾ ಭೂಮಿಯೊಳಗೆ ಸೇರಲು ಬಯಸುತ್ತಾರೆ. ಕರ್ನಾಟಕದಲ್ಲಿ ಈಗಾಗಲೇ ನಾಲ್ಕೈದು ಸಂತ್ರಸ್ತ ರೈತರು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ. ಹಸಿರು ಶಾಲು ಹೊದ್ದು ಪ್ರಮಾಣ ಮಾಡಿದ ಯಡಿಯೂರಪ್ಪನವರಿಗೂ ಅದು ಗಮನಕ್ಕೆ ಬರದಿರುವುದು ಕನ್ನಡ ನಾಡಿನ ದೌರ್ಬಲ್ಯ!

ಗಾಂಧೀಜಿ ಚಿಂತನೆ, ಸಂಗ್ರಾಮದಲ್ಲಿ ವಹಿಸಿದ ಪಾತ್ರದ ಸರಿಯಾದ ಮೌಲ್ಯ ಮಾಪನ ಅತ್ಯಗತ್ಯ

'ಗಾಂಧೀಜಿಯವರ ಮೂಲ ಚಿಂತನೆ ಮತ್ತು ಮೌಲ್ಯಗಳನ್ನು ಮಸುಕುಗೊಳಿಸಿ ಗಾಂಧಿ ಎಂದರೆ ಅಹಿಂಸೆ ಮತ್ತು ಸ್ವಚ್ಛತೆಯ ಪ್ರತಿನಿಧಿ ಮಾತ್ರ ಎಂಬಂತೆ ಚಿತ್ರಿಸುತ್ತಿರುವುದರ ಹಿಂದೆ ಸ್ಥಾಪಿತ ಹಿತಾಸಕ್ತಿಗಳ ಲೆಕ್ಕಚಾರವಿದ್ದು ಅದನ್ನು ಸರಿಯಾಗಿ ಅರಿಯಬೇಕಿದೆ. ಗಾಂಧಿಯವರು ಬ್ರಿಟಿಷ್ ವಸಾಹತುಶಾಹಿಯ ವಿರುದ್ಧದ ಮಹಾನ್ ಸಂಗ್ರಾಮದಲ್ಲಿ ಅತ್ಯಂತ ಮಹತ್ವದ, ಮುಂಚೂಣಿ ಪಾತ್ರ ವಹಿಸಿದ ಜನನಾಯಕ ಎಂಬುದನ್ನು ಮರೆಯಬಾರದು. ಭಾರತವನ್ನು ಮತ್ತೆ ಗುಲಾಮಗಿರಿಗೆ ಒಳಪಡಿಸುವ ಕುತಂತ್ರಗಳ ವಿರುದ್ಧ ನಡೆಸಬೇಕಾದ ಇಂದಿನ ಹೋರಾಟಗಳಿಗೆ ಗಾಂಧಿಯವರ ತೊಡಗುವಿಕೆ ಸ್ಫೂರ್ತಿಯಾಗಬೇಕು' ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಎಸ್ ವೈ ಗುರುಶಾಂತ್ ಅವರು ನುಡಿದರು.



ಅವರು 2019 ಅಕ್ಟೋಬರ್ 2 ರಂದು ಶಿವಮೊಗ್ಗ ಜಿಲ್ಲೆ ಸಾಗರದ ಸರ್ಕಾರಿ ನೌಕರರ ಭವನದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಂಧೀಜಿ ಯವರಿಗೆ ನುಡಿನಮನ ಸಲ್ಲಿಸಿ ಮಾತನಾಡುತ್ತಿದ್ದರು.

'ಗಾಂಧಿಯವರದ್ದು ಯಾರಿಗೂ ನೋವು ತರದ ವ್ಯಕ್ತಿತ್ವ, ಅವರೊಬ್ಬ ಸಂತ, ಕೇವಲ ಅವರು ನಡೆಸಿದ ಅಹಿಂಸಾತ್ಮಕ ಸತ್ಯಾಗ್ರಹ ದಿಂದಲೇ ಬ್ರಿಟಿಷರು ದೇಶ ಬಿಟ್ಟು ಹೋಗಬೇಕಾಯಿತು ಎಂಬಂತಹ ವ್ಯಾಖ್ಯಾನಗಳು ನಡೆಯುತ್ತಲೇ ಇವೆ. ಅವರು ಹಲ್ಲಿಲ್ಲದ ಹಾವಿನಂತೆ ಎಂದು ಚಿತ್ರಿಸಿರುವುದು ಸರಿಯಲ್ಲ. ಗಾಂಧಿ ರಾಜಕೀಯ ತಂತ್ರಗಾರಿಕೆಯಲ್ಲಿ ಅತ್ಯಂತ ನಿಪುಣರಾಗಿದ್ದರು. ಜನಸಾಮಾನ್ಯರ ಭಾವನೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅವರ ಮಟ್ಟಕ್ಕೆ ತಲುಪಿ ಹೋರಾಟಗಳಿಗೆ ಸೆಳೆಯುತ್ತಿದ್ದರು. ಅವರನ್ನು ಜನತೆಯೂ ಸಹ ತಮ್ಮ ನಾಯಕ ಎಂದು ಅಪ್ಪಿಕೊಂಡರು. ಆದಿವಾಸಿಗಳ ಪ್ರದೇಶಗಳಿಗೆ ಭೇಟಿ ಕೊಟ್ಟಾಗ ಅವರ ಸ್ಥಿತಿ ಕಣ್ಣಾರೆ ಕಂಡು ಗಾಂಧಿ ತನ್ನ ಜೀವನವನ್ನೇ ಸರಳತೆಗೆ ಪರಿವರ್ತಿಸಿಕೊಂಡರು. ತಮ್ಮಂತೆ ಚಿಂತಿಸುವ ಸಮರ್ಪಿತ ನಾಯಕರನ್ನು ಎಂದೆಂದಿಗೂ ಜನ ಮಾನ್ಯ ಮಾಡುತ್ತಾರೆ. ಗಾಂಧಿಯವರ ಚಿಂತನೆ ಅವರ ಪ್ರತಿಪಾದನೆಗಳ ಬಗ್ಗೆ ಭಿನ್ನಾಭಿಪ್ರಾಯಗಳು ಇರುವುದು ಸಹಜ. ಅವು ಇರಬೇಕು. ಆದರೆ ಭಿನ್ನ ಅಭಿಪ್ರಾಯಗಳು ಮಹಾನ್ ಸಂಗ್ರಾಮದ ಪರಂಪರೆಯನ್ನು, ಅವರ ಕೊಡುಗೆಗಳನ್ನು ನಿರ್ಲಕ್ಷಿಸಲು ಕಾರಣ ಆಗಬಾರದು. ಗಾಂಧೀಜಿ ಚಿಂತನೆ, ಸಂಗ್ರಾಮದಲ್ಲಿ ವಹಿಸಿದ ಪಾತ್ರದ ಸರಿಯಾದ ಮೌಲ್ಯ ಮಾಪನ ಕಾಲದಿಂದ ಕಾಲಕ್ಕೆ ಅತ್ಯಗತ್ಯ' ಎಂದು ಹೇಳಿದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ನ ಪ್ರಮುಖ ಮೂರು ದಾರೆಗಳಿದ್ದು ಕಮ್ಯೂನಿಸ್ಟರ ನೇತೃತ್ವದ ಶ್ರಮಜೀವಿ ವರ್ಗದ ಆಂದೋಲನ, ಸಾಮಾಜಿಕ ನ್ಯಾಯಕ್ಕಾಗಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಚಳುವಳಿ ಕೂಡ ಅಷ್ಟೇ ಪ್ರಧಾನವಾದದ್ದು. ಸ್ವಾತಂತ್ರ ಸಂಗ್ರಾಮ ಮೊನಚು ತರುವಲ್ಲಿ ಕ್ರಾಂತಿಕಾರಿಗಳ ಕೊಡುಗೆ ಕೂಡ ಗಮನಾರ್ಹವಾದದ್ದು'.

ಭಾರತದ ವಿಮೋಚನೆಗಾಗಿ ಶ್ರಮಿಸಿದ ಗಾಂಧಿಯವರನ್ನು ಖಳನಾಯಕ ಎಂಬಂತೆ ಇಂದು ಕೆಲವರು ಬಿಂಬಿಸುತ್ತಿದ್ದಾರೆ. ಪಾಕಿಸ್ತಾನ ವಿಭಜನೆಗೆ ಗಾಂಧಿಯೇ ಕಾರಣ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಆ ವಿಭಜನೆ ಬ್ರಿಟಿಷರ ಕುತಂತ್ರದ ಫಲಿತಾಂಶ. ಈ ವಿಭಜನೆಯ ಅಪಾಯಗಳನ್ನು ಮುಂಗಂಡ ಗಾಂಧೀಜಿ ಮತೀಯತೆ ಆಧಾರದಲ್ಲಿ ದೇಶ ವಿಭಜಿಸುವುದಕ್ಕೆ ವಿರೋಧ ವಾಗಿದ್ದರು. ಸ್ವತಂತ್ರದ ಬೆನ್ನೆಲ್ಲೇ ಹೊತ್ತಿಕೊಂಡ ಹಿಂದೂ–ಮುಸ್ಲಿಂ ಕೋಮು ದಳ್ಳುರಿ ಆರಿಸುವುದು, ಸೌಹಾರ್ದ ನೆಲೆಸುವುದು ಅತಿಮುಖ್ಯ ಎನ್ನುವ ಕಾರಣದಿಂದಲೇ ದೆಹಲಿಯ ಸಂಭ್ರಮದಲ್ಲಿ ಪಾಲ್ಗೊಂಡಿರಲಿಲ್ಲ. ಅಂದು ಕೋಮುಗಲಭೆಗಳು ನಡೆಯುತ್ತಿದ್ದ ಬಂಗಾಳದ ಹಲವು ಪ್ರದೇಶಗಳ ಬೀದಿಬೀದಿಗಳಲ್ಲಿ ತೆರಳಿ ಸೌಹಾರ್ದತೆ ಶಾಂತಿ ಕಾಪಾಡಲು ವಿನಂತಿಸುತ್ತಿದ್ದರು. ಈ ಸಂದೇಶ ಇಂದಿಗೂ ಅತ್ಯಂತ ಪ್ರಸ್ತುತ ಎಂಬುದನ್ನು ನಾವು ಮರೆಯಬಾರದು' ಎಂದು ಹೇಳಿದರು.

ಈ ನುಡಿನಮನ ಕಾರ್ಯಕ್ರಮವನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ವ್ಯವಸ್ಥೆಗೊಳಿಸಿತ್ತು. ಕಾರ್ಯಕ್ರಮದಲ್ಲಿ ಮುಖ್ಯ

ಪುಟ 4 ಕ್ಕೆ

ಹಮಾಲಿ ಕಾರ್ಮಿಕರಿಂದ ಹಕ್ಕೊತ್ತಾಯ ಮೆರವಣಿಗೆ

ವರದಿ: ವಾ.ಉ.

ಹಳೆ ಬಂದರು ಸಗಟು ಮಾರುಕಟ್ಟೆಯ ಹಮಾಲಿ ಕಾರ್ಮಿಕರ ಹೊಸ ಕೂಲಿ ದರ ಪರಿಷ್ಕರಣೆ ಮತ್ತು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಅಕ್ಟೋಬರ್ 5ರಂದು ಹಳೆ ಬಂದರು ಸಗಟು ಮಾರುಕಟ್ಟೆಯಲ್ಲಿ ಹಮಾಲಿ ಕಾರ್ಮಿಕರು ಬಂದರು ಶ್ರಮಿಕ ಸಂಘದ ನೇತೃತ್ವದಲ್ಲಿ ಹಕ್ಕೊತ್ತಾಯ ನಡೆಸಿದರು.

ಬೆಳಗ್ಗೆ ಮಾರುಕಟ್ಟೆಯ ವ್ಯವಹಾರಗಳು ಆರಂಭಗೊಳ್ಳುತ್ತಿದ್ದಂತೆ ಬಂದರು ಕಾರ್ಮಿಕರ ಕಟ್ಟೆ ಬಳಿ ಜಮಾಯಿಸಿ ಘೋಷಣೆ ಕೂಗುತ್ತಾ ಪೋರ್ಟ್ ರಸ್ತೆ, ಕೆನರಾ ಚೇಂಬರ್ ರಸ್ತೆ, ಜೆಎಂ ರಸ್ತೆ, ವರ್ತಕ ವಿಳಾಸ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು.

ಈ ಸಂದರ್ಭ ಮಾತನಾಡಿದ ಬಂದರು ಶ್ರಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್, ಹಳೆ ಬಂದರನ್ನು ಎಪಿಎಂಸಿ ಉಪ ಮಾರುಕಟ್ಟೆ ಘೋಷಿಸಿ ಹಲವು ವರ್ಷಗಳಾಗಿವೆ ಆದರೆ ಇದುವರೆಗೆ ಯಾವುದೇ ಹಮಾಲಿ ಕಾರ್ಮಿಕರಿಗೆ ಕೃಷಿ ಉತ್ಪನ್ನ ಮಾರಾಟ ಇಲಾಖೆಯಿಂದ ಯಾವುದೇ ಸವಲತ್ತು ನೀಡಿಲ್ಲ. ಮಾರುಕಟ್ಟೆಯ ವರ್ತಕರು ಕೂಲಿ ಪರಿಷ್ಕರಿಸದೆ ಉದ್ಧಟತನದಿಂದ ವರ್ತಿಸುತ್ತಾ ಹಠಮಾರಿ ಧೋರಣೆ ತಳೆಯುತ್ತಿದ್ದಾರೆ. ವರ್ತಕರು ಕಾರ್ಮಿಕರ ತಾಳ್ಮೆ ಪರೀಕ್ಷಿಸಲು ಮುಂದಾಗದೆ ಕಾರ್ಮಿಕರ ಬೇಡಿಕೆಗಳ ಈಡೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ಪಿ.ಎಸ್.ವಿಲ್ಲಿ ವಿಲ್ಸನ್ ಕೂಡಾ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಸಂಘದ ಜೊತೆ ಕಾರ್ಯದರ್ಶಿ ಚಂದ್ರಹಾಸ್ ಬಬ್ಬುಕಟ್ಟೆ ಸ್ವಾಗತಿಸಿದರು. ಕೋಶಾಧಿಕಾರಿ ಹರೀಶ್ ಕೆರೆಬೈಲ್ ವಂದಿಸಿದರು.



ಶಿವಮೊಗ್ಗ ಜಿಲ್ಲಾ ಸಿಐಟಿಯು ಸಮ್ಮೇಳನ

ಸಿಐಟಿಯು ಜಿಲ್ಲಾ ಸಮ್ಮೇಳನವು ದಿನಾಂಕ 29–09–2019ರಂದು ಶಿವಮೊಗ್ಗ ನ್ಯಾಷನಲ್ ಕಾಮರ್ಸ್ ಕಾಲೇಜ್, ಚಂದನ ಹಾಲ್‌ನಲ್ಲಿ ಕಾ. ಎಸ್.ಬಿ. ಶಿವಶಂಕರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮ್ಮೇಳನದ ಆರಂಭದಲ್ಲಿ ಕಾ. ನಾರಾಯಣ್‌ರವರು ಪ್ರತಿನಿಧಿಗಳನ್ನು ಮತ್ತು ಸಮ್ಮೇಳನದಲ್ಲಿ ಭಾಗವಹಿಸಲು ಬಂದ ರಾಜ್ಯ ನಾಯಕರನ್ನು ಸ್ವಾಗತಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಎಚ್.ಎಸ್. ಸುನಂದ ಇವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸರ್ಕಾರ ಕಾರ್ಮಿಕರನ್ನು ಸಂಕಷ್ಟಕ್ಕೀಡು ಮಾಡಿದ ಸಂದರ್ಭದಲ್ಲಿ ಈ ಸಮ್ಮೇಳನ ನಡೆಯುತ್ತಿದ್ದು, ಈ ದೇಶದ ಕೈಗಾರಿಕೆಗಳು ಮುಚ್ಚಲ್ಪಡುತ್ತಿದ್ದು, ರೈತರು ಸಹ ಸಂಕಷ್ಟಕ್ಕೀಡಾಗಿದ್ದು ಆತ್ಮಹತ್ಯೆಗಳಿಗೆ ಶರಣಾಗುತ್ತಿದ್ದಾರೆ. ಒಂದೇ ದೇಶ ಒಂದೇ ಭಾಷೆ ಎನ್ನುವ ಭಾವನಾತ್ಮಕ ವಿಚಾರಗಳನ್ನು ಹೇಳಿ, ಜನರನ್ನು ದಿಕ್ಕೆಡಿಸುತ್ತಿರುವ ಪ್ರಯತ್ನ ಸಾಗಿದೆ ಎಂದರು. ಭದ್ರಾವತಿಯ ವಿ.ಐ.ಎಸ್.ಎಲ್., ಎಂ.ಪಿ.ಎಂ. ಕಾರ್ಖಾನೆಗಳ ಪರಿಸ್ಥಿತಿಗಳನ್ನು ವಿವರಿಸಿ, ಕೇಂದ್ರ ಬಿಜೆಪಿ ಸರ್ಕಾರವು ಬಂಡವಾಳಶಾಹಿಗಳ ಮತ್ತು ಭೂಮಾಲಕರ ಪರವಾಗಿ ಕಾರ್ಯನಿರ್ವಹಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಕಾ. ಸುನಂದ ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಳಿಸಿದರು. ಸಂಕಷ್ಟಗಳ ವಿರುದ್ಧ ನಿರಂತರ ಹೋರಾಟ ನಡೆಸ ಬೇಕೆಂದು ಕಾರ್ಮಿಕರಿಗೆ ಕರೆ ನೀಡಿದರು.

ಸಮ್ಮೇಳನವನ್ನು ಉದ್ದೇಶಿಸಿ ಮತ್ತೋರ್ವ ರಾಜ್ಯ ಕಾರ್ಯದರ್ಶಿಗಳಾದ ಕಾ. ಬಾಲಕೃಷ್ಣ ಶೆಟ್ಟಿ ಮಾತನಾಡಿ ಕಾರ್ಮಿಕರ ಪರವಾಗಿ ಹೋರಾಟಗಳ ಮೂಲಕ ಗಳಿಸಿದ ಕಾನೂನುಗಳನ್ನು ಈಗಿನ ಕೇಂದ್ರ ಸರ್ಕಾರವು ತಿದ್ದುಪಡಿ ಮಾಡಿ ಕಾರ್ಮಿಕರಿಗೆ ದ್ರೋಹ ಬಗೆಯುತ್ತಿದೆ ಎಂದರು. ಶಿಸ್ತುಬದ್ಧವಾಗಿ ಸಿಐಟಿಯುವನ್ನು ಸಂಘಟಿಸಿ, ಆ ಮೂಲಕ ಕಾರ್ಮಿಕ ಚಳುವಳಿಯನ್ನು ಬೆಳೆಸಿ, ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಹೋರಾಟಗಳನ್ನು ನಡೆಸಬೇಕಾಗಿದೆ ಎಂದರು. ಕಾ. ಜಿ.ಎಸ್. ನಾಗರಾಜ್, ಕಾ. ಲಕ್ಷ್ಮಿ ನಾರಾಯಣ್ ಮುಂತಾದ ಕಾರ್ಮಿಕ ಮುಖಂಡರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾ. ಅನಂತರಾಮ್‌ರವರು ಕರಡು ವರದಿಯನ್ನು ಮಂಡಿಸಿದರು. ಕರಡು ವರದಿಯ ಮೇಲೆ ಶೈಲಜಾ, ಶಾರದ, ನೇತ್ರಾವತಿ, ನಾಗೇಶ್, ಗೋವಿದರಾಜು ಮುಂತಾದವರು ಮಾತನಾಡಿದರು. ಕೊನೆಗೆ ಕಾ. ಬಾಲಕೃಷ್ಣ ಶೆಟ್ಟಿಯವರು ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸಿದರು.

ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು.

1) ಕಾರ್ಮಿಕರ ಸಂಕಷ್ಟಗಳ ಪರಿಹಾರಕ್ಕೆ ನಿರಂತರವಾಗಿ ಹೋರಾಡುವುದು.
2) ಕಾರ್ಮಿಕರ ಐಕ್ಯತೆ ಕಾಪಾಡುವುದು.
3) ಸದಸ್ಯರಾಗದವರನ್ನು ಸದಸ್ಯರನ್ನಾಗಿ ಮಾಡುವುದು ಮತ್ತು ಹೊಸ ಸಂಘಗಳನ್ನು ರಚಿಸುವುದು.
4) ಮುಚ್ಚಿರುವ ಭದ್ರಾವತಿಯ ಎಂ.ಪಿ.ಎಂ. ಕಾರ್ಖಾನೆಯನ್ನು ತೆರೆಯಲು ಒತ್ತಾಯಿಸುವುದು.
5) ಭಾಗಷಃ ಮುಚ್ಚಿರುವ ವಿಐಎಸ್‌ಎಲ್ ಕಾರ್ಖಾನೆಯನ್ನು ಖಾಸಗೀ ವಲಯಕ್ಕೆ ಹಸ್ತಾಂತರಿಸಲು ಕ್ರಮ ತೆಗೆದುಕೊಳ್ಳುತ್ತಿರುವ ಕೇಂದ್ರ ಸರ್ಕಾರದ ನೀತಿಯನ್ನು ವಿರೋಧಿಸುವುದು ಹಾಗೂ ಕಾರ್ಖಾನೆಯನ್ನು ಸಾರ್ವಜನಿಕ ಕ್ಷೇತ್ರದಲ್ಲೇ ಉಳಿಸಿಕೊಳ್ಳುವಂತೆ ಒತ್ತಾಯಿಸುವುದು.
6) ಅಸಂಘಟಿತ ಕಾರ್ಮಿಕರನ್ನು ಸಂಘಟಿಸಲು ಹೆಚ್ಚಿನ ಆದ್ಯತೆ ನೀಡುವುದು.
7) ಸಾರಿಗೆ ಕ್ಷೇತ್ರದಲ್ಲಿ ಖಾಸಗಿ ಮತ್ತು ಸಾರ್ವಜನಿಕ ವಿಭಾಗಗಳಲ್ಲಿ ನಮ್ಮ ಸಂಘಟನೆಯನ್ನು ವಿಸ್ತರಿಸುವುದು.
8) ಸಂಘಗಳನ್ನು ಪ್ರಜಾಸತ್ತಾತ್ಮಕವಾಗಿ ಮುನ್ನಡೆಸುವುದು. ಸದಸ್ಯರ ಅಭಿಪ್ರಾಯಗಳಿಗೆ ಮನ್ನಣೆ ಕೊಡುವುದು.
9) ಸಿಐಟಿಯು ತಾಲೂಕು ಮಟ್ಟದ ಸಂಚಾಲನಾ ಸಮಿತಿಗಳನ್ನು ರಚಿಸುವುದು ಹಾಗೂ ಕ್ರಿಯಾಶೀಲಗೊಳಿಸುವುದು.
10) ರೈತರ ಮತ್ತು ಕೂಲಿಕಾರರ ಹೋರಾಟಗಳಿಗೆ ಬೆಂಬಲ ನೀಡುವುದು.
11) ಕೋಮುವಾದದ ವಿರುದ್ಧ ಹೋರಾಡುವುದು.
12) 2020 ಮೇ ತಿಂಗಳವರೆಗೆ ವಿವಿಧ ರೀತಿಯಲ್ಲಿ ಸಿಐಟಿಯು ಸುವರ್ಣ ಮಹೋತ್ಸವ ಆಚರಿಸುವದು.

ಮುಂದಿನ ಮೂರು ವರ್ಷಕ್ಕಾಗಿ ಈ ಕೆಳಕಂಡ ಹೊಸ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು.

ಅಧ್ಯಕ್ಷರು: ಕಾ. ಎಸ್.ಬಿ. ಶಿವಶಂಕರ್, **ಉಪಾಧ್ಯಕ್ಷರು:** ಕಾ. ಅನಂತರಾಮು. ಎಂ., ಕಾ ಅಕ್ಕಮ್ಮ, ಕಾ. ಬಂಗಾರಪ್ಪ, ಕಾ. ತುಳಸಿಪ್ರಭಾ, **ಪ್ರಧಾನ ಕಾರ್ಯದರ್ಶಿ:** ಎಂ. ನಾರಾಯಣ, **ಕಾರ್ಯದರ್ಶಿಗಳು:** ಕಾ. ಹನುಮಮ್ಮ, ಕಾ. ಪ್ರಶಾಂತ್, ಕಾ. ಹನುಮಂತಪ್ಪ, ಕಾ. ಚಂದ್ರಪ್ಪ **ಖಜಾಂಚಿ :** ಕಾ. ಕೆ. ಪ್ರಭಾಕರನ್.

ಸಮಿತಿಯ ಸದಸ್ಯರಾಗಿ 24 ಸಂಗಾತಿಗಳನ್ನು ನಂತರ ಆಯ್ಕೆ ಮಾಡಲು ತೀರ್ಮಾನಿಸಲಾಯಿತು. ಕೊನೆಯಲ್ಲಿ ಕಾ. ಹನುಮಮ್ಮ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.



ಗಾಂಧೀಜಿ ಚಿಂತನೆ, ಸಂಗ್ರಾಮದಲ್ಲಿ ... ಪುಟ 3 ರಿಂದ

ಅತಿಥಿಗಳಾಗಿ ಹಿರಿಯ ರಂಗಕರ್ಮಿ, ಸಾಮಾಜಿಕ ಕಾರ್ಯಕರ್ತರಾದ ಯೇಸು ಪ್ರಕಾಶ್, ಚಿಂತಕ ಡಾ. ವಿಠ್ಠಲ ಭಂಡಾರಿ, ಡಾ. ಕೃಷ್ಣಪ್ಪ ಕೊಂಚಾಡಿ, ಕುಣಬಿ ಸಮಾಜದ ಯುವ ಮುಖಂಡರಾದ ಲಕ್ಷ್ಮಣ್ ರವರು, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರು ಹಾಗೂ ಆದಿವಾಸಿ ಸಂಘದ ಮುಖಂಡರಾದ ಶ್ರೀಧರ ನಾಡ, ಏಳಿಗೆ ನಾಗರಾಜ್, ಮಂಜುನಾಥ್, ಸೌಭಾಗ್ಯ ಮುಂತಾದವರು ಹಾಜರಿದ್ದರು.

ಕೊನೆಯಲ್ಲಿ ಆದಿವಾಸಿಗಳ ವಿಶಿಷ್ಟ ಪ್ರಶ್ನೆಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯಗಳು ನಡೆದವು. ಈ ಡಿಸೆಂಬರ್ ತಿಂಗಳಲ್ಲಿ ನಡೆಯಬೇಕಿರುವ ಯೋಜಿತ ರಾಜ್ಯ ಸಮ್ಮೇಳನದ ಪೂರ್ವ ಸಿದ್ಧತೆಗಳ ಕುರಿತು ವಿವರವಾಗಿ ಚರ್ಚಿಸಲಾಯಿತು.

ಕರ್ನಾಟಕ ಕುಣಬಿ ಸಮಾಜ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷರಾದ ಮಂಜಪ್ಪ ವಕೀಲರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಏಳಿಗೆ ನಾಗರಾಜ್ ಅವರ ಹಾಡಿನೊಂದಿಗೆ ಆರಂಭಗೊಂಡಿದ್ದ ಸಭೆ ಶಿವಮೊಗ್ಗ ಜಿಲ್ಲಾ ಸಂಚಾಲಕರಾದ ಶ್ರೀಧರ ನಾಡ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ: ಏಳಿಗೆ ನಾಗರಾಜ

ಭಗತ್ ಸಿಂಗರ ಜೀವನ ಚರಿತ್ರೆ ಪಠ್ಯವಾಗಲಿ

ಸಮಾಜದ ಕಟ್ಟಕಡೆಯ ಜನತೆ ಸಾಮಾಜಿಕ ತಾರತಮ್ಯಕ್ಕೊಳಗಾಗದೆ ಆರ್ಥಿಕ, ರಾಜಕೀಯ ಅವಕಾಶಗಳನ್ನು ಪಡೆದು ಮುಖ್ಯವಾಹಿನಿನಿಗೆ ಬಂದು ತಾರತಮ್ಯದ ಸಮಾಜ ನಿರ್ಮೂಲನೆಯಾದಾಗ ಭಗತ್ ಸಿಂಗರ ಕನಸು ಸಾಕಾರಗೊಳ್ಳಲು ಸಾಧ್ಯ ಎಂದು ಚಿಂತಕ ಶೇಖರ್ ನಾಯ್ಕ್ ಹೇಳಿದರು.

ಸ್ಥಳೀಯ ಸಂಕಲ್ಪ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ತಾಲ್ಲೂಕು ಸಮಿತಿ ಹಮ್ಮಿಕೊಂಡಿದ್ದ ಭಗತ್ ಸಿಂಗರ 112 ನೇ ಜನ್ಮ ದಿನಾಚರಣೆಯಲ್ಲಿ ಮುಖ್ಯ ಉಪನ್ಯಾಸಕರಾಗಿ ಮಾತನಾಡುತ್ತ 23 ವಯಸ್ಸಿನಲ್ಲಿಯೇ ನೇಣುಗಂಬಕ್ಕೇರಿದ ಮಹಾನ್ ಚೇತನ. ಮತೀಯವಾದ, ಮೂಲಭೂತವಾದಿಗಳ ಅರಾಜಕತೆಯಲ್ಲಿ ಸಿಕ್ಕು ಭಾರತ ನಲುಗಿಹೋಗಿದೆ, ಹೆಣ್ಣು ಮಕ್ಕಳ ಮೇಲಿನ ನಿರಂತರ ಲೈಂಗಿಕ ದೌರ್ಜನ್ಯ, ಅತಿವೃಷ್ಟಿ ಅನಾವೃಷ್ಟಿಯಿಂದ ನಲುಗಿದ ರೈತಾಪಿ ವರ್ಗ, ಉದ್ಯೋಗ ಸಿಗದೆ ಬೀದೀಯಲ್ಲಿ ಅಲೆಯುವ ಯುವಜನತೆ, ಧರ್ಮದ ಹೆಸರಿನಲ್ಲಿ ರಾಜಕೀಯ, ಈ ದೇಶದ ಭವಿಷ್ಯಕ್ಕೆ ಮಾರಕವಾಗಿ ಪರಿಣಮಿಸಿವೆ. ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸದ ಆಡಳಿತ ವರ್ಗ, ಮೌಢ್ಯ ಭರಿತ ರಾಜಕೀಯದ ವೈಭವೀಕರಣದಲ್ಲಿ ತೊಡಗಿರುವುದು ನಾಚಿಕೆಗೇಡಿನ ಸಂಗತಿ ಎಂದರು, ಪ್ರಗತಿಪರ ಸಮಾಜಕ್ಕಾಗಿ ಪ್ರಾಥಮಿಕ ಹಂತದಿಂದಲೇ ಭಗತ್ ಸಿಂಗರ ಜೀವನ ಚರಿತ್ರೆಯನ್ನು ಪಠ್ಯವಾಗಿ ಬೋಧಿಸಿ ಎಂದು ಸರ್ಕಾರಕ್ಕೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಎಸ್.ಎಫ್.ಐ. ನ ಜಿಲ್ಲಾಧ್ಯಕ್ಷರಾದ ಅಮರೇಶ ಕಡಗದ ಮಾತನಾಡಿದರು. ಕಾಲೇಜ ಉಪನ್ಯಾಸಕರಾದ ಶ್ರೀ ನಾಗರಾಜ, ಶ್ರೀ ಅಶೋಕ್ ಹಾಗೂ ಎಲ್ಲಾ ಅತಿಥಿಗಳು ಸೇರಿ ಉದ್ಘಾಟನೆಯನ್ನು ನೇರವೇರಿಸಿದರು. ಜಿಲ್ಲಾ ಉಪಾಧ್ಯಕ್ಷ ಬಾಳಪ್ಪ ಹುಲಿಹೈದರ, ಕಾಲೇಜಿನ ಪ್ರಾಚಾರ್ಯರಾದ ಬಸವರಾಜ ಶಿರಿಗೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿರೇಶ ಹಿರೇಮಠ, ಹನುಮೇಶ ಮತ್ತು ಇತರರು ಇದ್ದರು.



ಎಸ್.ಎಲ್. ಭೈರಪ್ಪ ನವರ ಅಸಂಬದ್ಧ ಪ್ರಲಾಪಗಳಿಗೆ ಜನವಾದಿ ಮಹಿಳಾ ಸಂಘದ ಖಂಡನೆ:

ಕನ್ನಡ ನಾಡು ನೆರೆ, ಬರದಲ್ಲಿ ಬಳಲಿ ಬೆಂಡಾಗಿದೆ. ಸಂತ್ರಸ್ತರಿಗೆ ಹಸಿವು ಮಾತ್ರ ಹಾಸಿ ಹೊದೆಯಲು ಉಳಿದ ಆಸ್ತಿ. ಹೆಚ್ಚುತ್ತಿರುವ ನಿರುದ್ಯೋಗ ಬಡತನ ಮತ್ತು ವಲಸೆ, ಅನ್ನದಾತರ ಸಂಕಟ ಇವುಗಳೆಲ್ಲ ಮನುಷ್ಯರಾದವರಿಗೆ ಅರ್ಥವಾಗುವುದು ಸಹಜ.

ಆದರೆ ಮೈಸೂರು ದಸರಾ ಉತ್ಸವದ ಉದ್ಘಾಟನೆ ಮಾಡಿದ ಸಾಹಿತಿ ಭೈರಪ್ಪನವರಿಗೆ ಮಾತ್ರ ಇದಾವುದೂ ಕಾಣಿಸಲೇ ಇಲ್ಲ. ಬಹುಶಃ ಅವರು ಶುದ್ಧ(!?) ಸಾಹಿತಿಗಳಾದ್ದರಿಂದ ನಾಡಿನ ಸಮಸ್ಯೆ ಸಂಕಟಗಳು ಅವರಿಗೆ ಬೇಕಿಲ್ಲ. ಆದರೆ ಒಬ್ಬ ಸಾಹಿತಿಗೆ ಇರಬೇಕಾದ ಕನಿಷ್ಠ ಜ್ಞಾನವೂ ಇಲ್ಲದ ಭೈರಪ್ಪ ನಮ್ಮ ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ. ಮಾತ್ರವಲ್ಲ ತಾಯಿಯನ್ನು ಅವಮಾನಿಸಿದ್ದಾರೆ. ಮುಟ್ಟಾದ ಮಹಿಳೆ ದೇಗುಲಕ್ಕೆ ಹೋಗಬಾರದೆಂಬ ಅವರ ನಿಲುವು ತಾಯಿ ದ್ರೋಹಿಯಾಗಿದೆ. ಮುಟ್ಟಿನಲ್ಲಿಯೇ ಜಗ ನಾಟಿದೆ. ಇವರು ಹುಟ್ಟಿದ್ದು ಹೇಗೆ? ಎಂಬ ಪ್ರಶ್ನೆಗೆ ಉತ್ತರಿಸಲಿ. ಅಯ್ಯಪ್ಪ ದೇವಳದೊಳಗೆ ಮಹಿಳೆಗೆ ಪ್ರವೇಶ ಕೊಡಬೇಕು ಎಂದು ಸುಪ್ರಿಂ ಕೋರ್ಟಿಗೆ ಹೋಗಿದ್ದು ಯಾರು ಎಂಬ ಅರಿವು ಭೈರಪ್ಪಗಿದೆಯೆ?

ಕೇರಳದ ಯಂಗ್ ಲಾಯರ್ಸ್ ಹೆಸರಿನಲ್ಲಿ ಆರ್ ಎಸ್ ಎಸ್ ಕಾರ್ಯಕರ್ತರು ಕೋರ್ಟಿಗೆ ಹೋಗಿದ್ದರು. ಸುಪ್ರಿಂ ಕೋರ್ಟು ಸಂವಿಧಾನವನ್ನು ಎತ್ತಿ ಹಿಡಿದು ತೀರ್ಪಿತ್ತಿದೆ ಮತ್ತು ಕೇರಳ ಸರಕಾರ ಸುಪ್ರೀಂ ಕೋರ್ಟಿನ ತೀರ್ಪು ಜಾರಿ ಮಾಡಿದೆ. ಇದಕ್ಕೆ ಕಮ್ಯುನಿಸ್ಟರ ಮೇಲೆ ಯಾಕೆ ಉರಿದುಕೊಳ್ಳುವುದು ಈ ಭೈರಪ್ಪ?

ಭಾರತದ ಸಂವಿಧಾನದಲ್ಲಿ ಆಸ್ತಿಕರಿಗೂ ನಾಸ್ತಿಕರಿಗೂ ಸಮಾನ ಅವಕಾಶ ಹಾಗೂ ಹಕ್ಕು ಕರ್ತವ್ಯಗಳಿವೆ. ಆದರೆ ದೇವರ ಅಸ್ತಿತ್ವ ನಂಬದವರನ್ನು ಅಪಮಾನಿಸುವ ಹಕ್ಕು ಈ ಭೈರಪ್ಪಗೆ ಕೊಟ್ಟಿದ್ದು ಯಾರು? ಭೈರಪ್ಪನವರ ಇಂತಹ ಅಯೋಗ್ಯ ಮಾತುಗಳನ್ನು ಕನ್ನಡ ನಾಡು ಯಾವತ್ತೂ ಸಹಿಸಿಕೊಳ್ಳುವುದಿಲ್ಲ. ಚಾರಿತ್ರಿಕ ತಿಳುವಳಿಕೆ ಇಲ್ಲದಿದ್ದರೆ ಶರಣ ಸೂಫಿ ಸಂತರ ಮತ್ತು ಕುವೆಂಪು ಅವರಂಥ ಅಸಂಖ್ಯ ಸಾಹಿತಿಗಳ ಕೃತಿಗಳನ್ನಾದರೂ ಓದಲಿ.

ಕನ್ನಡ ಸಂಸ್ಕೃತಿಯು ಯೋಗಿಯನ್ನು, ಮಹಿಳೆಯನ್ನು ಸಮಸ್ತ ಶ್ರಮಿಕರನ್ನು ಗೌರವಿಸಿದೆ.

ಕನ್ನಡ ನಾಡಿನ ಜನ ಬರ ನೆರೆಯಲ್ಲಿ ನೊಂದಾಗ ಪ್ರಭುತ್ವಕ್ಕೆ ಬುದ್ಧಿ ಹೇಳಿ ಜನರ ನೋವಿಗೆ ಮಿಡಿವಂತೆ ತಿಳಿ ಹೇಳಬೇಕಾದ ಇವರು ಮುಖ್ಯ ಮಂತ್ರಿ ಮತ್ತು ಕೇಂದ್ರ ಮಂತ್ರಿಗಳನ್ನು ಅಕ್ಕಪಕ್ಕ ಕೂಡಿಸಿಕೊಂಡು ಮಾತಾಡಿದ್ದೇನು ಇವರು? ಈವರೆಗೆ ನೆರೆ ಬರ ಸಂತ್ರಸ್ತರಿಗೆ ಒಂದು ಪೈಸೆ ನೆರವು ಯಾಕೆ ಮಾಡಿಲ್ಲ ಎಂದು ಕೇಳುವ ಎದೆಗಾರಿಕೆ ಯಾಕೆ ತೋರಿಸಲಿಲ್ಲ? ಭೈರಪ್ಪನವರು ಹೊಟ್ಟೆಗೆ ತಿನ್ನುವ ವೆಜ್ ಆಹಾರ ಬೆಳೆದು ಕೊಡುವುದು ಇದೇ ನೆರೆ ಬರದಲ್ಲಿ ನರಳುತ್ತಿರುವ ಜನ. ಆದರೆ ಭೈರಪ್ಪ ಮಾತ್ರ ಉಂಡ ಮನೆಯ ಜಂತಿ ಎಣಿಸುವಂತೆ ಕನ್ನಡ ನಾಡನ್ನು ಅಪಮಾನಿಸಿದ್ದಾರೆ.

ಅವರ ಅವೈಜ್ಞಾನಿಕ ವಿಚಾರ ಧಾರೆ, ಸಂವಿಧಾನ ವಿರೋಧೀ ಮಾತುಗಳು, ಮೌಢ್ಯ, ಕೋಮುವಾದ ಬಿತ್ತುವ ಮತ್ತು ಮಹಿಳಾ ವಿರೋಧಿ ನಡೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ.

ನಿವೇಶನ ರಹಿತರಿಗೆ ನಿವೇಶನ ಮಂಜೂರು ಮಾಡಲು ಡಿವೈಎಫ್‌ಐ ಆಗ್ರಹ

ಸಂಡೂರು ತಾಲೂಕಿನ ತೋರಣಗಲ್ಲು ಮತ್ತು ತಾಳೂರು ಗ್ರಾಮಗಳಲ್ಲಿನ ವಸತಿ ನಿವೇಶನ ರಹಿತ ಕಾರ್ಮಿಕರು ಕಳೆದ 25–30 ವರ್ಷಗಳಿಂದ ಅಪಾಯಕಾರಿ ಕಾಲುವೇ ಮತ್ತು ಇತರ ಸ್ಥಳಗಳಲ್ಲಿ ಗುಡಿಸಲುಗಳನ್ನು ನಿರ್ಮಿಸಿ ಕೊಂಡು ವಾಸವಾಗಿದ್ದಾರೆ. ಕೈಗಾರಿಕಾ ಪ್ರದೇಶವಾಗಿದ್ದರಿಂದ ಖಾಲಿ ನಿವೇಶನಗಳ ಬೆಲೆ ಗಗನಕ್ಕೆ ಏರಿವೆ. ಬಡ ಕಾರ್ಮಿಕರು ಖಾಲಿ ನಿವೇಶನ ಪಡೆಯುವದು ಅಸಾಧ್ಯವಾಗಿದೆ. ಗ್ರಾಮ ಪಂಚಾಯತಿ ಮತ್ತು ಸಂಬಂದಪಟ್ಟ ಅಧಿಕಾರಿಗಳಿಗೆ ನಿವೇಶನ ನೀಡಲು ಹಲವಾರು ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ಭೂ ಮಾಲಿಕರು ಭೂಮಿ ನೀಡುವದಾದರೆ ಇಲಾಖೆಗಳು ಭೂಮಿಯನ್ನು ನಿವೇಶನವಾಗಿ ಪರಿವರ್ತಿಸಿ ನೀಡುವದಾಗಿ ಭರವಸೆ ನೀಡಿದ್ದರು. ತೋರಣಗಲ್ಲು ಮತ್ತು ತಾಳೂರು ಗ್ರಾಮದ ಕೃಷಿ ಸಾಗವಳಿ ರಹಿರ ವಸತಿಗೆ ಯೋಗ್ಯವಾದ ಭೂಮಿಯನ್ನು ನೀಡಲು ಮುಂದೆ ಬಂದಿದ್ದಾರೆ. ಸಂಭಂದಿಸಿದ ದಾಖಲೆಗಳನ್ನು ಒಪ್ಪಿಗೆ ಪತ್ರದೊಂದಿಗೆ ಒದಗಿಸಲಾಗಿದೆ. ಕೂಡಲೆ ವಸತಿ ನಿವೇಶನಕ್ಕಾಗಿ ಭೂಮಿಯನ್ನು ಪಡೆದು ನಿವೇಶನ ನೀಡಲು ಆಗ್ರಹಿಸಲಾಯಿತು.

ಕವನ

ಸ್ವಚ್ಛ ಭಾರತದ ಬೀದಿಗಳಲ್ಲಿ

ಸ್ವಚ್ಛ ಭಾರತದ ಬೀದಿಗಳಲಿ
ಕೊಳೆತು ನಾರುತಿದೆ ಮನದ ಕಸ
ಜಾತಿರೋಗದ ಭೀತಿಯ ನೆರಳಲಿ
ನಲುಗುತ್ತಿದೆ ನವ ಭಾರತವು

ಮಲದ ಗುಂಡಿಯಲಿ ಮುಳುಗಿ ಸತ್ತವರ
ಬದುಕು ಆಗಿ ಹೋಯಿತು ನರಕ
ಹಂದಿ, ನಾಯಿಗಳ ವಾಸಸ್ಥಾನ
ದಲಿತ ಕೇರಿಯ ಹಿಂದೂಸ್ಥಾನ

ಕೋಟಿ ಕೋಟಿ ಹಣ ಕರಗಿ ಹೋಯಿತು
ಜಾಹಿರಾತುಗಳ ಶೋಕಿಯಲಿ
ಗಾಂಧಿಯ ಭಸ್ಮ ಕಳೆದು ಹೋಯಿತು
ಬಾಜಾ, ಭಜಂತ್ರಿ ಭಜನೆಯಲಿ

ಮನದ ಮಾತುಗಳು ಮಲಿನವಾಗಿವೆ.
ಮಲ್ಲಿಗೆ ಹೂವು ಹೊಲಸು ನಾರುತಿವೆ
ಮಾನವೀಯತೆಯ ಮೌಲ್ಯಗಳೆಲ್ಲಾ
ಕಸದ ಗುಂಡಿಯಲಿ ಕೊಳೆಯುತಿವೆ.

ಗಂಗಾ, ಯಮುನಾ, ತುಂಗಭದ್ರೆಯಲಿ
ತುಂಬಿ ಹರಿದಿದೆ ಮಾಲಿನ್ಯ
ಭವ್ಯ ಭಾರತದ ಮನೆ, ಮನದಲ್ಲಿ
ಮೌಢ್ಯದ ಕೊಳೆಯು ಕೊಳೆಯುತಿದೆ.

ಮನದ ಮಾಲಿನ್ಯ ತೊಳೆಯದಿದ್ದರೆ
ಆಗದು ಸ್ವಚ್ಛ ಭಾರತವು
ದಲಿತರ ಬದುಕು ಹಸನವಾದರೆ
ಅದುವೇ ಸ್ವಚ್ಛ ಭಾರತವು.

–ಹುಲಿಕಟ್ಟಿ ಚನ್ನಬಸಪ್ಪ.

ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ದುಡಿಮೆಗಾರರ ಸಂಕಷ್ಟಗಳ ವಿರುದ್ಧ
ಪ್ರಚಾರ ಮತ್ತು ಪ್ರತಿಭಟನೆ



ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯ ಕರೆಯ ಮೇರೆಗೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು 2019 ರ ಅಕ್ಟೋಬರ್ ತಿಂಗಳಲ್ಲಿ ಹಳ್ಳಿ ಹಳ್ಳಿಗಳಿಗೆ ಸಂಚರಿಸಿ, ಗ್ರಾಮೀಣ ಬಡವರಿಗೆ, ಹೆಚ್ಚುತ್ತಿರುವ ಅವರ ಬದುಕಿನ ಸಂಕಷ್ಟಗಳ ಮೂಲ ಕಾರಣವೇನು ಎಂಬುದನ್ನು ಮನವರಿಕೆ ಮಾಡಿ ತಾಲ್ಲೂಕಾ ಕೇಂದ್ರದಲ್ಲಿ ಅಕ್ಟೋಬರ್ 23 ರಂದು ನಡೆಯಲಿರುವ ಸಾಮೂಹಿಕ ಧರಣಿಯಲ್ಲಿ ಅವರನ್ನು ಪಾಲ್ಗೊಳಿಸಲು ತೀರ್ಮಾನಿಸಿದೆ.

ಹೆಚ್ಚುತ್ತಿರುವ ನಮ್ಮ ಬಡತನಕ್ಕೆ, ನಮ್ಮ ವಿದ್ಯಾವಂತ ಮಕ್ಕಳ ನಿರುದ್ಯೋಗಕ್ಕೆ, ಪ್ರವಾಹ ಪೀಡಿತರು ಬೀದಿ ಪಾಲಾಗಿರುವುದಕ್ಕೆ, ದಲಿತರು, ಅಲ್ಪ ಸಂಖ್ಯಾತರು, ಮಹಿಳೆಯರು ಮತ್ತು ಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳಿಗೆ ನಮ್ಮ ಹಣೆ ಬರಹ ಕಾರಣವಲ್ಲ, ಪ್ರಧಾನಿ ಮೋದಿಯವರ ಕೇಂದ್ರ ಸರ್ಕಾರದಿಂದ ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪನವರ ರಾಜ್ಯ ಸರ್ಕಾರದಿಂದ ನಾವೆಲ್ಲರೂ ಮೋಸ ಹೋಗಿದ್ದೇವೆ, ಅವರು ಕೊಟ್ಟ ಭರವಸೆಗಳನ್ನು ಅವರೇ ಮರೆತುಬಿಟ್ಟಿದ್ದಾರೆ. ನಮಗೆ ಒಳ್ಳೆಯ ದಿನಗಳು ಬರಲಿಲ್ಲ. ನಮ್ಮ ವಿದ್ಯಾವಂತ ಮಕ್ಕಳಿಗೆ ನೌಕರಿ ಸಿಗಲಿಲ್ಲ.

ಶ್ರೀಮಂತರು ಮಾತ್ರ ಇನ್ನೂ ಹೆಚ್ಚು ಶ್ರೀಮಂತರಾದರು. ಅವರು ಬಿ.ಜೆ.ಪಿ ಸರ್ಕಾರಗಳಿಂದ ಸಿಕ್ಕಾಪಟ್ಟೆ ಲಾಭ ಮಾಡಿಕೊಂಡರು. ಅವರು ಬಿಜೆಪಿಯ ಖಾಯಂ ಪ್ರಚಾರಕರಾದರು. ಮೋದಿ ಮಾತುಗಳನ್ನು ನಂಬಿ ಮತ ನೀಡಿದ ಗ್ರಾಮೀಣ ಬಡವರು ಮಾತ್ರ ಸಂಕಷ್ಟಕ್ಕೆ ಒಳಗಾದರು.

ನಿರ್ಗತಿಕರಾದ ನೆರೆ ಸಂತ್ರಸ್ತರು:

ಹಿಂದೆಂದೂ ಕಂಡರಿಯದ ಭೀಕರ ಪ್ರವಾಹ ರಾಜ್ಯದ ಬಹುತೇಕ ಪ್ರದೇಶಗಳನ್ನು ಆವರಿಸಿ ಕೊಂಡಿತು. ನೂರಾರು ಮಂದಿ ವೃದ್ದರು, ಮಹಿಳೆಯರು ಮತ್ತು ಮಕ್ಕಳು ಸಾವನ್ನಪ್ಪಿದರು.

ಸಾವಿರಾರು ಮನೆಗಳು, ಜಾನುವಾರುಗಳು ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋದವು. ಲಕ್ಷಾಂತರ ಜನ ನಿರ್ಗತಿಕರಾದರು. ಅವರೆಲ್ಲರೂ ಬಡವರು, ಸುಮಾರು 8 ಲಕ್ಷ ಎಕರೆ ಕೃಷಿ ಭೂಮಿ ಹಾಳಾಗಿದೆ. ರೈತರು, ಕೂಲಿಕಾರರು ಪರದಾಡುತ್ತಿದ್ದಾರೆ. ಪುನರ್ವಸತಿ ಕೇಂದ್ರಗಳಲ್ಲಿ ಇರುವವರಿಗೆ ಸರಿಯಾಗಿ ಊಟ–ಉಪಚಾರ ಸಿಗುತ್ತಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಂತ್ರಸ್ತರ ಕಣ್ಣೀರು ಕಾಣುತ್ತಿಲ್ಲ.

ಈ ನಡುವೆ ಕೇಂದ್ರ ಗೃಹಮಂತ್ರಿ ಹಾಗೂ ಹಣಕಾಸು ಸಚಿವೆ ಬಂದು ವೈಮಾನಿಕ ಸಮೀಕ್ಷೆ ನಡೆಸಿ ಹೋದರು. ಆದರೆ ಇದುವರೆಗೂ ಕೇಂದ್ರ ಬಿಜೆಪಿ ಸರ್ಕಾರ ಒಂದು ರೂಪಾಯಿ ನೆರವನ್ನೂ ಬಿಡುಗಡೆ ಮಾಡಿಲ್ಲ. ಇತ್ತೀಚೆಗೆ ಪ್ರಧಾನಿ ಮೋದಿಯವರೂ ಸಹ ಒಮ್ಮೆ ಬೆಂಗಳೂರಿಗೆ ಚಂದ್ರಯಾನ ವೀಕ್ಷಿಸಲು ಬಂದಿದ್ದರು. ಆದರೆ ಅವರು ರಾಜ್ಯದ ಸಂತ್ರಸ್ತರ ಬಗ್ಗೆ ಪ್ರಸ್ತಾಪಿಸಲಿಲ್ಲ. ದಿನಬೆಳಗಾದರೆ ಮೋದಿಯವರು ವಿದೇಶಕ್ಕೆ ಹಾರುತ್ತಾರೆ. ಮಜಾ ಮಾಡುತ್ತಾರೆ. ತಮ್ಮ ದೇಶವಾಸಿಯರು ಪ್ರವಾಹಕ್ಕೆ ಸಿಲುಕಿ ಎಲ್ಲವನ್ನು ಕಳೆದುಕೊಂಡು ರೋಧಿಸುತ್ತಿರುವುದು ಅವರಿಗೆ ನೆನಪಾಗುವುದಿಲ್ಲ. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಅಗತ್ಯ ನೆರವನ್ನು ಪಡೆಯಲು ಯಡಿಯೂರಪ್ಪನವರು ಮುಂದಾಗುತ್ತಿಲ್ಲ.

ಉದ್ಯೋಗ ಖಾತ್ರಿ ಯೋಜನೆಗೆ ಅನುದಾನ ಕಡಿತ:

ಹಿಂದೆ ಕಾಂಗ್ರೆಸ್ ಸರ್ಕಾರ ಆರಂಭಿಸಿದ ಮತ್ತು ಈಗ ಬಿಜೆಪಿ ಸರ್ಕಾರ ಭಾರೀ ರಭಸದಿಂದ ಜಾರಿಗೊಳಿಸುತ್ತಿರುವ ಉದಾರೀಕರಣದ ನೀತಿಗಳಿಂದ ದೇಶದ ಕೃಷಿ ಕ್ಷೇತ್ರ ತೀವ್ರ ಬಿಕ್ಕಟ್ಟಿಗೆ ಒಳಗಾಗಿದೆ. ರೈತರ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ನಿಗದಿಪಡಿಸಿರುವುದರಿಂದ ಅವರು ಬೇಸಾಯ ಮಾಡುವುದನ್ನೇ ಕಡಿಮೆ ಮಾಡುತ್ತಿದ್ದಾರೆ. ಅದರ ಪರಿಣಾಮವಾಗಿ ಕೃಷಿಕ ಕೂಲಿಕಾರರಿಗೆ ಕೃಷಿ ರಂಗದಲ್ಲಿ ಕೆಲಸ ಸಿಗದಂತಾಗಿ ಗ್ರಾಮೀಣ ನಿರುದ್ಯೋಗ ಉಲ್ಬಣಗೊಂಡಿದೆ.

ಗ್ರಾಮೀಣ ಕೆಲಸಗಾರರಿಗೆ ವರ್ಷದಲ್ಲಿ 100 ದಿನಗಳ ಕೆಲಸವನ್ನಾದರೂ ಒದಗಿಸುವ ಉದ್ದೇಶದಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿ ಮಾಡಲಾಗಿತ್ತು. ಇದರಿಂದಾಗಿ ಲಕ್ಷಾಂತರ ಗ್ರಾಮೀಣ ಬಡವರ ಆದಾಯ ಹೆಚ್ಚಾಗಿದೆ. ಗ್ರಾಮೀಣ ಕೂಲಿ ಹೆಚ್ಚಾಗಿದೆ. ಅವರ ಸಾಮೂಹಿಕ ಚೌಕಾಸಿಯ ಶಕ್ತಿ ಬಲಗೊಂಡಿದೆ. ವಲಸೆ ಹೋಗುವುದು ಕಡಿಮೆಯಾಗಿದೆ.

ಆದರೆ ಮೋದಿ ಸರ್ಕಾರಕ್ಕೆ ಮೊದಲಿನಿಂದಲೂ ಈ ಯೋಜನೆಯ ಬಗ್ಗೆ ಆಸಕ್ತಿ ಇರಲಿಲ್ಲ. ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಕೇಂದ್ರ ಬಿಜೆಪಿ ಸರ್ಕಾರ ಗಮನ ನೀಡಲಿಲ್ಲ. ಯೋಜನೆಗೆ ಪ್ರತಿವರ್ಷ ಬಜೆಟ್ ಅನುದಾನವನ್ನು ಹೆಚ್ಚಿಸಿ ಯೋಜನೆಯನ್ನು ವಿಸ್ತರಿಸುವ ಬದಲಾಗಿ ಮೋದಿ ಸರ್ಕಾರ ಪ್ರತಿ ವರ್ಷ ಅನುದಾನವನ್ನು ಕಡಿತ ಮಾಡುತ್ತಿದೆ. ಕೆಲಸಗಾರರಿಗೆ ಸಕಾಲದಲ್ಲಿ ಕೂಲಿ ಹಣ ಸಂದಾಯವಾಗುವಂತೆ ಕಾಳಜಿವಹಿಸಲಾಗುತ್ತಿಲ್ಲ. ಕೂಲಿ ಹಣ ಸಂದಾಯ ಮಾಡದಿದ್ದಾಗ ವೇತನ ಪಾವತಿ ಕಾಯ್ದೆ ಅಡಿಯಲ್ಲಿ ದೂರು ಸಲ್ಲಿಸಿ ಪರಿಹಾರ ಪಡೆಯಲು ಇದ್ದ ಅವಕಾಶವನ್ನು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಮೂಲಕ ಮೋದಿ ಸರ್ಕಾರ ಕಿತ್ತುಕೊಳ್ಳಲು ಮುಂದಾಗಿದೆ.

ಅನಧಿಕೃತ ಸಾಗುವಳಿ ಸಕ್ರಮ ನೆನಗುದಿಗೆ:

ಗ್ರಾಮೀಣ ಬಡವರ ಭೂಹಸಿವನ್ನು ಹಿಂಗಿಸುವ ಆಸಕ್ತಿ ಬಿಜೆಪಿ ಸರ್ಕಾರಕ್ಕಿಲ್ಲ. ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಹಲವಾರು ವರ್ಷಗಳಿಂದ ಅರ್ಜಿಗಳನ್ನು ಸಲ್ಲಿಸುತ್ತಾ ಬಂದಿದ್ದರೂ ರಾಜ್ಯದ ಭೂರಹಿತ ಬಡವರಿಗೆ, ದಲಿತರಿಗೆ ಭೂಮಿಯ ಹಕ್ಕು ದೊರೆಯಲಿಲ್ಲ. ಹೀಗಾಗಿ ಅವರು ಹಿಂದುಳಿಯುವಿಕೆಯಿಂದ ಬಿಡುಗಡೆ ಹೊಂದಲಿಲ್ಲ.

ಸರ್ಕಾರಿ ಬಂಜರು ಭೂಮಿಯನ್ನು ಸಾಗುವಳಿ ಮಾಡುತ್ತಿರುವವರು ಫಾರಂ ನಂ 50 ಮತ್ತು 53 ರಲ್ಲಿ ಸಲ್ಲಿಸಲಾದ ಅರ್ಜಿಗಳು ಹೆಚ್ಚಾಗಿ ತಿರಸ್ಕರಿಸಲ್ಪಟ್ಟಿವೆ. ಅವುಗಳ ಮರುಪರಿಶೀಲನೆಯ ಭರವಸೆ ಹಾಗೇ ಉಳಿದಿದೆ. ಈಗ ಫಾರಂ ನಂ.57 ರಲ್ಲಿ ಅರ್ಜಿ ಸ್ವೀಕರಿಸುತ್ತಿದ್ದಾರೆ. ಅವುಗಳ ಪರಿಶೀಲನೆ ನೆನೆಗುದಿಗೆ ಬಿದ್ದಿದೆ.

ಮರಗಳೇ ಇಲ್ಲದ ಅರಣ್ಯ ಎಂದು ಘೋಷಿಸಲಾದ ಭೂಮಿಯನ್ನು ಸಾಗುವಳಿ ಮಾಡುತ್ತಿರುವವರು ನಿರಂತರವಾಗಿ ಅರಣ್ಯ ಸಿಬ್ಬಂದಿಗಳ ಕಿರುಕುಳ ಅನುಭವಿಸುತ್ತಿದ್ದಾರೆ. ಕೋರ್ಟ್ ಕೇಸುಗಳನ್ನು ಎದುರಿಸುತ್ತಿದ್ದಾರೆ. ಅರಣ್ಯ ಹಕ್ಕುಗಳ ಕಾಯ್ದೆ ಅಡಿಯಲ್ಲಿ ಅವರ ಅರ್ಜಿಗಳು ಇತ್ಯರ್ಥವಾಗಿಲ್ಲ. ಅರಣ್ಯ ಭೂಮಿ ಸಾಗುವಳಿದಾರರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಎದುರು ಬಡ ಬಗರ್ ಹುಕುಂ ಸಾಗುವಳಿದಾರರ ಪರವಾಗಿ ಸಮರ್ಥವಾಗಿ ವಾದ ಮಂಡಿಸಲು ಎರಡೂ ಸರ್ಕಾರಗಳು ವಿಫಲವಾಗಿವೆ.

ವಸತಿರಹಿತರಿಗೆ ಮನೆ–ನಿವೇಶನದ ಪ್ರಶ್ನೆ:

ಮನೆಗಳಿಲ್ಲದ ಬಡವರಿಗೆ ಮನೆಗಳನ್ನು ಒದಗಿಸುವ ಸರ್ಕಾರಗಳ ಇನ್ನೊಂದು ಭರವಸೆ ಈಡೇರಿಸಲಾಗಿಲ್ಲ. ಕೂಲಿಕಾರರ ಸಂಘ ರಾಜ್ಯಾದ್ಯಂತ ಸಾವಿರಾರು ಅರ್ಜಿಗಳನ್ನು ಸಲ್ಲಿಸಿದೆ. ಆದರೆ ಇದುವರೆಗೆ ಅರ್ಜಿಗಳು ಸಮರ್ಪಕವಾಗಿ ಇತ್ಯರ್ಥವಾಗಿಲ್ಲ. ಮನೆ ನಿವೇಶನಗಳಿಗಾಗಿ ಖಾಸಗಿ ಭೂಮಿಯನ್ನು ಹೆಚ್ಚಿಗೆ ಬೆಲೆ ಕೊಟ್ಟು ಖರೀದಿ ಮಾಡಲು ಸರ್ಕಾರ ಮುಂದಾಗುತ್ತಿಲ್ಲ. ಲಭ್ಯ ಇರುವ ಸರ್ಕಾರಿ ಭೂಮಿಯನ್ನು ನಿವೇಶನರಹಿತ ಬಡವರಿಗೆ ವಿತರಿಸಲಾಗುತ್ತಿಲ್ಲ.

ಗುಡಿಸಲುರಹಿತ ಕರ್ನಾಟಕ ನಿರ್ಮಾಣ ಮಾಡುವ ಭರವಸೆ ಈಡೇರಿಸಿಲ್ಲ. 94 ಸಿ ಮತ್ತು 94 ಸಿಸಿ ಅಡಿಯಲ್ಲಿ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಸಿಕೊಂಡಿರುವ ಬಡವನಿಗೆ ಹಕ್ಕುಪತ್ರ ನೀಡುವ ಭರವಸೆಯೂ ನೆನೆಗುದಿಗೆ ಬಿದ್ದಿದೆ.

ಸಾಮಾಜಿಕ ಸುರಕ್ಷಾ ಯೋಜನೆಗಳ ಅನುಷ್ಠಾನ:

ವೃದ್ಧರಿಗೆ, ವಿಧವೆಯರಿಗೆ, ಅಂಗವಿಕಲರಿಗೆ, ಮಾಜಿ ದೇವದಾಸಿ ಮಹಿಳೆಯರಿಗೆ ವಿತರಿಸಬೇಕಾದ ಮಾಸಾಶನವನ್ನು ಪ್ರತಿ ತಿಂಗಳು ನಿಗದಿತ ದಿನದಂದು ವಿತರಣೆ ಮಾಡುವುದು ಸರ್ಕಾರಗಳ ಆದ್ಯತೆಯಾಗಿಲ್ಲ. ಈ ಅಸಹಾಯಕ ಫಲಾನುಭವಿಗಳನ್ನು ಓಡಾಡಿಸಿ ಸತಾಯಿಸುತ್ತಿರುತ್ತಾರೆ.

ಮುಖ್ಯ ಹಕ್ಕೊತ್ತಾಯಗಳು

1. ರಾಜ್ಯದ ನೆರೆ ಸಂತ್ರಸ್ತರಿಗೆ ಸರ್ಕಾರ ವಿಳಂಬ ಮಾಡದೆ ಎಲ್ಲಾ ಅಗತ್ಯ ಪರಿಹಾರವನ್ನು ಒಳಗೊಂಡ ಪ್ಯಾಕೇಜನ್ನು ಕೂಡಲೇ ಬಿಡುಗಡೆ ಮಾಡಬೇಕು.
2. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪ್ರತಿಯೊಂದು ಗ್ರಾಮ ಪಂಚಾಯತಿಗೂ ವಿಸ್ತರಣೆ ಆಗುವಂತೆ ಕೇಂದ್ರ ಸರ್ಕಾರ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಬೇಕು.
3. ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿದಿರುವ ಕೆಲಸಗಾರರಿಗೆ ಬಾಕಿ ಇರುವ ವೇತನವನ್ನು ಕೂಡಲೇ ಸಂದಾಯ ಮಾಡಬೇಕು.
4. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅರ್ಜಿ ಸಲ್ಲಿಸುವ ಎಲ್ಲರಿಗೂ ವರ್ಷದಲ್ಲಿ 200 ದಿನ ಉದ್ಯೋಗ ನೀಡಬೇಕು.
5. ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡುವವರಿಗೆ ದಿನದ 8 ಗಂಟೆಗಳ ಕೆಲಸಕ್ಕೆ ಕನಿಷ್ಠ 600 ರೂಪಾಯಿ ಕನಿಷ್ಠ ವೇತನ ನೀಡಬೇಕು.
6. ಉದ್ಯೋಗ ಖಾತ್ರಿ ಕೆಲಸಗಾರರಿಗೆ ವೇತನ ನೀಡದಿದ್ದರೆ ಅಥವ ವಿಳಂಬ ಮಾಡಿದರೆ ವೇತನ ಪಾವತಿ ಕಾಯ್ದೆ ಅಡಿಯಲ್ಲಿ ದೂರು ಸಲ್ಲಿಸಿ ಮೊದಲಿನಂತೆ ಪರಿಹಾರ ಪಡೆಯಲು ಅವಕಾಶ ಇರಬೇಕು.
7. ಭೂರಹಿತ ಬಡವರ ಎಲ್ಲ ಬಗರ್ ಹುಕುಂ ಸಾಗುವಳಿ ಪ್ರಕರಣಗಳನ್ನು ಬೇಷರತ್ತಾಗಿ ಸಕ್ರಮಗೊಳಿಸಬೇಕು ಇಲ್ಲವೆ ಅವರಿಗೆ ಪರ್ಯಾಯ ಜಮೀನನ್ನು ನೀಡಬೇಕು.
8. ಮನೆ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ಬಡ ವಸತಿರಹಿತ ಕುಟುಂಬಗಳಿಗೆ ಮನೆ ನಿವೇಶನಗಳನ್ನು ಒದಗಿಸಬೇಕು ಮತ್ತು ಅವರ ಅನಧಿಕೃತ ಮನೆ ನಿವೇಶನವನ್ನು ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕು.
9. 60 ವರ್ಷ ದಾಟಿದ ಕೃಷಿ ಕೂಲಿಕಾರರಿಗೆ ಹಾಗೂ ಗ್ರಾಮೀಣ ಕೆಲಸಗಾರರಿಗೆ ಕೇರಳ ಮಾದರಿಯಲ್ಲಿ ನಿವೃತ್ತಿ ವೇತನ ನೀಡಬೇಕು.
10. ರೂ. 5000/– ಕ್ಕಿಂತ ಕಡಿಮೆ ಮಾಸಾಶನವನ್ನು ಪಡೆಯುತ್ತಿರುವ ವೃದ್ಧರು, ವಿಧವೆಯರು ಮೊದಲಾದ ದುರ್ಬಲರಿಗೆ ಕನಿಷ್ಠ ರೂ.5000/– ಮಾಸಾಶನ ನೀಡಬೇಕು.

ಸಚಿವರ ಭರವಸೆ: ಕಟ್ಟಡ ಕಾರ್ಮಿಕರ ಅನಿರ್ಧಿಷ್ಟಾವಧಿ ಧರಣಿ ಅಂತ್ಯ



ಉಡುಪಿ: ಕಳೆದ 5 ದಿನಗಳಿಂದ ಮರಳುಗಾರಿಕೆ ಕೂಡಲೇ ಆರಂಭಿಸಲು ಆಗ್ರಹಿಸಿ ನಡೆಯುತ್ತಿದ್ದ ಅನಿರ್ಧಿಷ್ಟಾವಧಿ ಧರಣಿಯನ್ನು ಧರಣಿ ಸ್ಥಳಕ್ಕೆ ಆಗಮಿಸಿ ಸರಕಾರ ಮಧ್ಯಪ್ರವೇಶ ಮಾಡಿ ಶಾಶ್ವತ ಪರಿಹಾರಕ್ಕೆ ಕ್ರಮಕೈಗೊಳ್ಳುತ್ತೇವೆ ಎಂಬ ಆಶ್ವಾಸನೆ ನೀಡಿದ ಹಿನ್ನೆಲೆಯಲ್ಲಿ ಹಾಗೂ ಕುಂದಾಪುರ ಬೈಂದೂರುಗಳಲ್ಲಿಯೂ ಮರಳುಗಾರಿಕೆ ಆರಂಬಿಸಲು ಸಚಿವರು ಭರವಸೆ ನೀಡಿದ ಹಿನ್ನೆಲೆಯಲ್ಲಿ ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ ಎಂದು ಸಮನ್ವಯ ಸಮಿತಿ ಸಂಚಾಲಕರಾದ ಸುರೇಶ್ ಕಲ್ಲಾಗರ, ಶೇಖರ ಬಂಗೇರ ತಿಳಿಸಿದ್ದಾರೆ.

ಜೀವನಾಧಾರಗಳ ಮತ್ತು ಹಕ್ಕುಗಳ ರಕ್ಷಣೆಯ ಹೋರಾಟಗಳತ್ತ



ವಾಣಿಜ್ಯ ಗಣಿಗಾರಿಕೆಯಲ್ಲಿ 100% ಎಫ್‌ಡಿಐ ವಿರುದ್ಧ ಕಲ್ಲಿದ್ದಲು ಕಾರ್ಮಿಕರ ಮುಷ್ಕರದ ಸಂದರ್ಭದಲ್ಲಿ ಚಾಸ್ನಾಲಾದಲ್ಲಿ ಪ್ರತಿಭಟನಾ ಮೆರವಣಿಗೆ



ಪ್ರಕಾಶ ಕಾರಟ್

ತಮ್ಮ ಮೇಲೆರಗಿ ಬರುತ್ತಿರುವ ಸರಕಾರದ ದಾಳಿಗಳಿಗೆ ಕಾರ್ಮಿಕ ವರ್ಗ ಈಗಾಗಲೇ ಇದಿರೇಟು ಕೊಡಲು ಆರಂಭಿಸಿದೆ.

ರಕ್ಷಣಾ ಉತ್ಪಾದನಾ ಕಾರ್ಮಿಕರು ಈಗಾಗಲೇ ಐದು ದಿನಗಳ ಮುಷ್ಕರ ನಡೆಸಿದ್ದಾರೆ.

ಕಲ್ಲಿದ್ದಲು ಗಣಿ ಕಾರ್ಮಿಕರು ಸಪ್ಟಂಬರ್ 24ರಂದು ಒಂದು ದಿನದ ಅತ್ಯಂತ ಯಶಸ್ವಿ ಮುಷ್ಕರ ನಡೆಸಿದ್ದಾರೆ.

ಇದನ್ನನುಸರಿಸಿ ಸಪ್ಟಂಬರ್ 30ರಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಒಕ್ಕೂಟಗಳು ಸಂಗಟಿಸಿದ ರಾಷ್ಟ್ರೀಯು ಬಹಿರಂಗ ಸಾಮೂಹಿಕ ಸಮಾವೇಶ ಜನವರಿ 8, 2020ರಂದು ಒಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ.

ಮೋದಿ ಸರಕಾರದ ಧೋರಣೆಗಳಿಗೆ ಹೆಚ್ಚುತ್ತಿರುವ ಪ್ರತಿರೋಧದ ಭಾಗವಾಗಿ ಎಡಪಕ್ಷಗಳು ಅಕ್ಟೋಬರ್ 10ರಿಂದ 16 ರ ವರೆಗೆ ಒಂದು ವಾರದ ದೇಶವ್ಯಾಪಿ ಪ್ರತಿಭಟನೆಗಳಿಗೆ ಕರೆ ನೀಡಿವೆ.

ಈ ಹೋರಾಟಗಳು, ಎಲ್ಲ ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಆಕ್ರಮಣ ಮಾಡುತ್ತಿರುವ ಮತ್ತು ಅವರ ನಾಗರಿಕ ಸ್ವಾತಂತ್ರ್ಯಗಳನ್ನು ವಂಚಿಸುವ ಹಿಂದುತ್ವ ಸರ್ವಾಧಿಕಾರಶಾಹಿಯು ವಿರುದ್ಧ ಹೋರಾಟದೊಂದಿಗೆ ಅಂಗಾಂಗ ಸಂಬಂಧವನ್ನು ಹೊಂದಿವೆ.

ಮೋದಿ ಸರಕಾರ ಮೇ 2019ರಲ್ಲಿ ಅಧಿಕಾರಕ್ಕೆ ಮರಳಿದಂದಿನಿಂದ ಕಾರ್ಮಿಕ ವರ್ಗದ ಮೇಲೆ ಮತ್ತು ಎಲ್ಲ ದುಡಿಯುವ ಜನವಿಭಾಗಗಳ ಮೇಲೆ ದಾಳಿಗಳು ತೀವ್ರಗೊಳ್ಳುತ್ತಿವೆ. ಆರ್ಥಿಕ ಮಂದಗತಿ ಮತ್ತು ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಗಳು ಕಳೆದ ಐದು ವರ್ಷಗಳಲ್ಲಿ ಮೋದಿ ಸರಕಾರ ಅನುಸರಿಸಕೊಂಡು ಬಂದ ನವ-ಉದಾರವಾದಿ ಧೋರಣೆಗಳ ಒಂದು ಉತ್ಪನ್ನ. ಈ ಬಿಕ್ಕಟ್ಟಿನಿಂದ ಹೊರಬರಲು ಸರಕಾರ ಧೋರಣೆಗಳನ್ನು, ನಿಯಂತ್ರಣಗಳಲ್ಲಿ ಬದಲಾವಣೆಗಳನ್ನು ಪ್ರಕಟಿಸಿದೆ. ಇವು ಕಾರ್ಪೊರೇಟ್‌ಗಳಿಗೆ ಮತ್ತು ವಿದೇಶಿ ಬಂಡವಾಳಕ್ಕೆ ಇನ್ನಷ್ಟು ರಿಯಾಯ್ತಿಗಳನ್ನು ಕೊಡುವಂತಹ ಬದಲಾವಣೆಗಳು, ಧೋರಣೆಗಳು. ಕಾರ್ಪೊರೇಟ್‌ಗಳಿಗೆ 1.4ಲಕ್ಷ ಕೋಟಿ ರೂ.ಗಳ ತೆರಿಗೆ ಕಡಿತ ಇವುಗಳಲ್ಲಿ ಇತ್ತೀಚಿನದ್ದು. ಸರಕಾರ ಕಾರ್ಪೊರೇಟ್‌ಗಳಿಗೆ ಬ್ಯಾಂಕ್ ಸಾಲಗಳು, ಪಾರು ಯೋಜನೆಗಳು, ಮತ್ತು ತೆರಿಗೆ ಕಡಿತಗಳನ್ನು ಒದಗಿಸುವುದರಿಂದ ಹೂಡಿಕೆಗಳು ಮತ್ತು ಉದ್ಯೋಗಳೇನೂ ಹೆಚ್ಚುವುದಿಲ್ಲ. ಅವು ಬಂಡವಾಳಶಾಹಿಗಳ ಲಾಭಗಳನ್ನು ಮುಂದುವರೆಸುತ್ತದಷ್ಟೇ.

ಆದರೆ ಈ ಬಿಕ್ಕಟ್ಟಿನ ಹೊರೆಯನ್ನು ಕಾರ್ಮಿಕರು, ರೈತರು ಮತ್ತು ಕೃಷಿಕೂಲಿಕಾರರು ಹಾಗೂ ನಿರುದ್ಯೋಗಿಗಳು ಹೊರಬೇಕಾಗಿದೆ. ಎಲ್ಲ ಉದ್ದಿಮೆಗಳಲ್ಲಿ-ವಾಹನಗಳು, ಜವಳಿ, ಕಟ್ಟಡ ನಿರ್ಮಾಣ ಮತ್ತು ಉಕ್ಕು ವಲಯದಲ್ಲಿ ಬೃಹತ್ ಪ್ರಮಾಣದಲ್ಲಿ ಉದ್ಯೋಗನಷ್ಟಗಳು ಸಂಭವಿಸುತ್ತಿವೆ.

ನಿರುದ್ಯೋಗ ಗಗನದತ್ತ ಧಾವಿಸುತ್ತಿದೆ. ಸಿಎಂಐಇ (ಭಾರತೀಯ ಆರ್ಥಿಕ ವೀಕ್ಷಣಾ ಕೇಂದ್ರ) ನ ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ ಆಗಸ್ಟ್ ಅಂತ್ಯದ ವೇಳೆಗೆ ನಿರುದ್ಯೋಗಿಗಳ ಸಂಖ್ಯೆ 4.5 ಕೋಟಿ ತಲುಪಿದೆ, ಕಳೆದ ವರ್ಷಕ್ಕಿಂತ 1.1ಕೋಟಿಯಷ್ಟು ಹೆಚ್ಚು. ಅಲ್ಲದೆ, ವಾರದ ಅಂದಾಜುಗಳ ಪ್ರಕಾರ ಸಪ್ಟಂಬರ್ 27ರ ವೇಳೆಗೆ ನಿರುದ್ಯೋಗ ದರ ಹಿಂದೆಂದೂ ಕಾಣದ 9.94 ಶೇ., ಅಂದರೆ ಸುಮಾರಾಗಿ 10ಶೇ.ಕ್ಕೆ ಏರಿದೆ. 20ರಿಂದ 29 ವರ್ಷದ ವರೆಗಿನ ಯುವಜನರ ನಡುವೆ ನಿರುದ್ಯೋಗ 28 ಶೇ.ದಷ್ಟಿದೆ.

ಮೋದಿ ಸರಕಾರ ಯಾವುದೇ ವಿವೇಚನೆಯಿಲ್ಲದೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗೀಕರಿಸುವ ಭರದಲ್ಲಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಸಾರ್ವಜನಿಕ ವಲಯದ ಘಟಕಗಳಲ್ಲಿ ಹೂಡಿಕೆ ಹಿಂಪಡಿಕೆ ಮೂಲಕ 1.05 ಲಕ್ಷ ಕೋಟಿ ರೂ.ಗಳನ್ನು ಎತ್ತುವ ಗುರಿಯನ್ನು ಅದು ಹಾಕಿಕೊಂಡಿದೆ. ರೈಲ್ವೆ, ರಕ್ಷಣಾ ಉತ್ಪಾದನೆಯ ಘಟಕಗಳ ಖಾಸಗೀಕರಣ ಮತ್ತು ಕಲ್ಲಿದ್ದಲು ಗಣಿಗರಿಕೆಯಲ್ಲಿ100ಶೇ. ಎಫ್‌ಡಿಐ ಪ್ರಕಟಿಸಲಾಗಿದೆ. ಈ ಖಾಸಗೀಕರಣ ಕ್ರಮಗಳು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನದಿಂದ ಸಾವಿರಾರು ಉದ್ಯೋಗಗಳು ನಷ್ಟಗೊಳ್ಳುತ್ತವೆ.

ಇವೆಲ್ಲದರ ಮೇಲೆ ಸರಕಾರ ಸಾರಾಸಗಟಾಗಿ ಕಾರ್ಮಿಕ ಕಾನೂನುಗಳನ್ನು ಬದಲಾಯಿಸುತ್ತಿದೆ. ಸಂಸತ್ತು ಈಗಾಗಲೇ ವೇತನಗಳ ಸಂಹಿತೆ, ವೃತ್ತಿ ಸುರಕ್ಷಿತತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆಯನ್ನು ಅಂಗೀಕರಿಸಿದೆ. ಕಾರ್ಮಿಕರ ಮತ್ತು ಕಾರ್ಮಿಕ ಸಂಘಟನೆಗಳ ಹಕ್ಕುಗಳನ್ನು ಶಿಥಿಲಗೊಳಿಸಲಾಗುತ್ತಿದೆ.

ಮೇಲೆರಗಿ ಬರುತ್ತಿರುವ ಈ ದಾಳಿಗಳ ವಿರುದ್ಧ ಕಾರ್ಮಿಕ ವರ್ಗ ಈಗಾಗಲೇ ಇದಿರೇಟು ಕೊಡಲು ಆರಂಭಿಸಿದೆ. ಶಸ್ತ್ರಾಸ್ತ್ರ ಕಾರ್ಖಾನೆಗಳ ಮಂಡಳಿಯ ಕಂಪನೀಕರಣದ ವಿರುದ್ಧ ರಕ್ಷಣಾ ಉತ್ಪಾದನಾ ಕಾರ್ಮಿಕರು ಈಗಾಗಲೇ ಐದು ದಿನಗಳ ಮುಷ್ಕರ ನಡೆಸಿದ್ದಾರೆ. ಕಲ್ಲಿದ್ದಲು ಗಣಿ ಕಾರ್ಮಿಕರು ಸಪ್ಟಂಬರ್ 24ರಂದು ವಾಣಿಜ್ಯ ಕಲ್ಲಿದ್ದಲು ಗಣಿಗಾರಿಕೆಯಲ್ಲಿ 100ಶೇ. ಎಫ್‌ಡಿಐ ವಿರುದ್ಧ ಒಂದು ದಿನದ ಅತ್ಯಂತ ಯಶಸ್ವಿ ಮುಷ್ಕರ ನಡೆಸಿದ್ದಾರೆ.

ಇದನ್ನನುಸರಿಸಿ ಸಪ್ಟಂಬರ್ 30ರಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಒಕ್ಕೂಟಗಳು ರಾಷ್ಟ್ರೀಯ ಬಹಿರಂಗ ಸಾಮೂಹಿಕ ಸಮಾವೇಶವನ್ನು ಸಂಘಟಿಸಿವೆ. ಈ ಸಮಾವೇಶ ಮೋದಿ ಸರಕಾರದ ಕಾರ್ಮಿಕ ವರ್ಗ-ವಿರೋಧಿ ಮತ್ತು ಜನ-ವಿರೋಧಿ ಧೋರಣೆಗಳ ವಿರುದ್ಧ ಜನವರಿ 8, 2020ರಂದು ಒಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ. ಈ ಮುಷ್ಕರ ಹೋರಾಟವನ್ನು ಒಂದು ಬಲಿಷ್ಟ ಕಾರ್ಯಾಚರಣೆಯಾಗಿ ಮಾಡಲು ಕಾರ್ಮಿಕ ವರ್ಗದ ಎಲ್ಲ ವಿಭಾಗಗಳನ್ನು ಒಗ್ಗೂಡಿಸುವ ಒಂದು ಪರಿಣಾಮಕಾರೀ ಪ್ರಚಾರಾಂದೋಲನವನ್ನು ನಡೆಸಬೇಕಾಗಿದೆ.

ಮೋದಿ ಸರಕಾರದ ಕಾರ್ಪೊರೇಟ್-ಪರ ಮತ್ತು ವಿದೇಶಿ ಬಂಡವಾಳ-ಪರ ಧೋರಣೆಗಳಿಗೆ ಹೆಚ್ಚುತ್ತಿರುವ ಪ್ರತಿರೋಧದ ಭಾಗವಾಗಿ ಎಡಪಕ್ಷಗಳು ಅಕ್ಟೋಬರ್ 10ರಿಂದ 16 ರ ವರೆಗೆ ಒಂದು ವಾರದ ದೇಶವ್ಯಾಪಿ ಪ್ರತಿಭಟನೆಗಳಿಗೆ ಕರೆ ನೀಡಿವೆ. ಇದರಲ್ಲಿ ಉದ್ಯೋಗ ಮತ್ತು ವೇತನಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಗಮನ ಕೇಂದ್ರೀಕರಿಸಲಾಗುವುದು. ಈ ಪ್ರತಿಭಟನಾ ಕಾರ್ಯಾಚರಣೆಯಿಂದ ವಿವಿಧ ಜನವಿಭಾಗಗಳು ತಮ್ಮ ಜೀವನಾಧಾರಗಳು ಮತ್ತು ಹಕ್ಕುಗಳ ರಕ್ಷಣೆಗೆ ಹೋರಾಟಕ್ಕಿಳಿಯುವಂತೆ ಅಣಿನೆರೆಸಲು ಸಾಧ್ಯವಾಗಬೇಕು.

ಈ ಹೋರಾಟಗಳು, ಎಲ್ಲ ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಆಕ್ರಮಣ ಮಾಡುತ್ತಿರುವ ಮತ್ತು ಅವರ ನಾಗರಿಕ ಸ್ವಾತಂತ್ರ್ಯಗಳನ್ನು ವಂಚಿಸುವ ಹಿಂದುತ್ವ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟದೊಂದಿಗೆ ಅಂಗಾಂಗ ಸಂಬಂಧವನ್ನು ಹೊಂದಿವೆ.



ಮೋದಿ ಸರಕಾರದ ಕಾರ್ಪೊರೇಟ್-ಪರ ಮತ್ತು ವಿದೇಶಿ ಬಂಡವಾಳ-ಪರ ಧೋರಣೆಗಳಿಗೆ ವಿರುದ್ಧವಾಗಿ ಎಡಪಕ್ಷಗಳ ಸಮಾವೇಶ



ಕಾರ್ಪೊರೇಟೀಕರಣದ ವಿರುದ್ಧ ರಕ್ಷಣಾ ಉತ್ಪಾದನಾ ವಲಯದ ಕಾರ್ಮಿಕರ ಐದು ದಿನಗಳ ಮುಷ್ಕರದ ಅವಧಿಯಲ್ಲಿ ಪುಣೆಯ ಶಸ್ತ್ರಾಸ್ತ್ರ ಕಾರ್ಖಾನೆಯ ಎದುರು ಕಾರ್ಮಿಕರ ಪ್ರತಿಭಟನೆ

‘ನಾವು ಸಂಘ ಕಟ್ಟದಂತೆ’ ಮಾಡುವ ‘ಕಾರ್ಮಿಕ ಸಂಹಿತೆ’: ಕೆ.ಎನ್.ಉಮೇಶ್

ವಸಂತರಾಜ ಎನ್.ಕೆ.



“ನಾವು ಸಂಘ ಕಟ್ಟಬಾರದು ಎಂಬುದು ಅವರ ಇಚ್ಛೆ; ಸಂಘಗಳು ಕಟ್ಟಿದರೂ ಕಾರ್ಮಿಕರಿಗೆ ಹೊರಗಿನವರು ಯಾರೂ ಸಹಾಯ ಮಾಡಬಾರದು; ಪರಿಣಾಮಕಾರಿ ಸಾಮೂಹಿಕ ಚೌಕಾಶಿ ಇರಬಾರದು. ಇದು ಹೊಸ ಕಾರ್ಮಿಕ ಸಂಹಿತೆಯ ಇಂಗಿತ” ಹೀಗೆಂದವರು ಸಿಐಟಿಯು ನಾಯಕ ಕೆ.ಎನ್. ಉಮೇಶ್. ಅವರು ‘ಬೆಂಗಳೂರು ಕಲೆಕ್ಟಿವ್’ ಜೈ ಭೀಮ್ ಭವನದಲ್ಲಿ ಸೆಪ್ಟೆಂಬರ್ 22ರಂದು ಏರ್ಪಡಿಸಿದ ‘ಕಾರ್ಮಿಕ ಕಾನೂನು ಸುಧಾರಣೆಗಳು’ ಎಂಬ ವಿಚಾರ ಸಂಕಿರಣದ ‘ಕೈಗಾರಿಕಾ ಸಂಬಂಧಗಳ ಬಗೆಗಿನ ಕಾರ್ಮಿಕ ಸಂಹಿತೆ’ ಕುರಿತ ಎರಡನೇ ಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಈ ಹೊಸ ಸಂಹಿತೆ ಕುರಿತು ಕಾರ್ಮಿಕ ಸಂಘಗಳ ದೃಷ್ಟಿಕೋನದಿಂದ ಮಾತನಾಡಿದ ಅವರು, ಇತರ ರಾಜ್ಯಗಳಂತೆ ಕರ್ನಾಟಕದಲ್ಲೂ ಕಾರ್ಮಿಕ ಸಂಘಗಳ ಕಡ್ಡಾಯ ಮತ್ತು ಕಾನೂನುಬದ್ಧ ಮಾನ್ಯತೆಗೆ ಹಕ್ಕೊತ್ತಾಯ ಸಲ್ಲಿಸಲಾಗುತ್ತಿದೆ. ಸರಕಾರ ಕೆಲವು ಮೊದಲ ಹೆಜ್ಜೆಗಳನ್ನಿಟ್ಟರೂ ಅದು 2015ರಿಂದಲೂ ನೆನೆಗುದಿಗೆ ಬಿದ್ದಿದೆ. ಹೊಸ ಸಂಹಿತೆಯಲ್ಲಿ ಪ್ರತಿಯೊಂದು ಉದ್ಯಮವನ್ನೂ ಸಾರ್ವಜನಿಕ ಸೇವೆಯೆಂಬಂತೆ ಪರಿಗಣಿಸಲಾಗುತ್ತಿದೆ. ಹೊಸ ಸಂಹಿತೆಯಲ್ಲಿ ಸರಕಾರದಿಂದ ಅನುಮತಿ ತೆಗೆದುಕೊಳ್ಳಬೇಕಾದರೆ ಕನಿಷ್ಠ 300 ಕಾರ್ಮಿಕರು ಇರಬೇಕೆಂಬ ನಿರ್ಬಂಧಗಳನ್ನು ಹೇರಲಾಗಿದೆ. ಇದರಿಂದ ಸುಮಾರು 53% ಕಾರ್ಮಿಕರು ಕೆಲಸದಿಂದ ಕಾನೂನುಬಾಹಿರ ವಜಾದಿಂದ ಈಗಿರುವ ರಕ್ಷಣೆ ಕಳೆದುಕೊಳ್ಳುತ್ತಾರೆ. ಆದ್ದರಿಂದ ಈ ನಿರ್ಬಂಧಗಳನ್ನು ಕಾರ್ಮಿಕ ಸಂಘಗಳು ಒಪ್ಪುವುದಿಲ್ಲ ಎಂದು ಅವರು ವಿವರಿಸಿದರು.

ಕಾರ್ಮಿಕ ಚಳುವಳಿ ಲಾಗಾಯ್ತಿನಿಂದಲೂ ಹೋರಾಟ ಮಾಡಿ ತಮ್ಮ ಕಾನೂನುಬದ್ಧ ಹಕ್ಕುಗಳನ್ನು ಗಳಿಸಿವೆ. ಕಾರ್ಮಿಕ ಹಕ್ಕುಗಳನ್ನು ‘ಗಟ್ಟಿ ಹಕ್ಕುಗಳು’ (ಚೌಕಾಸಿಗೆ ಒಳಪಡದ್ದು, ಕೋರ್ಟಿಗೆ ಹೋಗಿ ಜಾರಿ ಪಡಿಸಬಹುದಾದ್ದು) ಮತ್ತು ‘ಮೆದು ಹಕ್ಕುಗಳು’ (ಕಂಪನಿ ನೀತಿಗಳು, ಮಾನವ ಸಂಪನ್ಮೂಲ ಇಲಾಖೆಯ ನೀತಿಗಳು ಇತ್ಯಾದಿ) ಎಂದು ವಿಭಾಗಿಸಬಹುದು. ಜಾಗತೀಕರಣದ ನಂತರದ ಯುಗದಲ್ಲಿ ‘ಗಟ್ಟಿ ಹಕ್ಕು’ಗಳಿಂದ ‘ಮೆದು ಹಕ್ಕು’ಗಳತ್ತ ಕಾರ್ಮಿಕ ಹಕ್ಕುಗಳು ಹೋಗುತ್ತಿವೆ. ಹೀಗೆಂದವರು ಇದೇ ಗೋಷ್ಠಿಯಲ್ಲಿ ಮಾತನಾಡಿದ ಕ್ಸೇವಿಯರ್ ಕಾರ್ಮಿಕ ಸಂಬಂಧಗಳ ಸಂಸ್ಥೆಯ ಪ್ರೊ. ಆರ್. ಶ್ಯಾಮ್ ಸುಂದರ್. ಇದು ಹೊಸ ‘ಕೈಗಾರಿಕಾ ಸಂಬಂಧಗಳ ಸಂಹಿತೆ’ಯಲ್ಲೂ ಪ್ರತಿಬಿಂಬಿತವಾಗಿದೆ. ‘ಸಂಘ ಕಟ್ಟುವ ಸ್ವಾತಂತ್ರ್ಯ ಮತ್ತು ಸಂಘಟಿಸುವ ಸ್ವಾತಂತ್ರ್ಯಕ್ಕೆ ರಕ್ಷಣೆ’ (1948), ‘ಸಂಘಟಿಸುವ ಮತ್ತು ಸಾಮೂಹಿಕ ಚೌಕಾಶಿ’(1949) ಎಂಬ ಐ.ಎಲ್.ಒ.ದ ಅಂತರ್‌ರಾಷ್ಟ್ರೀಯ ಅಧಿನಿರ್ಣಯಗಳನ್ನು ಬಾರತ ಸರಕಾರ ಒಪ್ಪಿಕೊಂಡಿದ್ದರೂ ಈ ಹಿಂದೆನೂ ಈ ಸಂಹಿತೆಯಲ್ಲೂ ಜಾರಿ ಮಾಡಿಲ್ಲ. ಸರಕಾರ, ಕಾರ್ಮಿಕ ಸಂಘಗಳು ಮತ್ತು ಉದ್ಯಮಗಳು ಇರುವ ತ್ರಿಪಕ್ಷೀಯ ವ್ಯವಸ್ಥೆ ಜಾಗತೀಕರಣದ ಮೊದಲು ಸಾಕಷ್ಟು ಚೆನ್ನಾಗಿಯೇ ಕೆಲಸ ಮಾಡಿತ್ತು. ಆದರೆ ಜಾಗತೀಕರಣದ ಯುಗದಲ್ಲಿ ಕಾರ್ಮಿಕ ಸಂಘಗಳು ಈ ತ್ರಿಪಕ್ಷೀಯ ವ್ಯವಸ್ಥೆಯಿಂದ ಮಾಯವಾಗಿದೆ. ಕಾರ್ಮಿಕ ‘ಸುಧಾರಣೆ’ಗಳ ಬಗೆಗೂ ಸಂಘಗಳ ಜತೆ ಸಮಾಲೋಚನೆ ಮಾಡಿಲ್ಲ. ಯಾವುದೇ ಕಾರ್ಮಿಕ ಸಂಹಿತೆ ಐ.ಎಲ್.ಒ.ದ ಅಂತರ್‌ರಾಷ್ಟ್ರೀಯ ಅಧಿನಿರ್ಣಯ ಮತ್ತು ಸಂವಿಧಾನದಲ್ಲಿ ಖಾತ್ರಿಗೊಳಿಸಲಾದ ಕಾರ್ಮಿಕ ಹಕ್ಕುಗಳನ್ನು ಒಳಗೊಂಡಿರಬೇಕು ಎಂದು ಪ್ರೊ. ಶ್ಯಾಮಸುಂದರ್ ಹೇಳಿದರು.

ಉದ್ಯೋಗ ನಾಶದ ವಾಸ್ತವ ಮತ್ತು ಪರಿಹಾರ

ದೇಶದ ಹೆಚ್ಚಿನ ರಾಜ್ಯಗಳಲ್ಲಿ (ಅದು ಸಾಪೇಕ್ಷವಾಗಿ ಕಡಿಮೆ ಇದ್ದ ಕರ್ನಾಟಕದಂತಹ ರಾಜ್ಯಗಳು ಸೇರಿದಂತೆ) ನಿರುದ್ಯೋಗದ ದರ ಹೆಚ್ಚಾಗಿದ್ದರೂ, ನಿರುದ್ಯೋಗದ ನಿರ್ವಚನೆ ಬಗ್ಗೆ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ. ನಿರುದ್ಯೋಗ ವ್ಯಾಪಕವಾಗಿರುವ ಅರೆ-ಉದ್ಯೋಗವನ್ನು ಒಳಗೊಳುವುದಿಲ್ಲ. ಶಾಶ್ವತ ಉದ್ಯೋಗಗಳನ್ನು ಕೊಡುತ್ತಿದ್ದ ಸರಕಾರ, ತಯಾರಿಕಾ ವಲಯಗಳಲ್ಲಿ ಉದ್ಯೋಗಗಳು ಕಡಿತಗೊಂಡಿವೆ ಅಥವಾ ಸ್ಥಗಿತವಾಗಿವೆ. ಹೊಸ ಉದ್ಯೋಗಳೇನಿದ್ದರೂ ಸೇವಾ ವಲಯದಲ್ಲಿ ಇವೆ. ಇವೆಲ್ಲವೂ ಯಾವುದೇ ಭದ್ರತೆಯಿಲ್ಲದ ಅರೆ-ಉದ್ಯೋಗಗಳೇ, ಎಂದು ಅಜೀಜ್ ಪ್ರೇಂಜೀ ವಿ.ವಿ.ಯ (ನಿರುದ್ಯೋಗದ ಬಗೆಗ ಸಮಗ್ರ ಸಮೀಕ್ಷೆ ನಡೆಸಿದ ಖ್ಯಾತಿಯ) ಪ್ರೊ. ಅಮಿತ್ ಭೋಸಲೆ ಹೇಳಿದರು. “ಆರ್ಥಿಕ ಪರಿಸ್ಥಿತಿ ಮತ್ತು ನಿರುದ್ಯೋಗ” ಎಂಬ ಮೊದಲ ಗೋಷ್ಠಿಯಲ್ಲಿ ಅವರು ಮಾತನಾಡುತ್ತಿದ್ದರು. ಉದ್ಯೋಗ ಸೃಷ್ಟಿಗಾಗಿ ಸಾರ್ವಜನಿಕ ಸೇವೆಗಳಾದ ಶಿಕ್ಷಣ, ಆರೋಗ್ಯ, ಸಾರಿಗೆ, ಸಾರ್ವಜನಿಕ ಭದ್ರತೆ, ನೈರ್ಮಲ್ಯ, ಸ್ಥಳೀಯ ಮೂಲಸೌಕರ್ಯಗಳಲ್ಲಿ ದೊಡ್ಡ ಪ್ರಮಾಣದ ಸಾರ್ವಜನಿಕ ಹೂಡಿಕೆಯ ಅಗತ್ಯವಿದೆ” ಎಂದು ಅವರು ಸೂಚಿಸಿದರು.

1940ರ ದಶಕದ ಕಾರ್ಮಿಕರ ಮುಷ್ಕರಗಳು ಕಾರ್ಯಾಚರಣೆಗಳಿಂದ ಸ್ವಾತಂತ್ರ್ಯದ ಹೊತ್ತಿನಲ್ಲೇ ಕೈಗಾರಿಕಾ ವಿವಾದ ಕಾಯಿದೆ ಬಂತು. ಆ ಕಾಯಿದೆ ಮತ್ತು ಆ ಮೇಲೂ ಬಂದ ಎಲ್ಲಾ ಕಾರ್ಮಿಕ ಕಾನೂನುಗಳಲ್ಲಿ ಕಾರ್ಮಿಕ ಮತ್ತು ಮಾಲೀಕರ ನಡುವೆ ಪ್ರಭುತ್ವ ಮಧ್ಯಸ್ತಿಕೆ ವಹಿಸುವ ಮತ್ತು ಆದ ಒಪ್ಪಂದವನ್ನು ಜಾರಿಗೊಳಿಸುವ ಜವಾಬ್ದಾರಿ ನಿರ್ವಹಿಸುತ್ತಿತ್ತು. ಆದರೆ ಕ್ರಮೇಣ ಪ್ರಭುತ್ವ ಈ ಎರಡೂ ಪಾತ್ರಗಳ ನಿರ್ವಹಣೆ ಕಡಿಮೆ ಮಾಡುತ್ತಾ, ಮಾಲೀಕರು ಎಲ್ಲಾ ಕಾನೂನುಗಳನ್ನು ಉಲ್ಲಂಘಿಸುವ ಅದರ ವಿರುದ್ಧ ಕೆಲಸ ಮಾಡುವುದಕ್ಕೆ ಅವಕಾಶ ನೀಡಿದೆ. ಅದು ಎಷ್ಟು ಗಂಭೀರ ಮಟ್ಟ ಮುಟ್ಟಿದೆಯೆಂದರೆ ಯಾವುದೇ ಉದ್ಯಮದಲ್ಲಿ (ಸರಕಾರ ಮತ್ತು ಸಂಘಟಿತ ಕೈಗಾರಿಕಾ ವಲಯ ಸೇರಿದಂತೆ) ಅಥವಾ ಘಟಕದಲ್ಲಿ ಉದ್ಯೋಗ ಕಡಿತ, ಉದ್ಯೋಗಗಳ ಕಾಂಟ್ರಾಕ್ಟೀಕರಣ, ಹೊರಗುತ್ತಿಗೆ ಮುಂತಾದವುಗಳ ಬಗೆಗೆ ಮಾಹಿತಿ ಸಹ ದೊರೆಯುವುದಿಲ್ಲ. ಉದ್ಯಮಗಳು ಕಾರ್ಮಿಕರ ಹಕ್ಕುಗಳನ್ನು ನಿರಾಕರಿಸಲು ವಹಿವಾಟಿನ ಸಂಘಟನೆಯನ್ನೇ ಬದಲಾಯಿಸಿವೆ. ಹೀಗೆಂದವರು ಮೊದಲ ಗೋಷ್ಠಿಯಲ್ಲಿ ಮಾತನಾಡಿದ ‘ಫ್ರಂಟ್ ಲೈನ್’ ಪತ್ರಿಕೆಯ ಹಿರಿಯ ಪತ್ರಕರ್ತ ವಿ.ಶ್ರೀಧರ್. ಟೊಯೊಟಾ ಮತ್ತು ವಾಹನ ತಯಾರಿಕಾ ಕ್ಷೇತ್ರ ಹಾಗು ಸರಕಾರಿ-ಸಾರ್ವಜನಿಕ ಕ್ಷೇತ್ರಗಳ ಉದಾಹರಣೆಗಳೊಂದಿಗೆ ಅವರು ಈ ಮಾತನ್ನು ಸ್ಪಷ್ಟಪಡಿಸಿದರು. ನೋಟು ನಿಷೇಧ ಮತ್ತು ಜಿ.ಎಸ್.ಟಿ. ಸಣ್ಣ ಉತ್ಪಾದಕರನ್ನು ತೀವ್ರವಾಗಿ ಬಾಧಿಸುತ್ತಾ ಬಡ ಉತ್ಪಾದಕ-ಗ್ರಾಹಕರ ಸಂಪನ್ಮೂಲಗಳನ್ನು ದೊಡ್ಡ ಉದ್ಯಮಗಳಿಗೆ ಹೇಗೆ ವರ್ಗಾಯಿಸಿದೆ ಎಂದು ಅವರು ವಿವರಿಸಿದರು. ಹೊಸ ಸೇವಾ ವಲಯ ಉದ್ಯೋಗಗಳ ವೈಖರಿಯನ್ನು ಬಣ್ಣಿಸಿದ ಅವರು ಇದಕ್ಕೆ ಸಂಘಗಳು ಪ್ರತಿರೋಧ ಒಡ್ಡಬಹುದು ಎಂದು ಕ್ಯಾಲಿಫೋರ್ನಿಯದ ಪ್ರಾಂತ್ಯ ಸರಕಾರ ಉಬೇರ್ ನಂತಹ ಸೇವಾ ಕಂಪನಿಗಳು ‘ಪಾರ್ಟನರ್’ ಎಂದು ಕರೆಯುತ್ತಿದ್ದ ಕಾರ್ಮಿಕರನ್ನು ಕಾರ್ಮಿಕ ಎಂದು ಪರಿಗಣಿಸಿ ಎಲ್ಲಾ ಹಕ್ಕು-ಸವಲತ್ತುಗಳನ್ನು ಒದಗಿಸಬೇಕು ಎಂದು ಹೇಳಿರುವುದನ್ನು ಉದಾಹರಿಸಿದರು. ಇಲ್ಲೂ ಅಂತಹ ಪ್ರತಿರೋಧವನ್ನು ಕಾರ್ಮಿಕ ಸಂಘಗಳು ಒಡ್ಡಬೇಕು ಎಂದು ಕರೆ ಕೊಟ್ಟರು.

ಕನಿಷ್ಠ ವೇತನದ ಬದಲು ತಳಮಟ್ಟಕ್ಕಿಳಿಸುವ ‘ತಳಮಟ್ಟದ ವೇತನ’

‘ಸಾಮಾಜಿಕ ಭದ್ರತೆ ಮತ್ತು ಕಲ್ಯಾಣದ ಕುರಿತ ಕಾರ್ಮಿಕ ಸಂಹಿತೆ’ ಬಗೆಗಿನ ಮೂರನೇ ಗೋಷ್ಠಿಯಲ್ಲಿ ಸಂಶೋಧಕ ಡಾ. ವೈಭವ ರಾಜ್ ಸಾಮಾಜಿಕ ಭದ್ರತೆ ಬಗೆಗಿನ ಈಗಿನ ತಿಳುವಳಿಕೆ ಮತ್ತು ಅದನ್ನು ಬದಲಾಯಿಸುವ ಅಗತ್ಯದ ಬಗ್ಗೆ ಒತ್ತು ಕೊಟ್ಟರು. ಕಾರ್ಮಿಕ ತನ್ನ ಜೀವನದ ಮೂರನೇ ಎರಡು ಭಾಗದಷ್ಟು ಕಾಲ ಕೆಲಸ ಮಾಡಿದರೆ ಬರುವ ಆದಾಯ ಇಡೀ ಜೀವನಪರ್ಯಂತ ಸಾಕಾಗುವಂತಿರಬೇಕು. ಎರಡು ಕಾರ್ಮಿಕ ಕಮಿಶನುಗಳನ್ನು ರಚಿಸಲಾಗಿದೆ. 1969ರ ಮೊದಲ ಲೇಬರ್ ಕಮಿಶನ್ ಹೊತ್ತಿನಲ್ಲಿ ಅಸಂಘಟಿತ ಕ್ಷೇತ್ರದ ಕಾರ್ಮಿಕರನ್ನು ಸಂಘಟಿತ ಕ್ಷೇತ್ರಕ್ಕೆ ತರಲಾಗುವುದು ಎಂಬ ಕಾಣ್ಕೆ ಇತ್ತು. 2002 ರ ಎರಡನೇ ಕಾರ್ಮಿಕ ಕಮಿಶನ್ ಹೊತ್ತಿಗೆ ಸ್ವಲ್ಪ ಸಾಮಾಜಿಕ ಭದ್ರತೆ ಕೊಟ್ಟು ಉದ್ಯೋಗ ಭದ್ರತೆ ಮತ್ತು ನಿಯಮಿತತೆಯನ್ನು ಕಡಿಮೆ ಮಾಡುವುದು ಹೊಸ ‘ಕಾಣ್ಕೆ;’ಯಾಯಿತು. ಈ ‘ಕಾಣ್ಕೆ’ ಸಾಮಾಜಿಕ ಭದ್ರತೆಯ ಸಂಹಿತೆಯ ಮೊದಲ ಎರಡು ಕರಡುಗಳಲ್ಲಿ ಸ್ಪಷ್ಟವಿತ್ತು. ಆದರೆ ಕಾರ್ಮಿಕರ ಹೋರಾಟದಿಂದಾಗಿ ಮೂರನೇ ಕರಡಿನಲ್ಲಿ ಈಗಿರುವ ಸಾಮಾಜಿಕ ಭದ್ರತೆಯ ಕ್ರಮಗಳಲ್ಲಿ ಭಾರೀ ಬದಲಾವಣೆ ಮಾಡಲಾಗಿಲ್ಲ ಎಂದು ಡಾ. ವೈಭವ್ ತಿಳಿಸಿದರು.

ಸಾಮಾಜಿಕ ಭದ್ರತೆಯ ನಿರ್ವಹಣೆ ಮಾಡುವ ಸಂಸ್ಥೆಗಳ ಕಾರ್ಪೊರೆಟೀಕರಣ ನಡೆದಿದೆ. ಇದರಿಂದ ಈ ಕಾನೂನುಬದ್ಧ ಸಂಸ್ಥೆಗಳ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ ತಿಲಾಂಜಲಿ ಇತ್ತಂತಾಗಿದೆ. ಕಾಂಟ್ರಿಬ್ಯುಟರಿ ಪೆನ್ಶನ್ ಮತ್ತು ಅದರ ನಿಧಿ ನಿರ್ವಹಣೆ ವ್ಯವಸ್ಥೆಯನ್ನು ರದ್ದು ಮಾಡಿರುವುದನ್ನು ಕಾರ್ಮಿಕ ಸಂಘಗಳು ವಿರೋಧಿಸಿವೆ. “ಕಾರ್ಮಿಕ ವರ್ಗ ತನ್ನ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಬೇಕಾದರೆ ರಾಜಕೀಯವಾಗಿ ಬಲಗೊಳ್ಳಬೇಕು. ಕಾರ್ಮಿಕ ವರ್ಗವನ್ನು ರಾಜಕೀಯಕರಣಗೊಳಿಸುವುದು ಕಾರ್ಮಿಕ ಸಂಘಗಳ ಕೆಲಸ.” ಎಂದರು ಮೂರನೇ ಗೋಷ್ಠಿಯಲ್ಲಿ ಮಾತನಾಡಿದ ಎ.ಐ.ಟಿ.ಯು.ಸಿ. ನಾಯಕ ವಿಜಯಭಾಸ್ಕರ್.

ಕೊನೆಯ ಗೋಷ್ಠಿಯಲ್ಲಿ ನೇಶನಲ್ ಲಾ ಸ್ಕೂಲ್ ಆಫ್ ಇಂಡಿಯಾದ ಪ್ರೊ. ಬಾಬು ಮ್ಯಾಥ್ಯೂ ಅವರು ‘ವೇತನಗಳ ಬಗೆಗಿನ ಸಂಹಿತೆ, 2019’ ಕುರಿತು ಮಾತನಾಡಿದರು. ಅವರು ಸಂಹಿತೆಯ ವಿವಿಧ ಆಯಾಮಗಳ ಬಗ್ಗೆ ಮಾತನಾಡಿದರೂ ಪ್ರಮುಖವಾಗಿ ಕನಿಷ್ಠ ಕೂಲಿ ಬಗ್ಗೆ ಮಾತನಾಡಿದರು. ದೇಶದಲ್ಲಿ ಹಲವಾರು (ಸುಮಾರು 2000 ಎಂಬುದು ಅಂದಾಜು) ಕನಿಷ್ಠ ಕೂಲಿ ಅಧಿಸೂಚನೆಗಳನ್ನು ಮಾಡಲಾಗಿದೆ. ಆದರೆ ಈ ಸಂಹಿತೆಯಲ್ಲಿ ದೈನಿಕ ರೂ. 178 ರ ಒಂದು ‘ತಳಮಟ್ಟದ ವೇತನ’ (ಫ್ಲೋರ್ ವೇಜ್)ನ್ನು ಪ್ರಸ್ತಾವಿಸಲಾಗಿದೆ. ಸುಮಾರು 30 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ

ಪುಟ 10 ಕ್ಕೆ







ಮೋದಿ-2 ಸರಕಾರದ ಮುಖವಾಡವನ್ನು ಕಳಚಲಿದೆ ಮತ್ತೊಂದು ಕಾರ್ಮಿಕರ ರಾಷ್ಟ್ರೀಯ ಮುಷ್ಕರ

– ಕೆ.ಮಹಾಂತೇಶ್

ಸೆಪ್ಟೆಂಬರ್ 30 ರಂದು ನವದೆಹಲಿಯಲ್ಲಿ ಹತ್ತು ಕೇಂದ್ರ ಕಾರ್ಮಿಕ ಹಾಗೂ ಹಲವು ಸ್ವತಂತ್ರ ನೌಕರರ ಸಂಘಗಳು ಆಯೋಜಿಸಿದ್ದ ರಾಷ್ಟ್ರೀಯ ಪ್ರತಿಭಟನಾ ಸಮಾವೇಶವು 2020 ರ ಜನವರಿ 8 ರಂದು ಮೋದಿ–2 ಸರಕಾರದ ಕಾರ್ಮಿಕ ವಿರೋಧಿ, ದೇಶ ವಿರೋಧಿ ನೀತಿಗಳ ವಿರುದ್ಧ ಮತ್ತೊಂದು ಸುತ್ತಿನ ದೇಶವ್ಯಾಪಿ ಕಾರ್ಮಿಕ ಮುಷ್ಕರ ನಡೆಸಲು ಕರೆ ನೀಡಿದೆ.

ದೇಶದ ಆರ್ಥಿಕತೆಯು ನಿಧಾನಗತಿಯಲ್ಲಿ ಸಾಗುತ್ತಿದೆ. ಇದರ ಪರಿಣಾಮವು ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕ ವರ್ಗದ ಬದುಕಿನ ಮೇಲೆ ಪರಿಣಾಮ ಬೀರಿ ಅಪಾರ ಸಂಖ್ಯೆಯಲ್ಲಿ ಕೆಲಸಗಳನ್ನು ಕಿತ್ತುಕೊಂಡಿದೆ. ಆರ್ಥಿಕ ಹಿಂಜರಿತದ ನೆಪದಲ್ಲಿ ಕೇಂದ್ರ ಸರಕಾರವು ದೊಡ್ಡ ಶ್ರೀಮಂತರಿಗೆ 1.45 ಲಕ್ಷ ಕೋಟಿ ತೆರಿಗೆ ವಿನಾಯ್ತಿ ಕೊಡುಗೆ ನೀಡಿದೆ ಆದರೆ ಅದೇ ವೇಳೆಗೆ ಕಾರ್ಮಿಕರಿಗೆ ಕೆಲಸದ ಭದ್ರತೆ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಒಂದೇ ಒಂದು ರುಪಾಯಿಯನ್ನು ನೀಡದೆ ದ್ರೋಹ ಬಗೆದಿದೆ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಕೇಂದ್ರ ಸರಕಾರದ ಕ್ರಮಗಳು ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆಗಳ ಪ್ರಮಾಣವನ್ನು ಹೆಚ್ಚಿಸುವುದರ ಪರವಾಗಿರಬೇಕು ಎಂದು ಆರ್ಥಿಕ ತಜ್ಞರು ಒಮ್ಮತದಿಂದ ಹೇಳುತ್ತಿದ್ದರೂ, ವ್ಯಕ್ತಪಡಿಸಿದ್ದಾರೆ. ಆದರೆ ಮೋದಿ ಸರಕಾರ ಮಾತ್ರ ಪೂರೈಕೆಯನ್ನು ಹೆಚ್ಚಿಸ ಬೇಕೆಂದು ಕಾರ್ಪೊರೇಟ್‌ಗಳ ಪರವಾದ ಕ್ರಮಗಳನ್ನೇ ವಹಿಸಿದೆ.



ಸಪ್ಟಂಬರ್ 30ರಂದು ನಡೆದ ರಾಷ್ಟ್ರೀಯ ಬಹಿರಂಗ ಸಾಮೂಹಿಕ ಕಾರ್ಮಿಕ ಸಮಾವೇಶ ಒಗೀಕರಿಸಿದ ಮುಂದಿನ ಮೂರು ತಿಂಗಳ ಕಾರ್ಯಾಚರಣೆಯ ಕಾರ್ಯಕ್ರಮ:

1. **ಅಕ್ಟೋಬರ್ ಮತ್ತು ನವಂಬರ್ ತಿಂಗಳುಗಳಲ್ಲಿ ವಲಯ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಕಾರ್ಮಿಕರ ಸಮಾವೇಶಗಳು**
2. **ಡಿಸೆಂಬರ್ ತಿಂಗಳಲ್ಲಿ ಸಮಾವೇಶದ ಘೋಷಣೆಯನ್ನು ಕಾರ್ಖಾನೆ, ಕಚೇರಿಗಳು, ಸಂಘ-ಸಂಸ್ಥೆಗಳು ಮತ್ತು ತಳಮಟ್ಟದ ವರೆಗೆ ಒಯ್ಯುವ ಸಾಧ್ಯವಾದಷ್ಟು ವ್ಯಾಪಕವಾದ ಚಟುವಟಿಕೆಗಳು**
3. **ಜನವರಿ 8, 2020 ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ**

ರಾಷ್ಟ್ರೀಯ ಸಮಾವೇಶ ಅಂಗೀಕರಿಸಿದ ಮುಷ್ಕರದ ಪ್ರಮುಖ ಬೇಡಿಕೆಗಳು :

* ಕನಿಷ್ಟ ವೇತನ 21 ಸಾವಿರ ನಿಗದಿ ಪಡಿಸಬೇಕು.
* ಎಲ್ಲರಿಗೂ ಪಿಂಚಣಿ ನೀಡಬೇಕು.
* ನೂತನ ಪಿಂಚಣಿ ಯೋಜನೆಯನ್ನು ರದ್ದು ಮಾಡಿ, ಹಳೆ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು.
* ಬೆಲೆ ಏರಿಕೆ ನಿಯಂತ್ರಿಸಬೇಕು
* ಜೀವನಗತ್ಯ ವಸ್ತುಗಳನ್ನು ಸಾರ್ವಜನಿಕ ಪಡಿತರ ಮೂಲಕ ವಿತರಿಸುವ ವ್ಯವಸ್ಥೆ ಜಾರಿ ಮಾಡಬೇಕು.
* ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕು
* ಮಂಜೂರಾದ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.
* ಯೋಜನಾ ಕಾರ್ಮಿಕರನ್ನು ಸರಕಾರಿ ಹುದ್ದೆಗಳಲ್ಲಿ ನಿಯಮಿತಗೊಳಿಸಬೇಕು
* ಕಾಯಂ ಸ್ವರೂಪದ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಬೇಕು.
* ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಬೇಕು.
* ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗಳನ್ನು ಬಲಗೊಳಿಸಬೇಕು.
* ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ದುಡಿಯುತ್ತಿರುವ ಕೃಷಿಕೂಲಿಕಾರರೂ ಸೇರಿ ಇತರೆ ಶ್ರಮಿಕರ ಆದಾಯಗಳನ್ನು ಹೆಚ್ಚಿಸಬೇಕು.

ಇದರಿಂದ ದುಡಿಯುವ ಜನಗಳ ಕೊಳ್ಳುವ ಸಾಮರ್ಥ್ಯ ಹೆಚ್ಚಿ ದೇಶದ ಆರ್ಥಿಕತೆಗೆ ಉತ್ತೇಜನ ಸಿಗುವಂತೆ ಆಗುತ್ತದೆ.

ಇವುಗಳತ್ತ ಗಮನ ಹರಿಸುವ ಬದಲು ಕೇಂದ್ರ ಸರಕಾರವು ಹಾಲಿ ಇರುವ ಕಾರ್ಮಿಕ ಕಾನೂನುಗಳನ್ನು ಸಂಹಿತೆಗಳನ್ನಾಗಿಸಲು ಹೊರಟಿದೆ. ನಿಗದಿತ ಅವಧಿ ಕೆಲಸಕ್ಕೆ ಅವಕಾಶ ನೀಡಿದೆ. ರೈಲ್ವೆ, ಗಣಿ, ರಕ್ಷಣೆ, ಕಲ್ಲಿದ್ದಲು ಸೇರಿ ಸಾರ್ವಜನಿಕ ಉಧ್ಯಮಗಳಲ್ಲಿ ಶೇ 100 ರಷ್ಟು ವಿದೇಶಿ ಬಂಡವಾಳಕ್ಕೆ ಅವಕಾಶ ಮಾಡಿಕೊಡುವ ಮೂಲಕ ಅವುಗಳ ಖಾಸಗೀಕರಣಕ್ಕೆ ಮುಂದಾಗಿದೆ. ಅಲ್ಲದೆ ಬ್ಯಾಂಕ್‌ಗಳ ವಿಲೀನಕ್ಕೂ ಕೈ ಹಾಕಿದೆ. ಈ ಎಲ್ಲಾ ಕ್ರಮಗಳಿಂದಾಗಿ ಕಾರ್ಮಿಕ ವರ್ಗದ ಮೇಲೆ ಈಗ ನಡೆಯುತ್ತಿರುವ ಶೋಷಣೆಗಳು ಮತ್ತಷ್ಟು ತೀವ್ರಗೊಳ್ಳಲಿವೆ. ಉದ್ಯೋಗಾವಕಾಶಗಳು ಕುಂಠಿತಗೊಳ್ಳುತ್ತವೆ.

ಅಲ್ಲದೆ ಕೇಂದ್ರ ಸರಕಾರವು ಭವಿಷ್ಯನಿಧಿ ಹಾಗೂ

ಪುಟ 11 ಕ್ಕೆ

“ಸಂಪತ್ತಿನ ಸೃಷ್ಟಿಕರ್ತರು ನಾವು, ಕಾರ್ಪೊರೇಟ್‌ಗಳಲ್ಲ”

ಪ್ರಧಾನ ಮಂತ್ರಿಗಳು ತಮ್ಮ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಖಾಸಗಿಕಾರ್ಪೊರೇಟ್‌ಗಳು “ಸಂಪತ್ತಿನ ಸೃಷ್ಟಿಕರ್ತರು”, ಅವರ ನ್ನು ಸಂದೇಹದಿಂದ ಕಾಣಬಾರದು ಎಂದರು. ಬಜೆಟಿನಲ್ಲಿ ಅವರಿಗೆ ನೀಡಿದ ರಿಯಾಯ್ತಿಗಳು ಸಾಲಲಿಲ್ಲವೆಂದು ಮತ್ತೆ ಸುಮಾರು 2.1 ಲಕ್ಷ ಕೋಟಿ ರೂ.ಗಳ ರಿಯಾಯ್ತಿಗಳನ್ನು ‘ಉತ್ತೇಜನೆ’ ಎಂದು ಪ್ರಕಟಿಸಲಾಗಿದೆ. ಇದನ್ನು ಖಂಡಿಸುತ್ತ ಸಪ್ಟಂಬರ್ 30ರ ರಾಷ್ಟ್ರೀಯ ಕಾರ್ಮಿಕರ ಸಮಾವೇಶದ ಘೋಷಣೆ ಹೀಗೆ ಹೇಳಿದೆ:

“ಈ ರಾಷ್ಟ್ರೀಯ ಕಾರ್ಮಿಕ ಸಮಾವೇಶ, ಎಲ್ಲ ಕಾರ್ಮಿಕರಿಗೆ, ಅವರು ಯಾವ ಸಂಘಟನೆಗಳಿಗೆ ಸೇರಿದ್ದರೂ, ಎಲ್ಲರೂ ಕೈಜೋಡಿಸಬೇಕು, ತಂತಮ್ಮ ವಲಯವಾರು ಹೋರಾಟಗಳನ್ನು ಸಂಯೋಜಿಸಿ ಒಂದು ಬೃಹತ್ ದೇಶವ್ಯಾಪಿ ಆಂದೋಲನವಾಗಿ ಬೆಳೆಸಬೇಕು ಎಂದು ಮನವಿ ಮಾಡುತ್ತದೆ. ಇದು ಸರಕಾರ ತನ್ನ ರಾಷ್ಟ್ರ-ವಿರೋಧಿ ಧೋರಣೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಡ ಹಾಕಬೇಕು. ಸಂಪತ್ತಿನ ಸೃಷ್ಟಿಕರ್ತರು ನಾವು ಎಂಬ ಸ್ಪಷ್ಟವಾದ ಸಂದೇಶವನ್ನು ಕಳಿಸೋಣ.

ನಾವು ಸಮುಷ್ಟಿಸಿದ ಸಂಪತ್ತನ್ನು ಕಾರ್ಪೊರೇಟ್‌ಗಳು ಸರಕಾರದ ಹುನನಾರದೊಂದಿಗೆಡ ಲೂಟಿ ಹೊಡಯುತ್ತಿವೆ. ಇದರಿಂದಾಗಿ ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಇಳಿಯುವಂತಾಗಿದೆ, ಅದರಿಂದಾಗಿ ಆರ್ಥಿಕ ಮಂದಗತಿ ಉಂಟಾಗಿದೆ. ನಾವು ನಾವು ಸೃಷ್ಟಿಸಿದ ಸಂಪತ್ತಿನ ಸಮತ್ವಪೂರ್ಣ ಮರುವಿತರಣೆ ನಡೆಯಬೇಕು ಎಂದು ಆಗ್ರಹಿಸುತ್ತೇವೆ .”





ರಾಕಿಗಡಿ ಅಸ್ತಿ ಪಂಜರದ ಡಿ.ಎನ್‌.ಎ. ಅಧ್ಯಯನ:

ಸಿಂಧೂ ಕಣಿವೆಯ ಜನರು ಋಗ್ವೇದಿ ಆರ್ಯರಲ್ಲ ಎಂಬುದಕ್ಕೆ ಮತ್ತಷ್ಟು ಸಾಕ್ಷ್ಯ – ಪ್ರಬೀರ್ ಪುರಕಾಯಸ್ಥ



ಪ್ರಪಂಚದ ಯಾವುದೇ ಭಾಗದಲ್ಲಾದರೂ ಪುರಾತನ ಡಿಎನ್‌ಎ ಅಧ್ಯಯನದಲ್ಲಿ ಆಸಕ್ತಿಯಿರುವುದು ಆ ಕ್ಷೇತ್ರದ ಪರಿಣಿತರಿಗೆ ಮಾತ್ರ. ಆದರೆ ಭಾರತದಲ್ಲಿ ಕೂಡಲೇ ಅದೊಂದು ವಿವಾದದ ವಿಷಯವಾಗುತ್ತದೆ. ಹರ್ಯಾಣ ರಾಜ್ಯದ ಹಿಸ್ಸಾರ್ ಜಿಲ್ಲೆಯ ಗ್ರಾಮ ರಾಕಿಗಡಿಯಲ್ಲಿ ಪುರಾತತ್ವ ಇಲಾಖೆಯ ಉತ್ಖನನದಲ್ಲಿ ದೊರೆತ ಒಬ್ಬ ಪುರಾತನ ಮಹಿಳೆಯ ಅಸ್ಥಿಪಂಜರದ ಡಿಎನ್‌ಎ ಅಧ್ಯಯನ ಅಂತಹ ವಿವಾದವನ್ನು ಸೃಷ್ಟಿಸಿದೆ. ಈ ಅಧ್ಯಯನ ಆರ್ಯರೂ ಭಾರತಕ್ಕೆ ಬಂದ ಹಲವಾರು ಅತಿಕ್ರಮರಾರರಲ್ಲಿ ಒಂದು ಜನಾಂಗ ಎಂಬುದನ್ನು ಈ ಅಧ್ಯಯನ ತಿರಸ್ಕರಿಸಿದೆ ಎಂದು ಈ ಅಧ್ಯಯನ ತಂಡದಲ್ಲಿದ್ದ ಒಬ್ಬ ಪುರಾತತ್ವಜ್ಞ ಪ್ರತಿಕಾಗೋಷ್ಠಿಯೊಂದರಲ್ಲಿ ಸಆರಿದರು. ಆದರೆ ಈ ಅಧ್ಯಯನ ತಂಡದ ಇತರ ಅಧ್ಯಯನಕಾರರು ಈ ವಾದವನ್ನು 'ನಯವಾಗಿಯೇ' ತಿರಸ್ಕರಸಿದ್ದಾರೆ. ಆದರೆ ಸಂಘ ಪರಿವಾರದವರು ಈ ಪತ್ರಿಕಾಗೋಷ್ಟಿಯ ಬಗ್ಗೆ ಭಾರೀ ಪ್ರಚಾರ ನಡೆಸಲು ಹಿಂಜರಿಯಲಿಲ್ಲ. ಅ ಪುರಾತತ್ವಜ್ಞ ಅದೇ ಪರಿವಾರದವರು, ಅಧ್ಯಯನದ ಬದಲು ನಂಬಿಕೆಗೇ ಪ್ರಾಶಸ್ತ್ಯ ಕೊಟ್ಟವರು ಎಂದು ಬೇರೆ ಹೇಳಬೇಕಾಗಿಲ್ಲ. **ಅನು:ಎಂ.ಜಿ.ವೆಂಕಟೇಶ್**

ದಕ್ಷಿಣ ಏಶಿಯಾದ ಬಗ್ಗೆ ನಡೆದ ಇತ್ತೀಚಿನ ಎರಡು ಅಧ್ಯಯನಗಳು ಏಕಕಾಲದಲ್ಲೇ ಪ್ರತಿಷ್ಠಿತ ಪತ್ರಿಕೆಗಳಾದ "ಸೈನ್ಸ್" ಮತ್ತು "ಸೆಲ್" ನಲ್ಲಿ ಪ್ರಕಟನೆಗೊಂಡಿವೆ. ಎರಡರಲ್ಲೂ ಸಾಮಾನ್ಯವಾಗಿ ಅದೇ ಲೇಖಕರಿದ್ದೂ ಮತ್ತು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಅನುವಶಿಕ ಪ್ರಯೋಗಾಲಯವನ್ನು ಬಳಸಿಕೊಂಡಿರುತ್ತಾರೆ. "ಸೈನ್ಸ್" ಪತ್ರಿಕೆಯು ಇರಾನ್, ಮಧ್ಯ ಏಶಿಯಾ ಮತ್ತು ಅನಾಬೋಲಿಯಾ (ಟರ್ಕಿಯ ಏಶಿಯನ್ ಭಾಗ) ಪ್ರದೇಶಗಳ 523 ಪುರಾತನ ಡಿಎನ್‌ಎ* ಸ್ಯಾಂಪಲ್‌ಗಳನ್ನು ದಕ್ಷಿಣ ಏಶಿಯಾದ ಇಂದಿನ ಜನರ ಜತೆಯಲ್ಲಿ ಹೋಲಿಸಿ ಅಧ್ಯಯನ ಮಾಡಿದೆ.

ಆದರೆ "ಸೆಲ್" ನಲ್ಲಿ ಪ್ರಕಟಗೊಂಡ ಅಧ್ಯಯನ ಒಂದೇ ಮಾದರಿಗೆ ಸೀಮಿತವಾಗಿದ್ದು ಕಾರಣ ಸಿಂಧೂ ನಾಗರೀಕತೆಯಿಂದ ಹಿಡಿದು ದಕ್ಷಿಣ ಏಶಿಯಾದಲ್ಲಿ ಆ ಕಾಲದ ಲಭ್ಯ ಡಿಎನ್‌ಎ ಇದೊಂದೇ. ಪ್ರಾಚೀನ ಡಿಎನ್‌ಎ ಲಭ್ಯತೆ ಶೀತ ಮತ್ತು ಒಣಹವೆ ಇರುವ ಪ್ರದೇಶದಲ್ಲಿರುವ ಸಾಧ್ಯತೆ ಹೆಚ್ಚಿದ್ದು ಭಾರತದಲ್ಲಿ ಅಂತಹ ವಾತಾವರಣ ಇಲ್ಲದಿರುವುದರಿಂದ ರಾಕೀಗಡಿಯಲ್ಲಿ ಒಟ್ಟು 61 ಅಸ್ತಿ ಪಂಜರಗಳು ಸಿಕ್ಕಿದ್ದು ಅದರಲ್ಲಿ ಸಿಕ್ಕ ಒಂದು ಮಾದರಿ ಮಾತ್ರ ಅಧ್ಯಯನ ಯೋಗ್ಯವಾಗಿದೆ. ಇದು ವಿಜ್ಞಾನಿಗಳಾದ ವಾಗೀಶ್ ನರಸಿಂಭನ್ ಮತ್ತು ಡೇವಿಡ್ ರೀಚ್ (ಹಾರ್ವಡ್ ಪ್ರಯೋಗಾಲಯದ ಮುಖ್ಯಸ್ಥರು) ಪ್ರಾಚೀನ ಡಿಎನ್‌ಎ ಲಕ್ಷಣ ಅರಿತುಕೊಳ್ಳಲು ಇರುವ ತೊಂದರೆಗಳನ್ನು ಮತ್ತು ಅವುಗಳಿಂದ ತಿಳಿಯಲು ತಾವು ಅನುಸರಿಸಿದ ವಿಧಾನಗಳನ್ನು ವಿವರಿಸಿದ್ದಾರೆ.

ಹಿಂದೆ ರೀಚ್ ಮತ್ತು ಸಂಗಡಿಗರ ಅಧ್ಯಯನ ಸ್ಟೆಪೆ ಜನಾಂಗ** ಅವರ ಡಿಎನ್‌ಎ ಕುರುಹು ಯುರೋಪ್‌ನ ಜನಾಂಗ ಮತ್ತು ದಕ್ಷಿಣ ಏಶಿಯಾದ ಜನರಲ್ಲೂ ಕಾಣುವುದನ್ನು ತೋರಿಸಿದೆ. ದಕ್ಷಿಣ ಏಶಿಯಾದ ಪ್ರಸಕ್ತ ಅನವಂಶಿಕ ಗುಣಲಕ್ಷಣಗಳು ಸ್ಟೆಪೆ ಜನಾಂಗದ ಗುಣಲಕ್ಷಣಗಳನ್ನು ಹೋಲುತ್ತದೆ ವಿಶೇಷವಾಗಿ ಉತ್ತರ ಇಂಡಿಯಾದ ಬ್ರಾಹ್ಮಣ ಪುರುಷ ಸಮುದಾಯದಲ್ಲಿ ಕಾಣುತ್ತದೆ. ಈ ನಿರ್ದಿಷ್ಟ ಗುರುತು ದಕ್ಷಿಣ ಅಥವಾ ಪೂರ್ವಕ್ಕೆ ಹೋಗುವಾಗ ಕಡಿಮೆಯಾಗುತ್ತದೆ ಮತ್ತು ಸ್ಟೆಪೆ ಜನಾಂಗ ಏಶಿಯಾದ ದಕ್ಷಿಣ ಏಶ್ಯಾದ ವಾಯವ್ಯ ಭಾಗದ ಮೂಲಕ ಬಂದಿರುತ್ತಾರೆ. ಈ ಚಿತ್ರವನ್ನು 'ಸೈನ್ಸ್' ಪತ್ರಿಕೆಯ ಅಧ್ಯಯನ ಇನ್ನಷ್ಟು ಸ್ಯಾಂಪಲ್‌ಗಳೊಂದಿಗೆ ಬಲಪಡಿಸುತ್ತದೆ.

"ಸೈನ್" ಪತ್ರಿಕೆಯಲ್ಲಿರುವ ಪ್ರಬಂಧದ ಪ್ರಾಮುಖ್ಯತೆ ರಾಕಿಗಡಿಯಲ್ಲಿನ ಕುರಿತ 'ಸೆಲ್" ಪ್ರಬಂಧದ ಜತೆಯಲ್ಲಿ ಅಧ್ಯಯನ ಮಾಡಿದಾಗ ತಿಳಿಯುತ್ತದೆ. ಅದರಲ್ಲಿ ಪ್ರಸ್ಥಾಪಿಸಲಾದ ಡಿಎನ್‌ಎ ಸುಮಾರು 4500 ವರ್ಷಗಳ ಹಿಂದೆ ಸಂಸ್ಕಾರ ಪೂರ್ವಕವಾಗಿ ಹುಗಿದಿದ್ದ ಅಸ್ತಿಪಂಜರ ಮಹಿಳೆಯದಾಗಿರುತ್ತದೆ. ಇದು ಸ್ಟೆಪೆ ಜನಾಂಗ ವಲಸೆ ಬಂದಿರುವ ಅವಧಿಗಿಂತ 600–1000 ವರ್ಷಗಳ ಮೊದಲೇ ಆಗಿರುತ್ತದೆ. ಇದರಲ್ಲಿ ಸ್ಟೆಪೆ ಜನಾಂಗದ ಕುರುಹು ಕಾಣಿಸುತ್ತಿಲ್ಲ. ಅಂದರೆ ಇಂದು ಈ ಭಾಗಗಳಲ್ಲಿ ಇರುವ ಜನಾಂಗಗಳಲ್ಲಿ ಅಥವಾ ದಕ್ಷಿಣಾ ಏಶಿಯಾದ ಮೇಲ್ಜಾತಿ ಪುರುಷರಲ್ಲಿ ಕಾಣುವ ಸ್ಟೆಪೆ ಜನಾಂಗದ ಕುರುಹು ಕಾಣಿಸಿಲ್ಲ.

ಇನ್ನೂ ಗಮನಾರ್ಹ ಸಂಗತಿಯೆಂದರೆ, ಶಹರ್–ಇ–ಶೋಕಾ (ಇರಾನ್ ದೇಶದ ಕಂಚಿನಯುಗದ ಪುರಾತತ್ವ ಪ್ರದೇಶ) ಮತ್ತು ಗೋನುಟ (ಇಂದಿನ ಟರ್ಕಿಮೇನಿಸ್ಥಾನ್) ಪ್ರದೇಶದಲ್ಲಿ ಸಿಕ್ಕಿರುವ 11 ಅಸ್ತಿ ಪಂಜರಗಳಿಗೂ ಮತ್ತು ರಾಕೀಗಡಿಯಲ್ಲಿ ಸಿಕ್ಕಿರುವ ಅಸ್ತಿ ಪಂಜರದ ಡಿಎನ್‌ಎಗೂ ಸಾಮ್ಯವಿರುವುದು ಕಣ್ಣಿಗೆ ರಾಚುತ್ತದೆ. 1ಈ 11 ಶಹರ್–ಇ–ಶೋಕ್ತ ಅಸ್ತಿ ಪಂಜರಗಳು ಮತ್ತು ರಾಕೀಗಡಿಯಲ್ಲಿನ ಅಸ್ತಿ ಪಂಜರ ದಕ್ಷಿಣ ಏಶಿಯಾದ ಪ್ರಾಚೀನ ಜನಾಂಗದ ಮತ್ತು ಪುರಾತನ ಇರಾನಿಯನ್ ಬೇಟೆಗಾರ–ಸಂಗ್ರಾಹಕ ಜನಾಂಗದ ಬಲವಾದ ಕುರುಹುಗಳನ್ನು ಹೊಂದಿವೆ.

ಇದರಿಂದ ಎರಡು ಹೇಳಿಕೆಗಳನ್ನು ಕೊಡಬಹುದು: ಒಂದು, ಸಿಂಧೂ ಕಣಿವೆಯ ಜನಗಳು ಗೋನುರು ಮತ್ತು ಶಹರ್–ಇ–ಶೋಕ್ತದಲ್ಲಿ ವ್ಯಾಪಾರ ಠಾಣೆಗಳನ್ನು ಹೊಂದಿದ್ದರೂ, ಅಲ್ಲಿನ ಜನಗಳೊಂದಿಗೆ ಅವರಿಗೆ ವಿವಾಹ ಸಂಬಂಧವಿರಲಿಲ್ಲ. ಈ ಅವಧಿಯ 12 ಅಸ್ಥಿಪಂಜರಗಳಲ್ಲಿ ನಂತರ ಬಂದ ಮತ್ತು ಈಗ ಅಲ್ಲಿರುವ ಜನಗಳಲ್ಲಿ ಕಾಣುವ ಸ್ಟೆಪೆ ಜನಾಂಗದ ಕುರುಹು ಇಲ್ಲ. ಅಂದರೆ ನಿಚ್ಚಳವಾಗಿ ಈ ಮೂರು ಪ್ರದೇಶಗಳಲ್ಲಿ ಆ ಅವಧಿಯಲ್ಲಿ ಸ್ಟೆಪೆ ಜನಗಳ ವಲಸೆ ಕಾಣುವುದಿಲ್ಲ.

ಈ ಅಧ್ಯಯನದಲ್ಲಿ ಕಾಣುವ ಮತ್ತೊಂದು ಅಂಶವೆಂದರೆ ಸಿಂಧೂ ಕಣಿವೆಯಲ್ಲಿನ ಜನಗಳಿಗೆ ಮತ್ತು ಜಾಗ್ರೋಸ್ ಪರ್ವತ ಪ್ರದೇಶದ (ಇರಾನ್, ಇರಾಕ್, ಟರ್ಕಿಯಲ್ಲಿನ 1500 ಮೈಲಿ ಪರ್ವತ ಸಾಲು) ಬೇಟೆಗಾರ ಜನಾಂಗಗಳಿಗೆ ನಿಕಟ ಸಂಬಂಧವಿದ್ದರೂ, ಅವರು 12,000 ವರ್ಷಗಳ ಹಿಂದೆಯೇ ಬೇರ್ಪಟ್ಟಿರಬಹುದು. ಈ ಬೇರ್ಪಡೆ ವ್ಯವಸಾಯ ಪದ್ಧತಿ ಆರಂಭಕ್ಕೂ ಹಿಂದಿನ ಅವಧಿಯಲ್ಲಿ ನಡೆದಿದೆ. ಅಂದರೆ ಸಿಂಧೂ ಕಣಿವೆಯಲ್ಲಿ ವ್ಯವಸಾಯ ಸ್ವತಂತ್ರವಾಗಿ ಬೆಳೆದಿರುತ್ತದೆ ಎಂಬುದಕ್ಕೆ ಇದು ಸಾಕ್ಷಿ. ಸಿಂಧೂ ಕಣಿವೆಗೆ ವಲಸೆ ಬಂದದ್ದು ಇರಾನೀ ವ್ಯವಸಾಯಗಾರರಲ್ಲ, ಇನ್ನೂ ಬೇಟೆಗಾರಿಕೆಯಲ್ಲಿ ತೊಡಗಿದ್ದ ಅವರ ಪೂರ್ವಜರು. ಅವರು ಸವತಂತ್ರವಾಗಿ ಇಲ್ಲಿಯೇ ವ್ಯವಸಾಯವನ್ನು ಬೆಳೆಸಿದರು.

ಸಿಂಧೂ ಕಣಿವೆಯಲ್ಲಿ ವ್ಯವಸಾಯ ವಿಸ್ತರಣೆಗೆ ಸಮಾನಾಂತರವಾಗಿ "ಫರ್ಟೈಲ್ ಕ್ರೆಸೆಂಟ್'*** ಎಂದು ಹೇಳಲಾಗುವ ಮಧ್ಯಪೂರ್ವದ ಫಲವತ್ತಾದ ಪ್ರದೇಶಗಳಲ್ಲೂ ವ್ಯವಸಾಯ ಸ್ವತಂತ್ರವಾಗಿ ವಿಸ್ತಾರಗೊಳ್ಳುತ್ತಿತ್ತು. ಇಲ್ಲಿ ಎರಡು ಸ್ಥಳಗಳಲ್ಲಿ ವ್ಯವಸಾಯ ಸ್ವತಂತ್ರವಾಗಿ ಬೆಳೆಯುತ್ತಿತ್ತು ಮತ್ತು ಅವುಗಳಲ್ಲಿ ಎರಡು ದಿಕ್ಕುಗಳಲ್ಲಿ ವಂಶವಾಹಿ(ಜೀನ್)ಗಳ ಹರಿವು ಇತ್ತು. ಆದರೆ ಅಂತಹ ಹರಿವು ಸಿಂಧೂ ಕಣಿವೆಯ ಜನರು ಜಾಗ್ರೋಸ್ ಪರ್ವತ ಪ್ರದೇಶದ ಜನರ ನಡುವೆ ಸಂಭವಿಸಲಿಲ್ಲ.

ಪುಣೆಯ ಡೆಕ್ಕನ್ ಕಾಲೇಜಿನ ಉಪಕುಲಪತಿಗಳಾಗಿದ್ದ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರಾದ ಪ್ರೊ. ಶಿಂಧೆ ರಾಕಿಗಡಿ ಉತ್ಖನನದಲ್ಲಿ ಮುಖ್ಯಸ್ಥರಾಗಿದ್ದರು, ರೀಖ್ ರವರ ತಂಡಕ್ಕೆ ಅಸ್ಥಿಪಂಜರಗಳನ್ನು ಒದಗಿಸಿದವರು ರಾಕೀಗಡಿ ಪ್ರಬಂಧದ ಒಬ್ಬ ಲೇಖಕರೂ ಕೂಡ. ಅವರು ಒಂದು ಪತ್ರಿಕಾಗೋಷ್ಠಿ ನಡೆಸಿ ರಾಕೀಗಡಿಯ ವಂಶವಾಹಿ–ಸಂಬಂಧಿ ಸಾಕ್ಷ್ಯ ಆರ್ಯರ ಅತಿಕ್ರಮಣ ಎಂಬುದು ಇರಲಿಲ್ಲ, ಸಿಂಧೂ ಕಣಿವೆಯ ಜನ ಸಂಸ್ಕೃತ ಮಾತಾಡುತ್ತಿದ್ದರು ಎಂದರು. ಪ್ರಾಚೀನ ಡಿಎನ್‌ಎ ಯಿಂದ ಸಿಂಧೂ ಕಣಿವೆಯ ಜನ ಸಂಸ್ಕೃತ ಮಾತಾಡುತ್ತಿದ್ದರು ಎಂದು ಹೇಳುವುದು ಅಸಂಬದ್ಧ. ಏಕೆಂದರೆ ಯಾವುದೇ ಮನುಷ್ಯನ ಡಿಎನ್‌ಎ ಮುಖಾಂತರ ಆತ ಅಥವ ಆಕೆ ಯಾವ ಭಾಷೆ ಮಾತನಾಡುತ್ತಿದ್ದರೆಂಬುದು ತಿಳಿಯುವುದಿಲ್ಲ. ಪ್ರೊ.ಶಿಂಧೆ ಒಬ್ಬ ಪುರಾತತ್ವಜ್ಞ, ಪುರಾತನ ಡಿಎನ್‌ಎ ಸಾಕ್ಷ್ಯದಿಂದ ತನ್ನ ನಂಬಿಕೆಯನ್ನು ಎತ್ತಿ ಹೇಳುವುದು ಅವರ ಶೈಕ್ಷಣಿಕ ಪರಿಧಿಯ ಹೊರಗಿನ ವಿಷಯ. ಈ ಪ್ರಬಂಧದ ಉಳಿದೆಲ್ಲ ಲೇಖಕರು ಈ ಪ್ರಾಚೀನ ಡಿಎನ್‌ಎ ಸಾಕ್ಷ್ಯ ಪ್ರೊ. ಶಿಂಧೆಯವರ ವಾದವನ್ನು ಪುರಸ್ಕರಿಸುವುದಿಲ್ಲ ಎಂದು 'ನಯವಾಗಿಯೇ' ಹೇಳಿದರು.

ಪ್ರಪಂಚದ ಯಾವುದೇ ಭಾಗದಲ್ಲಾದರೂ ಪುರಾತನ ಡಿಎನ್‌ಎ ಅಧ್ಯಯನದಲ್ಲಿ ಆಸಕ್ತಿಯಿರುವುದು ಆ ಕ್ಷೇತ್ರದ ಪರಿಣಿತರಿಗೆ ಮಾತ್ರ. ಭಾರತದಲ್ಲಿ ಕೂಡಲೇ ಅದೊಂದು ವಿವಾದದ ವಿಷಯವಾಗುತ್ತದೆ. ಸಂಸ್ಕೃತ ಮತ್ತು ವೈದಿಕ ಭಾಷೆ ಮಾತನಾಡುವವರು ಇಲ್ಲಿಯ ಮೂಲನಿವಾಸಿಗಳು ಎಂದು ಹಿಂದುತ್ವ ಪಡೆಯ ಸಿದ್ಧಾಂತದ ಬುನಾದಿ. ಅವರನ್ನು ಹೊರಗಿನಿಂದ ಬಂದ ವಲಸಿಗರೆಂದರೆ ಅವರ ಕೋಮುವಾದಿ ಕಾರ್ಯಸೂಚಿಯಾದ ಭಾರತ ಹಿಂದುಗಳ ಪಿತೃಭೂಮಿ, ಪುಣ್ಯಭೂಮಿ, ಇಲ್ಲಿ ಹಿಂದುಗಳಿಗೆ ವಿಶೇಷ ಹಕ್ಕಿದೆಯೆಂಬ ಅವರ ಕೋಮುವಾದಿ ಅಜೆಂಡಾವನ್ನು ಕೈಬಿಡಬೇಕಾಗುತ್ತದೆ. ಏಕೆಂದರೆ ಆಗ ಋಗ್ವೇದಿ ಆರ್ಯರು ಸಹಿತ ಭಾರತಕ್ಕೆ ಬಂದ ಹಲವಾರು ಆಕ್ರಮಣಕಾರರಲ್ಲಿ ಒಬ್ಬರಾಗುತ್ತಾರೆ.

ಆರ್‌ಎಸ್‌ಎಸ್ ಮತ್ತು ಹಿಂದುಗಳು ಸರ್ವಶ್ರೇಷ್ಠರು ಎಂದು ವಾದಿಸುವವರಿಗೆ ಇಂಡೋ–ಯುರೋಪಿಯನ್ ಭಾಷಾಗುಂಪಿಗೆ ಸೇರಿದ ವೈದಿಕ ಸಂಸ್ಕೃತ ಭಾಷೆಯನ್ನಾಡುವವರು ಹೊರಗಿನಿಂದ ಬಂದವರು ಎಂಬದು ಅಪಥ್ಯ. ಈ ಕುರಿತ ಯಾವುದೇ ಸಾಕ್ಷ್ಯವನ್ನು ಅವರು ತಿರಸ್ಕರಿಸುತ್ತಾರೆ. ಏಕೆಂದರೆ ಅವರಿಗೆ ಆ ಸಾಕ್ಷ್ಯಕ್ಕಿಂತ ಅವರ ನಂಬಿಕೆ ಮುಖ್ಯ. ನಮ್ಮ ಹಿಂದಿನ ಐಸಿಎಚ್‌ಆರ್(ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ)ಅಧ್ಯಕ್ಷ ಪ್ರೊ. ವೈ.ಎಸ್. ರಾವ್ ಪ್ರಕಾರ ನಮ್ಮ ಮೌಖಿಕ ಚರಿತ್ರೆ, ಪುರಾಣ ಮತ್ತು ಮಹಾಕಾವ್ಯಗಳಿಗೆ ಸಾಕ್ಷ್ಯಗಳಾಗಿ ಪುರಾತತ್ವ ಮತ್ತು ಭಾಷಾ ಸಾಕ್ಷ್ಯಗಳಿಗಿಂತ ಮೇಲಿನ ಸ್ಥಾನ ಕೊಡಬೇಕು. ಸಂಘಿಗಳ ":ಕೆಳಮಟ್ಟ"ದ ಸಾಕ್ಷ್ಯಗಳ ಪಟ್ಟಿಯಲ್ಲಿ ಈಗ ವಂಶವಾಹಿ ಸಾಕ್ಷ್ಯವನ್ನು ಸೇರಿಸಬೇಕಾಗಿದೆ; ಅದು ಇಂಡೋ–ಯುರೋಪಿಯನ್ ಭಾಷೆಗಳನ್ನಾಡುವವರು ದಕ್ಷಿಣ ಏಶ್ಯಾದ ಮೂಲನಿವಾಸಿಗಳು ಎಂಬುದನ್ನು ಊರ್ಜಿತಗೊಳಿಸಿದರೆ ಮಾತ್ರ ಅದನ್ನು ಸ್ವೀಕರಿಸಬೇಕು, ಇಲ್ಲವಾದರೆ ತಿರಸ್ಕರಿಸಬೇಕು!

* ಡಿಎನ್‌ಎ ಅಂದರೆ ಡಿ ಆಕ್ಸಿರೈಬೋ ನ್ಯೂಕ್ಲಿಕ್ ಆ್ಯಸಿಡ್ ಸಮಸ್ತ ಜೀವಿಗಳಲ್ಲಿ ಇರುವಂತಹ ಜೈವಿಕ ಕಣ. ಇದು ನಮ್ಮ ಜೀವಕೋಶಗಳಲ್ಲಿ ಅಡಗಿರುತ್ತದೆ ಮತ್ತು ಪ್ರತಿಯೊಬ್ಬನ ಬೆರಳಚ್ಚಿನಂತೆ ಅನನ್ಯವಾಗಿರುತ್ತದೆ. ಜೀವಿಗಳ ವಿಕಸನ ಹಾದಿ ಪತ್ತೆ ಹಚ್ಚಲು ನೆರವಾಗುತ್ತದೆ.

** ದಕ್ಷಿಣ ಪೂರ್ವ ಯುರೋಪ್ ಅರಣ್ಯ ರಹಿತ ಹುಲ್ಲುಗಾವಲು ಪ್ರದೇಶದ ಜನಾಂಗ)

*** ಈಗಿನ ಇರಾಕ್, ಇಸ್ರೇಲ್, ಪ್ಯಾಲೆಸ್ತೀನ್, ಸಿರಿಯ, ಲೆಬನಾನ್, ಇಜಿಪ್ಟ್ ಮತ್ತು ಜೋರ್ಡನ್‌ನ್ನು ಆವರಿಸಿರುವ ಮಧ್ಯಪ್ರಾಚ್ಯದ ವಕ್ರಚಂದ್ರಾಕೃತಿಯ ಫಲವತ್ತಾದ ಪ್ರದೇಶ

'ನಾವು ಸಂಘ ಕಟ್ಟದಂತೆ' ಮಾಡುವ 'ಕಾರ್ಮಿಕ ಸಂಹಿತೆ'

ಪುಟ 8 ರಿಂದ

ಇರುವ ಕನಿಷ್ಠ ಕೂಲಿ ಇದಕ್ಕಿಂತ ಹೆಚ್ಚಿದೆ. ಸಾಮಾನ್ಯವಾಗಿ 'ತಳಮಟ್ಟದ ವೇತನ' ಪ್ರಚಲಿತ ವೇತನವನ್ನು ಹೆಚ್ಚಿಸಬೇಕು. ಆದರೆ ಈ ಸಂಹಿತೆ ವೇತನವನ್ನು 'ತಳಮಟ್ಟ'ಕ್ಕೆ ಇಳಿಸುವಂತೆ ಕಾಣುತ್ತದೆ. 'ತಳಮಟ್ಟದ ವೇತನ'ದ ಪರಿಕಲ್ಪನೆ 'ಬಡತನದ ರೇಖೆ'ಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ಪರಿಕಲ್ಪನೆ. ಇದನ್ನು ಬಡವರ ಬಳಕೆಯ ಮಟ್ಟದ ಮೂಲಕ ನಿರ್ಧರಿಸಲಾಗುತ್ತದೆ. ಆದರೆ ಇದನ್ನು ಕನಿಷ್ಠ ವೇತನವನ್ನು ನಿರ್ಧರಿಸಲು ಬಳಸುವುದು ತಪ್ಪು. 15ನೇ ಇಂಡಿಯನ್ ಲೇಬರ್ ಕಾನ್ಫರೆನ್ಸ್ ಪ್ರಸ್ತಾವಿಸಿದ ಮತ್ತು ಸುಪ್ರೀಂ ಕೋರ್ಟು ಎತ್ತಿ ಹಿಡಿದ ಆವಶ್ಯಕತೆ ಆಧಾರಿತ ಕನಿಷ್ಠ ವೇತನವನ್ನು ಈ ಸಂಹಿತೆ ಬಳಸಬೇಕು. 2000 ಕನಿಷ್ಠ ಕೂಲಿಯ ಅಧಿಸೂಚನೆಗಳಿಗೆ ಒಳಪಟ್ಟ ಎಲ್ಲ ಕಾರ್ಮಿಕರನ್ನು, ಈ ಸಂಹಿತೆಯಲ್ಲಿ ಆವಶ್ಯಕತೆ–ಆಧಾರಿತ ಕನಿಷ್ಠ ವೇತನವನ್ನು ಒಳಗೊಳ್ಳಲು ತಿದ್ದುಪಡಿ ತರಲು ಹೋರಾಡಬೇಕು. ಕನಿಷ್ಠ ವೇತನವನ್ನು ನಿರ್ಧರಿಸಲು ಒಂದು ಪರಿಣತರ ಸಂಘಟನೆ ಇರುವಾಗ ಸರಕಾರವೇ ವೇತನವನ್ನು ನಿರ್ಧರಿಸುವುದು ಕಾನೂನುಬಾಹಿರ. ಇದನ್ನು ಸಹ ಕಾರ್ಮಿಕರ ಚಳುವಳಿ ಎತ್ತಿಕೊಳ್ಳಬೇಕು. ಪ್ರತಿ ಕಾರ್ಮಿಕನಿಗೆ ಜೀವನಾವಶ್ಯಕ ವೇತನದ (ನ್ಯಾಯ ವೇತನಕ್ಕಿಂತ ಹೆಚ್ಚಿರುವ) ಜಾರಿ ಒಂದು ಸಾಂವಿಧಾನಿಕ ಗುರಿ. ಆದರೆ ಅದರಿಂದ ನಾವು ಬಲು ದೂರವಿದ್ದೇವೆ ಎಂದು ಪ್ರೊ. ಮ್ಯಾಥ್ಯೂ ತಿಳಿಸಿದರು.

ಈ ವಿಚಾರ ಸಂಕಿರಣದಲ್ಲಿ ಸಮಾಜ ವಿಜ್ಞಾನದ ವಿದ್ಯಾರ್ಥಿಗಳು, ಸಂಶೋಧಕರು, ಪ್ರಾಧ್ಯಾಪಕರುಗಳು ಒಂದು ಕಡೆ, ಕಾರ್ಮಿಕ ಸಂಘ ಮತ್ತು ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು, ನಾಯಕರು ಮತ್ತು ಕಾರ್ಮಿಕರು ಭಾಗವಹಿಸಿ ಚರ್ಚೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಪ್ರಜಾಸತ್ತಾತ್ಮಕ, ಬಹುತ್ವದ ಮತ್ತು ಎಲ್ಲರನ್ನು ಒಳಗೊಳ್ಳುವ ಸಮಾಜದ ನಾಗರಿಕರಾಗುವ ಬೆಂಗಳೂರಿನ ಜನರ ಸಾಂವಿಧಾನಿಕ ಹಕ್ಕುಗಳನ್ನು ಎತ್ತಿ ಹಿಡಿಯಲು ಶ್ರಮಿಸುವ ಸಾರ್ವಜನಿಕ ವೇದಿಕೆಯಾಗಿರುವ 'ಬೆಂಗಳೂರು ಕಲೆಕ್ಟಿವ್' ಇದನ್ನು ಸಂಘಟಿಸಿತ್ತು.

ಹೆಸರು ಬದಲಾವಣೆಯಿಂದ ಅಸಮಾನತೆ ನಿವಾರಣೆ ಸಾಧ್ಯವೆ?



ಗುರುರಾಜ ದೇಸಾಯಿ

ಪ್ರಾದೇಶಿಕ ಅಸಮಾನತೆ ನಿವಾರಿಸುವ ಮೂಲಕ ಈ ಭಾಗದ ಜನರ ಬದುಕು ಹಸನಾಗುತ್ತದೆ ಎಂದು 371(ಜೆ) ಕಲಂ ನ ವಿಶೇಷ ಸ್ಥಾನಮಾನ ಈ ಭಾಗದ 06 ಜಿಲ್ಲೆಗಳಿಗೆ ದೊರಕಿದ ದಿನವದು. ಶಿಕ್ಷಣ, ಉದ್ಯೋಗದ ಸಮಸ್ಯೆ ನಿವಾರಣೆಯಾಗುತ್ತದೆ ಎಂದು ಈ ಭಾಗದ ಜನ ಸಂಭ್ರಮಿಸಿದರು. ಆದರೆ ಆ ಸಂಭ್ರಮ ಇನ್ನೂ ಜನರ ಕೈಗೆ ಸಿಕ್ಕಿಲ್ಲ. ಅಸಮಾನತೆಯನ್ನು ಹೋಗಲಾಡಿಸಲು 2000 ರಲ್ಲಿ ರಚನೆಯಾಗಿದ್ದ ಡಾ. ಎಂ ನಂಜುಂಡಪ್ಪ ಸಮಿತಿಯ ವರದಿ ನೀಡಿ 18 ವರ್ಷ ಕಳೆದಿವೆ. ಅಸಮಾನತೆಯ ಕೂಗು ಇನ್ನು ನಿಂತಿಲ್ಲ.ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೆ 371(ಜೆ) ಅನ್ವಯ ಕೇಂದ್ರ ಸರ್ಕಾರ ವಿಶೇಷ ಸ್ಥಾನಮಾನ ನೀಡಿ ಆರು ವರ್ಷ ಪೂರ್ಣಗೊಂಡು ಆರನೇ ವರ್ಷಕ್ಕೆ ಕಾಲಿಟ್ಟಿದ್ದೆವೆ. (ಜನವರಿ 01, 2013) ಆದರೆ ಅಭಿವೃದ್ಧಿ ಮಾತ್ರ ಮರೀಚಿಕೆಯಾಗಿದೆ. ಈ ಭಾಗದ ರಾಜಕಾರಣಿಗಳಿಗೆ 371(ಜೆ) ಕಲಂ ರಾಜಕೀಯ ದಾಳವಾಗಿದೆಯೇ ಹೊರತು ಇದರಲ್ಲಿರುವ ನ್ಯೂನ್ಯತೆಯನ್ನು ಸರಿಪಡಿಸಲು ಮುಂದಾಗುತ್ತಿಲ್ಲ. ಈ ಭಾಗದಲ್ಲಿ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಖಾಲಿ ಇವೆ. ಶಿಕ್ಷಣ ಇನ್ನೂ ಅಭಿವೃದ್ಧಿ ಕಾಣುತ್ತಿಲ್ಲ. ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಲೆ ಇದೆ? ಸಹಜಾವಾಗಿ ಯಾರಿಗೆ ಮೀಸಲಾತಿ? ಎಲ್ಲಿದೆ ಅಭಿವೃದ್ಧಿ ಎಂಬ ಪ್ರಶ್ನೆ ಮೂಡುತ್ತಿದೆ. ಸದ್ಯ ರಾಜ್ಯ ಸರಕಾರ ಮತ್ತೊಂದು ವಿವಾದ ಎಬ್ಬಿಸಿ ಹೆಸರನ್ನು ಬದಲಾಯಿಸಿ ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಿದೆ. ಹೆಸರನ್ನು ಬದಲಾಯಿಸುವುದರಿಂದ ಈ ಭಾಗ ಅಭಿವೃದ್ಧಿಯಾಗುವುದಿಲ್ಲ ಎಂಬದನ್ನು ನಾವು ಅರಿಯಬೇಕಿದೆ.

ಖಾಲಿ ಖಾಲಿ ಹುದ್ದೆಗಳು:

ಆಡಳಿತ ಇಲಾಖೆಯ ವ್ಯಾಪ್ತಿಗೊಳಪಡುವ 12 ಸರ್ಕಾರಿ ಇಲಾಖೆಗಳು ಮತ್ತು ಇವುಗಳ ಅಧೀನದಲ್ಲಿರುವ ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಈವರೆಗೂ ಹುದ್ದೆಗಳನ್ನು ಗುರುತಿಸಿ, ಸ್ಥಳೀಯ ವೃಂದ ರಚಿಸಿ ಅಧಿಸೂಚನೆ ಹೊರಡಿಸಿಲ್ಲ. ನೇರ ನೇಮಕಾತಿ ಹುದ್ದೆಗಳ ಪೈಕಿ, 12 ಇಲಾಖೆಗಳಲ್ಲಿ 35 ಸಾವಿರಕ್ಕೂ ಹುದ್ದೆಗಳನ್ನು ಖಾಲಿ ಇವೆ. ಹುದ್ದೆಗಳ ಭರ್ತಿ ಪ್ರಕ್ರಿಯೆಗೆ ಇನ್ನೂ ಚಾಲನೆ ಸಿಕ್ಕಿಲ್ಲ. ಅದೇ ರೀತಿ, ಬಡ್ತಿ ಮೂಲಕ 37 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಬೇಕಿದೆ.

ಕಳೆದ ಐದು ವರ್ಷಗಳಿಂದಲೂ ಸ್ಥಳೀಯ ವೃಂದ ರಚನೆ ಮಾಡದ ಇಲಾಖೆಗಳ ಪಟ್ಟಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ, ಕೃಷಿ, ಹಿಂದುಳಿದ ವರ್ಗಗಳ ಕಲ್ಯಾಣ, ಉನ್ನತ ಶಿಕ್ಷಣ, ಒಳಾಡಳಿತ ಸಾರಿಗೆ, ಆರೋಗ್ಯ, ಕುಟುಂಬ ಕಲ್ಯಾಣ, ಆರ್‌ಡಿಪಿಆರ್, ಕೃಷಿ, ಪ್ರಾಥಮಿಕ, ಪ್ರೌಢಶಿಕ್ಷಣ, ಪಶುಸಂಗೋಪನೆ, ಮೀನುಗಾರಿಕೆ, ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿನ ವಿವಿಧ ನಿಗಮ, ಮಂಡಳಿ, ಪ್ರಾಧಿಕಾರ, ಆಯೋಗಗಳು ಇವೆ.

ನೇಮಕಾತಿ ನಡೆಸಬೇಕಿರುವ ಇಲಾಖೆಗಳ ಪೈಕಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯಲ್ಲೇ 6728 ಹುದ್ದೆಗಳು ಭರ್ತಿಯಾಗಬೇಕಿದೆ. ಅದೇ ರೀತಿ, ಅರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯಲ್ಲಿ 4780 ಹುದ್ದೆ ಭರ್ತಿಯಾಗಬೇಕಿದೆ. ನಗರಾಭಿವೃದ್ಧಿ ಇಲಾಖೆಯಲ್ಲಿ 4870, ಸಮಾಜ ಕಲ್ಯಾಣ ಇಲಾಖೆಯಲ್ಲಿ 3600 ಹುದ್ದೆಗಳು ಖಾಲಿ ಇವೆ. ಹಾಗೆಯೇ, ಬಡ್ತಿ ಮೂಲಕ ತುಂಬಬೇಕಿರುವ ಇಲಾಖೆಗಳ ಪೈಕಿ ಪ್ರಾಥಮಿಕ, ಪ್ರೌಢಶಿಕ್ಷಣ ಇಲಾಖೆಯೊಂದರಲ್ಲೇ 30,173 ಹುದ್ದೆಗಳಿವೆ.

ಶೇ.80 ಮೀಸಲು ಎಂಬ ಹಗಲುಗನಸು:

ಹೈಕ ವ್ಯಾಪ್ತಿಗೆ ಒಳಪಡುವ ಆರು ಜಿಲ್ಲೆಗಳಲ್ಲಿ ಉದ್ಯೋಗ, ಶಿಕ್ಷಣ ಕ್ಷೇತ್ರಗಳಲ್ಲಿ ಶೇ.80ರಷ್ಟು ಮೀಸಲು ಇದೆ. ಅತಿ ಹಿಂದುಳಿದ ಈ ಜಿಲ್ಲೆಗಳು ಇದರಿಂದ ಅಭಿವೃದ್ಧಿ ಪಥದತ್ತ ಸಾಗುತ್ತಿವೆ. ಇನ್ನು ಹೈಕ ಜನರಿಗೆ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಶೇ.8 ರಷ್ಟು ಮೀಸಲು ಇದೆ. ಆದರೆ ಇದರ ಅನ್ವಯ ಉದ್ಯೋಗ ಸಿಕ್ಕಿದೆ ಅಥವಾ ಶಿಕ್ಷಣ ಪಡೆದಿದ್ದೇನೆ ಎಂದೂ 06 ಜಿಲ್ಲೆಯಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ.

6 ಜಿಲ್ಲೆಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ಮೂಲ ಸೌಕರ್ಯಗಳ ಅನುಷ್ಠಾನಕ್ಕಾಗಿ ಹೈದ್ರಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಲಾಗಿದೆ. ಅದಕ್ಕಾಗಿ ಸಾಕಷ್ಟು ಅನುದಾನ ಬರುತ್ತಿದ್ದರೂ ಅದನ್ನು ಸಮರ್ಪಕವಾಗಿ ಬಳಸುವಲ್ಲಿ ರಾಜಕೀಯ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ.

ಕ್ರಿಯೆಯೇ ಇಲ್ಲದ ಕ್ರಿಯಾ ಯೋಜನೆ:

ಸಾವಿರ ಸಾವಿರ ಕೋಟಿ ಹಣ ಬರುತ್ತಿದ್ದರೂ ಈ ಭಾಗ ಅಭಿವೃದ್ಧಿ ಕಾಣುತ್ತಿಲ್ಲ. ಜಿಲ್ಲಾಧಿಕಾರಿಗಳ ನಿರ್ಲಕ್ಷ್ಯ ಇದರಲ್ಲಿ ದೊಡ್ಡದಿದೆ. ಬಹುತೇಕ ಜಿಲ್ಲಾಧಿಕಾರಿಗಳು ಆ ಭಾಗದ ಶಾಸಕರ ಮತ್ತು ಸಚಿವರ ಹಾಗೂ ಲೋಕಸಭಾ ಸದಸ್ಯರ ಕೈಗೊಂಬೆಯಾಗಿದ್ದಾರೆ. ಕ್ರಿಯಾ ಯೋಜನೆ ರಚಿಸಿ ಹೈಕ ಮಂಡಳಿಗೆ ನೀಡಲು ಇವರಿಗೆ ಆಸಕ್ತಿ ಇಲ್ಲ. ಒಂದು ಮಾಹಿತಿಯ ಪ್ರಕಾರ ಕಳೆದ ವರ್ಷ ಉಳಿದ 1000 ಕೋಟಿ ರೂ ಸೇರಿ 2018-19 ನೇ ಸಾಲಿಗೆ ಈ ಕೆಳಗಿನಂತೆ ಹಣ ಬಿಡುಗಡೆಯಾಗಿದೆ. ಬೀದರ 231,17 ಕೋಟಿ ರೂ., ಕಲಬುರ್ಗಿಗೆ 433,67 ಕೋಟಿ ರೂ, ರಾಯಚೂರಿಗೆ 180,99 ಕೋಟಿ ರೂ, 277,76 ಕೋಟಿ ರೂ ಕೊಪ್ಪಳಕ್ಕೆ, ಬಳ್ಳಾರಿ ಜಿಲ್ಲೆಗೆ 256,26 ಕೋಟಿ ರೂ ಹಂಚಿಕೆ ಮಾಡಲಾಗಿದೆ. ಆದರೆ ಇಲ್ಲಿಯ ವರೆಗೆ ಕ್ರಿಯಾಯೋಜನೆ ನೀಡಿಲ್ಲ.

ಮೂಲ ಸೌಲಭ್ಯಗಳ ಕೊರತೆ:

ಹೈ.ಕ ಅಭಿವೃದ್ಧಿ ಮಂಡಳಿ ರಚನೆಯಾಗಿದ್ದು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ, ಶಿಕ್ಷಣ, ಆರೋಗ್ಯದಲ್ಲಿ ಸುಧಾರಣೆಗಳನ್ನು ತರುವುದಕ್ಕಾಗಿ. ಆದರೆ ಇನ್ನೂ ಗ್ರಾಮೀಣ ಪ್ರದೇಶದ ರಸ್ತೆಗಳು ಸುಧಾರಣೆಯಾಗಿಲ್ಲ. ಆರೂ ಜಿಲ್ಲೆಯ ಬಹುತೇಕ ರಸ್ತೆಗಳು ಧೂಳಿನಂದ ಕುಡಿವೆ. ಈ ಕಾರಣಕ್ಕಾಗಿ ಅನೇಕ ರೋಗಗಳು ಬರುತ್ತಿವೆ. ಸರಿಯಾಗಿ ಚಿಕಿತ್ಸೆ ಸಿಗದ ಕಾರಣ ಸಣ್ಣವಯಸ್ಸಿನಲ್ಲಿಯೇ ವಿಧವೆ/ವಿಧುರರಾಗುತ್ತಿದ್ದಾರೆ. ಅನೇಕ ಗ್ರಾಮಗಳಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಶಾಲೆ? ಕಾಲೇಜು? ಹಾಸ್ಟೇಲ್ ಗಳು ಮೂಲ ಸೌಕರ್ಯಗಳಿಲ್ಲದೆ ಸೊರಗಿಹೋಗಿವೆ. ಈ ಸೌಲಭ್ಯವನ್ನು ಜನರಿಗೆ ತಲುಪಿಸಬೇಕಾದ ರಾಜಕಾರಣಿಗಳ ಜೇಬು ತುಂಬಿತುಳುಕುತ್ತಿದೆ. ದೊಡ್ಡದೊಡ್ಡದಾದ ಬಂಗಲೆ, ಕಾರು, ಅವರ ಸ್ವಂತದ್ದ ವ್ಯಾಪರ ವಹಿವಾಟುಗಳ ಅಭಿವೃದ್ಧಿಗೆ ಉಸ್ತುಕರಾಗಿದ್ದಾರೆ. ಚುನಾವಣೆ ಬಂದಾಗ ಮಾತ್ರ ನೆನಪಾಗುವ 371(ಎ) ಕಲಂ ರಾಜ ಕಾರಣಿಗಳ ಅಸ್ತ್ರದ ಸಂಖ್ಯೆಯಾಗಿದೆ. ಯಾರಿಗೆ ಮೀಸಲಾತಿ? ಎಲ್ಲಿದೆ ಅಭಿವೃದ್ಧಿ ಎಂಬ ಪ್ರಶ್ನ ಸಹಜವಾಗಿ ಕಾಡತೊಡಗುತ್ತದೆ. ಇಲ್ಲಿಯ ಜನ ಈ ಸೌಲಭ್ಯಗಳನ್ನು ಪಡೆಯಲು ಜನಚಳುವಳಿ ನಡೆಸುವ ಅಗತ್ಯವಿದೆ.

ಮತ್ತೊಂದು ಕಾರ್ಮಿಕರ ರಾಷ್ಟ್ರೀಯ ಮುಷ್ಕರ

ಪುಟ 9 ರಿಂದ



ಇಎಸ್ಐ ಕಾನೂನುಗಳ ಅಡಿಯಲ್ಲಿ ಮಾಲೀಕರು ಇದುವರೆಗೂ ಪಾವತಿಸುತ್ತಿದ್ದ ವಂತಿಗೆ ಪ್ರಮಾಣವನ್ನು ಕಡಿಮೆ ಮಾಡಿದೆ. ಇದರಿಂದಾಗಿ ಕಾರ್ಮಿಕರು ಹೆಚ್ಚಿನ ಹಣವನ್ನು ಮನೆಗೆ ಕೊಂಡೊಯ್ಯಬಹುದೆಂಬ ಹುಸಿವಾದವನ್ನು ಮುಂದು ಮಾಡಿ ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಿದೆ. ಇವನ್ನೆಲ್ಲ "ಈಸ್ ಆಫ್ ಡೂಯಿಂಗ್ ಬಿಸಿನೆಸ್" (ವ್ಯಾಪಾರ ಸುಗಮತೆ) ಹೆಸರಿನಲ್ಲಿ ಮಾಡುತ್ತಿದೆ. ಈ ಕುರಿತ ವಿಶ್ವಬ್ಯಾಂಕಿನ 'ರ‍್ಯಾಂಕಿಂಗ್'ನಲ್ಲಿ ಭಾರತದ ಸ್ಥಾನ ಮೇಲೇರುತ್ತಿದೆ ಎಂದು ಮೋದಿ ಸರಕಾರ ಬೆನ್ನು ತಟ್ಟಿಕೊಳ್ಳುತ್ತಿದೆ. ಆದರೆ ಇವಕ್ಕೆಲ್ಲ ಭಾರೀ ಬೆಲೆ ತೆರುತ್ತಿರುವವರು ಕಾರ್ಮಿಕರು.

ಎಲ್ಲಾ ವಿಭಾಗಗಳ ಕಾರ್ಮಿಕರು ಪ್ರಬಲ ಹೋರಾಟಗಳ ಮೂಲಕ ಸರಕಾರದ ಈ ಕ್ರಮಗಳನ್ನು ಪದೇ ಪದೇ ವಿರೋಧಿಸುತ್ತಲೇ ಬಂದಿದ್ದಾರೆ. ಆದರೆ ಸರಕಾರ ಭಾವನಾತ್ಮಕ ಹಾಗೂ ಕೋಮು ವಿಭಜನಾ ತಂತ್ರಗಳನ್ನು ಬಳಸಿ ಕಾರ್ಮಿಕ ವರ್ಗದ ಪ್ರಶ್ನೆಗಳನ್ನು ನಗಣ್ಯಗೊಳಿಸುವ ಯತ್ನಗಳನ್ನು ನಡೆಸುತ್ತಿದೆ. ಇದನ್ನು ತಡೆಯಲು ಕಾರ್ಮಿಕರ ರಾಷ್ಟ್ರೀಯ ಬಹಿರಂಗ ಸಾಮೂಹಿಕ ಸಮಾವೇಶವು ದೃಢ ನಿರ್ಧಾರ ಕೈಗೊಂಡಿದೆ. ಕೇಂದ್ರ ಸರಕಾರ ಜಾರಿಗೊಳಿಸುತ್ತಿರುವ ಮೇಲ್ಕಂಡ ಎಲ್ಲಾ ಕಾರ್ಮಿಕ ವಿರೋಧಿ ಹಾಗೂ ಜನವಿರೋಧಿ ಅಂಶಗಳ ವಿರುದ್ಧ ಹಾಗೂ ಕಾರ್ಮಿಕ ವರ್ಗದ ಬೇಡಿಕೆಗಳಿಗಾಗಿ 2020ರ ಜನವರಿ 8 ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸಲು ನಿರ್ಧರಿಸಿದೆ. ಈ ಮುಷ್ಕರದ ಯಶಸ್ವಿಗೆ ವಿಭಾಗವಾರು ಹಾಗು ರಾಜ್ಯ ಮಟ್ಟದ ಸಮಾವೇಶಗಳನ್ನು ಸಂಘಟಿಸಲು, ಎಲ್ಲಾ ವಿಭಾಗಗಳ ಕಾರ್ಮಿಕರ ನಡುವೆ ವ್ಯಾಪಕ ಪ್ರಚಾರ ನಡೆಸಲು ರಾಷ್ಟ್ರೀಯ ಸಮಾವೇಶವು ಕರೆ ನೀಡಿದೆ.

ಸಮಾವೇಶವನ್ನು ಶಾಮ್ ಸುಂದರ್ ಯಾದವ್ (INTUC), ರಾಮೇಂದರ್ ಕುಮಾರ್ (AITUC), ಸಿ.ಎ. ರಾಜಶ್ರೀಧರ್ (HMS), ಡಾ. ಕೆ. ಹೇಮಲತ (CITU), ಆರ್. ಕೆ. ಪರಾಶರ್ (AIUTUC), ಜಿ.ಆರ್.ಶಿವಶಂಕರ್ (TUCC), ಲತಾ (SEWA), ಸರ್‌ಭಜೀತ್ ಸಿಂಗ್ (AICCTU), ವಿ. ಸುಬ್ರಮಣ್ಯ (LPF), ಶತ್ರುಜೀತ್ ಸಿಂಗ್ (UTUC) ನೇತೃತ್ವದ ಅಧ್ಯಕ್ಷೀಯ ಮಂಡಳಿ ನಿರ್ವಹಿಸಿತು.

ಸಮಾವೇಶದಲ್ಲಿ ಐಎನ್‌ಟಿಯುಸಿ ಪರವಾಗಿ ಅಶೋಕ್ ಸಿಂಗ್, ಎಐಟಿಯುಸಿ ಯ ಅಮರ್‌ಜೀತ್ ಕೌರ್, ಹೆಚ್‌ಎಂಎಸ್ ನ ಹರ್‌ಭಜನ್ ಸಿಂಗ್ ಸಿದ್ದು, ಸಿಐಟಿಯು ನ ತಪನ್ ಸೇನ್, ಎಐಯುಟಿಯುಸಿಯ ಶಂಕರ್ ಸಹಾ, ಟಿಯುಸಿಸಿಯ ಜಿ.ದೇವರಾಜನ್, ಸೇವಾ ಪರವಾಗಿ ಸೋನಿಯಾ, ಎಐಸಿಸಿಟಿಯು ನ ರಾಜೀವ್ ದಿಮ್ರೀ, ಎಲ್‌ಪಿಎಫ್ ಎಂ ಷಣ್ಮುಖಮ್, ಎಂ.ಪಿ, ಯುಟಿಯುಸಿ ಎನ್‌ಕೆ. ಪ್ರೇಮ್ ಚಂದ್ರನ್ ಪ್ರಮುಖ ಭಾಷಣ ಮಾಡಿದರು.

ಈ ಐತಿಹಾಸಿಕ ಮುಷ್ಕರವನ್ನು ಇಡೀ ರಾಜ್ಯದ ಕಾರ್ಮಿಕರ ಕೆಲಸದ ಸ್ಥಳ ಮಾತ್ರವಲ್ಲ ಅವರ ವಾಸಸ್ಥಳದವರೆಗೂ ಕೊಂಡೊಯ್ದು ಮೋದಿ-2 ಸರಕಾರದ ನೈಜ ಮುಖವಾಡವನ್ನು ಬಯಲಿಗೊಳಿಸುವ ಪ್ರಯತ್ನಗಳನ್ನು ಆರಂಭಿಸೋಣ.

ತ್ರಿಪುರ: ದಲಿತರ ರ‍್ಯಾಲಿಗೆ ಪೊಲೀಸ್ ಅನುಮತಿ ನಿರಾಕರಣೆ



"ಸ್ವತಂತ್ರವಾಗಿ ತೀರ್ಮಾನ ಕೈಗೊಳ್ಳಲಾಗದ ಪೊಲೀಸ್ ಇಲಾಖೆಗೆ ನಾಚಿಕೆಯಾಗಬೇಕು" ಎಂದು ತ್ರಿಪುರದ ಸಿಪಿಐ(ಎಂ) ಶಾಸಕರಾದ ರತನ್ ಭೌಮಿಕ್ ಬಿಜೆಪಿ ಸರ್ಕಾರದ ಒತ್ತಡಕ್ಕೆ ಒಳಗಾಗಿ ದಲಿತರ ರ‍್ಯಾಲಿಗೆ ಕೊನೆಯ ಗಳಿಗೆಯಲ್ಲಿ ಅನುಮತಿ ನಿರಾಕರಿಸಿದ ತ್ರಿಪುರಾ ಪೊಲೀಸರ ಕ್ರಮವನ್ನು ಪ್ರತಿಭಟಿಸಿ ರಸ್ತೆಯ ಮೇಲೆ ಕುಳಿತು ಧರಣಿ ನಡೆಸುತ್ತಿದ್ದ 10 ಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ತ್ರಿಪುರ ತಪಸಿಲಿ ಜಾತಿ ಸಮನ್ವಯ ಸಮಿತಿ ವತಿಯಿಂದ ಸೆಪ್ಟೆಂಬರ್ 1 ರಂದು ಅಗರ್ತಲಾದಲ್ಲಿ ದಲಿತರ ಒಂದು ಸಮಾವೇಶವನ್ನು ಏರ್ಪಡಿಸಲಾಗಿತ್ತು. ದೇಶದಲ್ಲಿ ಮತ್ತು ತ್ರಿಪುರ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹೆಚ್ಚುತ್ತಿರುವ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಜನಚಳುವಳಿಯನ್ನು ರೂಪಿಸಲು ಈ ಸಮಾವೇಶ ಕರೆಯಲಾಗಿತ್ತು. ಬೃಹತ್ ಮೆರವಣಿಗೆಯನ್ನು ಸಂಘಟಿಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಉದ್ದೇಶಿಸಲಾಗಿತ್ತು. ಸಾಕಷ್ಟು ಪೂರ್ವಭಾವಿಯಾಗಿ ಮೆರವಣಿಗೆಗೆ ಪೊಲೀಸರ ಅನುಮತಿ ಕೋರಲಾಗಿತ್ತು. ಪೊಲೀಸರು ಬಾದರ್‌ಘಾಟ್ ಕ್ಷೇತ್ರದ ಉಪಚುನಾವಣೆಯ ನೆಪ ಮುಂದಿಟ್ಟು ಮೆರವಣಿಗೆಗೆ ಅನುಮತಿ ನಿರಾಕರಿಸಿದರು. ಕೊನೆಯಲ್ಲಿ, ಸೆಪ್ಟೆಂಬರ್ 25 ರಂದು ಮೆರವಣಿಗೆ ನಡೆಸಲು ಅನುಮತಿ ನೀಡಲಾಯಿತು. ಮತ್ತೆ ಸೆ. 24 ರ ರಾತ್ರಿ ಪೊಲೀಸರು ಮೆರವಣಿಗೆ ಹೊರಡುವ ಸ್ಥಳವನ್ನು ಬದಲಾಯಿಸಲು ಸೂಚಿಸಿದರು. ಆದರೂ ಸಾವಿರಾರು ಜನ ಸೇರಿದ್ದರು. ಮೆರವಣಿಗೆ ಹೊರಡಲು ಇನ್ನು ಕೆಲವೇ ನಿಮಿಷಗಳು ಇರುವಾಗ ಪೊಲೀಸರು ಏಕಾಏಕಿಯಾಗಿ ಮೆರವಣಿಗೆ ನಡೆಸಲು ನೀಡಲಾದ ಅನುಮತಿಯನ್ನು ಹಿಂತೆಗೆದುಕೊಂಡರು. ತೀವ್ರ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ರಸ್ತೆಯ ಮೇಲೆ ಅನಿವಾರ್ಯವಾಗಿ ಕುಳಿತುಕೊಮಡು ಧರಣಿ ಆರಂಭಿಸಿದರು.

ಸಂಘಟನೆಯ ಅಧ್ಯಕ್ಷರೂ ಶಾಸಕರು ಆಗಿರುವ ರತನ್ ಭೌಮಿಕ್ ಮತ್ತು ಪ್ರಧಾನ ಕಾರ್ಯದರ್ಶಿಗಳೂ ಶಾಸಕರೂ ಆಗಿರುವ ಸುಧಾನ್ ದಾಸ್ ಮೆರವಣಿಗೆ ನಡೆಸಲು ಅನುಮತಿ ಕೋರಲು ಮುಖ್ಯ ಮಂತ್ರಿಯನ್ನು ಕಾಣಲು ಅವಕಾಶ ಕೋರಿದರು. ಆದರೆ ಮುಖ್ಯ ಮಂತ್ರಿ ಅವರನ್ನು ಕರೆದು ಮಾತನಾಡಲು ಒಪ್ಪಲಿಲ್ಲ. ಆದರೆ ಅದೇ ಸಮಯದಲ್ಲಿ ಒಂದು ಮೆರವಣಿಗೆ ನಡೆಸಲು ಎಬಿವಿಪಿಯವರಿಗೆ ಅನುಮತಿ ನೀಡಿದರು.

ಸಂಘದ ಮುಖಂಡರು ಮುಖ್ಯ ಮಂತ್ರಿಯವರ ಪಾತ್ರವನ್ನು ತೀವ್ರವಾಗಿ ಖಂಡಿಸಿದರು. ಪೊಲೀಸರ ವರ್ತನೆಗೆ ಬಿಜೆಪಿಯವರ ಒತ್ತಡವೇ ಕಾರಣ ಎಂದು ದೂರಿದರು. ಪ್ರತಿದಿನ ಸರಾಸರಿ 9 ದಲಿತರು ದೇಶದ ವಿವಿಧೆಡೆ ಹತ್ಯೆಗೊಳಗಾಗುತ್ತಾರೆ ಎಂದು ಪ್ರಸ್ತಾಪಿಸಿದ ಅವರು ಸರಾಸರಿ 19 ದಲಿತ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಾರೆ ಎಂದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ 'ಮರ್ಯಾದಾ ಹತ್ಯೆ'ಗಳು ಹೆಚ್ಚಾಗಿವೆ. ಅಂತರ್ಜಾತಿ ವಿವಾಹವಾಗಿದ್ದ ದಲಿತ ಯುವಕ ಪ್ರಣಾಯ್‌ನನ್ನು ಬರ್ಬರವಾಗಿ ಕೊಲ್ಲಲಾಯಿತು. ಇದೇ ರೀತಿಯ ಕಾರಣಕ್ಕಾಗಿ 22 ವರ್ಷದ ಯುವಕನೊಬ್ಬನನ್ನು ಪೆಟ್ರೋಲ್ ಸುರಿದು, ಬೆಂಕಿ ಹಚ್ಚಿ ಜೀವಂತ ಸುಟ್ಟು ಹಾಕಲಾಯಿತು. ಬಿಶಾಲ್ ಘಡ್ ಗ್ರಾಮದ ಮದನ್ ನಾಮ ಎಂಬ ದಲಿತ ಯುವಕನನ್ನು ಹಲ್ಲೇ ಮಾಡಿ ಸಾಯಿಸಲಾಯಿತು. ಸುಕ್ಕು ಗೌರ್ ಎಂಬ ಇನ್ನೊಬ್ಬ ದಲಿತ ಯುವಕನನ್ನು ಇದೇ ರೀತಿಯ ಕಾರಣಕ್ಕಾಗಿ ಬಿಜೆಪಿ ಗುಂಡಾಗಳು ಸೇರಿ ಸಾಯಿಸಿದರು. ಪ್ರಸನ್ನ ಭಟ್ಟಾಚಾರ್ಯ ಎಂಬವರ ಮಗಳು ಒಬ್ಬ ಬ್ರಾಹ್ಮಣೇತರ ಯುವಕನನ್ನು ಮದುವೆಯಾಗಿ ಬೇರೆ ಊರಲ್ಲಿ ವಾಸವಾಗಿದ್ದಳು. 2 ವರ್ಷಗಳ ನಂತರ ತನ್ನ ಗಂಡನೊಂದಿಗೆ ತನ್ನ ತಂದೆ ತಾಯಿಯರ ಬಳಿಗೆ ಬಂದಾಗ ಆರೆಸ್ಸಸ್ ಕಾರ್ಯಕರ್ತರು ಅವರ ಮನೆಯೊಳಗೆ ನುಗ್ಗಿ ಅಲ್ಲಿ ಇದ್ದವರ ಮೇಲೆ ಹಲ್ಲೆ ಮಾಡಿ ಇಡೀ ಕುಟುಂಬವನ್ನೇ ಆ ಗ್ರಾಮದಿಂದ ಹೊರಹಾಕಿದರು. ಇಂತಹ ಕ್ರಿಮಿನಲ್ ಪ್ರಕರಣಗಳು ನಡೆಯುತ್ತಿರುವಾಗ ಪೊಲೀಸರು ಮಾತ್ರ ಮೂಕ ಪ್ರೇಕ್ಷರಾಗಿರುತ್ತಾರೆ. ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯುವುದು ಸಂಘದ ಕರ್ತವ್ಯವಾಗಿದೆ ಎಂದು ನಿರ್ಧರಿಸಿ ಅಗತ್ಯ ಪ್ರಚಾರ ಮಾಡಿ ಅಂದು ಸುಮಾರು 10 ಸಾವಿರ ಜನ ದಲಿತರು ಮತ್ತು ದಲಿತೇತರರೂ ರಾಜ್ಯ ಪಾಲರಿಗೆ ಮನವಿ ಸಲ್ಲಿಸಲು ಹೊರಟಿದ್ದರು. ಆದರೆ ಸರ್ಕಾರದ ಒತ್ತಡಕ್ಕೆ ಒಳಪಟ್ಟ ಪೊಲೀಸರು ಪ್ರತಿಭಟನಾ ಮೆರವಣಿಗೆಯನ್ನು ತಡೆದರು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಾಜಿ ಮುಖ್ಯಮಂತ್ರಿ ಸಿಪಿಎಂ ನ ಕಾಮ್ರೆಡ್ ಮಾಣಿಕ್ ಸರ್ಕಾರ್, ಯಾವುದೇ ಬೆದರಿಕೆ ಹಾಗೂ ದೌರ್ಜನ್ಯಗಳಿಂದ ರಾಜ್ಯದಲ್ಲಿ ಎಡ ಚಳುವಳಿಯನ್ನು ತಡೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ 'ಗಾಂಧಾರಿ ವಿದ್ಯಾ ತರಬೇತಿ' ಎಂಬುದು ವಂಚನೆ: SFI-BGVS-DYFI ಆರೋಪ

'ಮಿಡ್-ಬ್ರೈನ್ ಆಕ್ಟಿವೇಷನ್' - ಎಂಬುದು ಮೋಸ. ಬಹಿರಂಗ ಪ್ರದರ್ಶನದಲ್ಲಿ ಸಾಮರ್ಥ್ಯ ಸಾಬೀತುಗೊಳಿಸಿ' –ಎಸ್.ಎಫ್.ಐ, ಬಿಜಿವಿಎಸ್, ಡಿ.ವೈ.ಎಫ್.ಐ ಸಂಘಟನೆಗಳು ಸವಾಲು.

ಕರ್ನಾಟಕರಾಜ್ಯದಹಾವೇರಿ,ಹಾನನಲ್,ಬ್ಯಾಡಗಿ, ಶಿರಹಟ್ಟಿ ಮುಂತಾದ ಭಾಗಗಳಲ್ಲಿ ವಿದ್ಯಾರ್ಥಿಗಳಿಗೆ 'ಗಾಂಧಾರಿ ವಿದ್ಯಾ ತರಬೇತಿ' ನೀಡುತ್ತೇವೆ ಎಂಬ ಹೆಸರಿನಲ್ಲಿ, 'ಮಿಡ್ ಬ್ರೈನ್ ಆಕ್ಟಿವೇಷನ್' – 'ಮಧ್ಯದ ಮೆದುಳು ಕ್ರಿಯಾಶೀಲಗೊಳಿಸುತ್ತೇವೆ'. ಇದರಿಂದ ವಿದ್ಯಾರ್ಥಿಗಳು ವಿಶೇಷ ಸಾಮರ್ಥ್ಯಗಳಿಸುತ್ತಾರೆ. ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸುತ್ತಾರೆ. ಕಣ್ಣಿಗೆ ಪಟ್ಟಿ ಕಟ್ಟಿದ್ದರೂ ಓದಲು, ಬರೆಯಲು ಸಮರ್ಥರಾಗುತ್ತಾರೆ ಎಂದೆಲ್ಲಾ ಹೇಳುತ್ತಾ ವಿದ್ಯಾರ್ಥಿ ಪೋಷಕರಿಗೆ ಮೋಸ ಮಾಡುವ ವಂಚಕರ ಜಾಲವೊಂದು ಮತ್ತೆ ಸಕ್ರಿಯವಾಗಿದೆ.

'ಆ್ಯಂಪಲ್ ತಾತ ಟ್ರಸ್ಟ್ ಧಾರವಾಡ', 'ಜ್ಞಾನ ಚೇತನ ಟ್ರಸ್ಟ್, ಅನವಟ್ಟಿ" ಮುಂತಾದ ಹೆಸರಿನಲ್ಲಿ ಕೆಲಸ ಮಾಡುತ್ತಿರುವ ಈ ಜಾಲವು ಸದ್ಯ ಶಾಲಾ ಮಕ್ಕಳ ದಸರಾ ರಜೆಯ ಸಂದರ್ಭದಲ್ಲಿ ತನ್ನ ವಂಚನೆಯ ಶಿಬಿರಗಳನ್ನು ನಡೆಸಲು ತಯಾರಿ ನಡೆಸಿದೆ. ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಭಾರತ ಜ್ಞಾನ ವಿಜ್ಞಾನ ಸಮಿತಿ (BGVS) ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ಸಂಘಟನೆಗಳು ಈ 'ಗಾಂಧಾರಿ ವಿದ್ಯಾ ತರಬೇತಿ' ಎಂಬುದು ಮತ್ತು 'ಮಿಡ್ ಬ್ರೈನ್ ಆಕ್ಟಿವೇಷನ್' ಅಥವಾ 'ಮಧ್ಯದ ಮಿದುಳನ್ನು ಕ್ರಿಯಾಶೀಲಗೊಳಿಸುವುದು' ಎಂಬುದು ಶುದ್ಧ ಅವೈಜ್ಞಾನಿಕ ವಿಚಾರವಾಗಿದ್ದು, ಜನರಿಂದ ಹಣವನ್ನು ಸುಲಿಯುವ ತಂತ್ರ ಬಿಟ್ಟರೆ ಇದರಲ್ಲಿ ಯಾವ ಸತ್ಯವೂ, ಸತ್ವವೂ ಇಲ್ಲ ಎಂಬುದನ್ನು ಸಾರ್ವಜನಿಕರು ಅರ್ಥಮಾಡಿಕೊಳ್ಳಬೇಕೆಂದು ಹಾಗೂ ಈ ಮೋಸದ ವಿರುದ್ಧ ಪ್ರತಿಭಟಿಸಬೇಕೆಂದು ಕರೆ ನೀಡಿದೆ.

'ಮಿಡ್ ?ಬ್ರೈನ್ ಆಕ್ಟಿವೇಷನ್' ಅಥವಾ 'ಮಧ್ಯದ ಮೆದುಳು ಕ್ರಿಯಾಶೀಲಗೊಳಿಸುವುದು' ಎಂಬುದನ್ನು ಈಗಾಗಲೇ ತಜ್ಞ ವಿಜ್ಞಾನಿಗಳು ಪರಿಶೀಲಿಸಿದ್ದು ಇದರಲ್ಲಿ ಯಾವುದೇ ಅರ್ಥವಿಲ್ಲವೆಂದು ಸ್ಪಷ್ಟವಾಗಿದೆ. ಖ್ಯಾತ ವಿಚಾರವಾದಿಗಳಾದ ಡಾ. ನರೇಂದ್ರ ನಾಯಕ್ ಅವರು ಇಂತಹ ಮೋಸವನ್ನು ಬಯಲು ಮಾಡುವ ಹಲವು ಬಹಿರಂಗ ಪ್ರದರ್ಶನಗಳನ್ನು ನಡೆಸಿಕೊಟ್ಟಿದ್ದಾರೆ. ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳಂತೆ 'ಮಿಡ್ ಬ್ರೈನ್‌ಆಕ್ಟಿವೇಷನ್' ಅಥವಾ 'ಮಧ್ಯದ ಮೆದುಳು ಕ್ರಿಯಾಶೀಲಗೊಳಿಸುವುದು' ಎಂಬ ಮೋಸದ ಹಿಂದಿನ ರಹಸ್ಯಗಳನ್ನು ಬಯಲು ಮಾಡುತ್ತಾ ಬಂದಿದ್ದೇವೆ.

ಮಕ್ಕಳಲ್ಲಿ ನೆನಪಿನ ಶಕ್ತಿ ಹೆಚ್ಚುತ್ತದೆ. ಲೆಕ್ಕಾಚಾರ–ಗಣಿತಗಳಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯ ಹೆಚ್ಚುತ್ತದೆ. ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನುಗಳಿಸುವ ಸಾಮರ್ಥ್ಯ ಬರುತ್ತದೆ. ಕಣ್ಣಿಗೆ ಅಡ್ಡಪಟ್ಟಿಯನ್ನು ಕಟ್ಟಿಕೊಂಡು ಸಹ ಓದಲು ಮತ್ತು ಬರೆಯಲು, ಚಿತ್ರ ಬಿಡಿಸಲು ಮಕ್ಕಳು ಸಮರ್ಥರಾಗುತ್ತಾರೆ? ಇತ್ಯಾದಿ ಹಸಿ ಹಸಿ ಸುಳ್ಳುಗಳನ್ನು ಪ್ರಚಾರ ಮಾಡುತ್ತಿರುವ ಈ ಜಾಲವು ಹಾವೇರಿ ಭಾಗದಲ್ಲಿ ಪ್ರತಿ ವಿದ್ಯಾರ್ಥಿಗೆ ತರಬೇತಿಗೆಂದು ತಲಾ ಹನ್ನೆರಡು ಸಾವಿರ ರೂಪಾಯಿಗಳನ್ನು ಸಂಗ್ರಹಿಸುತ್ತಿದೆ. ವಾಸ್ತವಿಕವಾಗಿ ಬಣ್ಣಬಣ್ಣದ ಮಾತುಗಳಿಂದ, ಸುಳ್ಳು ಭರವಸೆಗಳಿಂದ ಪೋಷಕರಿಂದ ಹಣ ಕೀಳುವುದೇ ಈ ಯೋಜನೆಯ ಹಿಂದಿನ ಉದ್ದೇಶವಾಗಿದೆ.

ಯಾವುದೇ ವ್ಯಕ್ತಿಗೆ ಕಣ್ಣಿಗೆ ಅಡ್ಡಪಟ್ಟಿಯನ್ನು ಕಟ್ಟಿಕೊಂಡು ಓದುವ ಬರೆಯುವ, ಹೊರಗಿನ ಪ್ರಪಂಚವನ್ನು ನೋಡುವ ಸಾಮರ್ಥ್ಯ ಇರುವುದು ಸಾಧ್ಯವಿಲ್ಲ.. ಅಂತಹ ಸಾರ್ಮಥ್ಯ ಇದೆ ಎನ್ನುವವರಾಗಲೀ,,, ಅಥವಾ ಮಕ್ಕಳಲ್ಲಿ ಅಂತಹ ಸಾಮರ್ಥ್ಯ ತರುತ್ತೇವೆ ಎನ್ನುವವರಾಗಲೀ ಈ ಸಂಬಂಧ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುವ ಬಹಿರಂಗ ಪ್ರದರ್ಶನ ನೀಡಬೇಕೆಂದು. SFI-BGVS - DYFI ಸಂಘಟನೆಗಳು ಸವಾಲೊಡ್ಡುತ್ತಿವೆ. ಇಂತಹ ಸವಾಲನ್ನು ಸ್ವೀಕರಿಸುವವರು ಸೂಚಿಸುವ ಸ್ಥಳ ಮತ್ತು ದಿನ ಹಾಗು ಸಮಯದಲ್ಲಿ ಹಾಜರಿದ್ದು ಈ ಪ್ರಯೋಗದಲ್ಲಿನ ಮೋಸವನ್ನು ಸಾರ್ವಜನಿಕರ ಸಮ್ಮುಖದಲ್ಲಿ ತಿಳಿಸುತ್ತೇವೆ. ಬಯಲು ಸವಾಲನ್ನು ನಾವು ಸ್ವೀಕರಿಸುತ್ತೆವೆ.



ಕಾರ್ಪೊರೇಟ್ ತೆರಿಗೆ ಕಡಿತ: ಬೆಟ್ಟಕ್ಕೆ ಮಣ್ಣು ಹೊರುವ ಕೆಲಸ

ಈ ಸರಕಾರದ ಆರ್ಥಿಕ ಅಜ್ಞಾನವೂ, ನಿರ್ಲಜ್ಜ ವರ್ಗ ಪಕ್ಷಪಾತವೂ



ಕಾರ್ಪೊರೇಟ್‌ಗಳಿಗೆ ತೆರಿಗೆ ವಿನಾಯ್ತಿಯನ್ನು ಎಷ್ಟು ಹೆಚ್ಚಿಸಿದರೂ ಕಾರ್ಪೊರೇಟ್‌ಗಳ ಹಾಲಿ ಲಾಭ ಹೆಚ್ಚುತ್ತದೆಯೇ ವಿನಃ ಹೂಡಿಕೆ ಹೆಚ್ಚುವುದಿಲ್ಲ, ಬೇಡಿಕೆಯೂ ಹೆಚ್ಚುವುದಿಲ್ಲ. ಈ ರಿಯಾಯ್ತಿಗಳನ್ನು ಸರಕಾರ ಖರ್ಚುಗಳ ಕಡಿತದ ಮೂಲಕ ಕೊಟ್ಟರಂತೂ ಬೇಡಿಕೆ ಇಳಿಯುತ್ತದೆ. ಆದ್ದರಿಂದ ಮೋದಿ ಸರ್ಕಾರದ ಇಂತಹ "ಉತ್ತೇಜನ" ಕ್ರಮಗಳು ಅರ್ಥವ್ಯವಸ್ಥೆಯು ಮಂದ ಗತಿಯಿಂದ ಹೊರ ಬರಲು ಯಾವ ಕ್ರಮ ತೆಗೆದುಕೊಳ್ಳಬೇಕಿತ್ತೋ ಅದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರುವಂತದ್ದು. ಅದು ಆರ್ಥಿಕ ಮಂದಗತಿಯನ್ನು ಉಲ್ಬಣಗೊಳಸುತ್ತದೆ, ಮತ್ತು ಜತೆಗೇ ವರಮಾನ ಮತ್ತು ಸಂಪತ್ತಿನ ಹಂಚಿಕೆಯಲ್ಲಿರುವ ವೈಷಮ್ಯವನ್ನು ಹೆಚ್ಚಿಸುತ್ತದೆ. ಇದು ಆರ್ಥಿಕ ವಿಷಯಗಳ ಬಗ್ಗೆ ಈ ಸರ್ಕಾರದ ಅಜ್ಞಾನವನ್ನು, ಜತೆಗೇ ಅದರ ನಿರ್ಲಜ್ಜ ವರ್ಗ ಪಕ್ಷಪಾತವನ್ನೂ ಸೂಚಿಸುತ್ತದೆ.

ಪ್ರೊ.ಪ್ರಭಾತ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಬಿಜೆಪಿ ಸರ್ಕಾರವು ಕಾರ್ಪೊರೇಟ್ ತೆರಿಗೆಯನ್ನು ಇಳಿಸಿ ದೊಡ್ಡ ದೊಡ್ಡ ಕಂಪೆನಿಗಳಿಗೆ ದೇಶದ ಖಜಾನೆಯಿಂದ 1.45 ಲಕ್ಷ ಕೋಟಿ ರೂ. ಮೊತ್ತವನ್ನು ವರ್ಗಾಯಿಸಿದೆ. ಆದರೆ ಭಾರತದ ಅರ್ಥವ್ಯವಸ್ಥೆಯನ್ನು ಮಂದ ಗತಿಯಿಂದ ಮೇಲೆತ್ತಲು ಈ ಕ್ರಮ ಸಾಕಾಗುವುದಿಲ್ಲ ಎಂಬುದು ಸಾಮಾನ್ಯ ಅಭಿಪ್ರಾಯ. ಇದು ಖಂಡಿತವಾಗಿಯೂ ತಪ್ಪು. ಏಕೆಂದರೆ, ಅರ್ಥವ್ಯವಸ್ಥೆಯು ಮಂದ ಗತಿಯಿಂದ ಹೊರ ಬರಲು ಯಾವ ಕ್ರಮ ತೆಗೆದುಕೊಳ್ಳಬೇಕಿತ್ತೊ ಅದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರುವ ಕ್ರಮವಿದು. ದೊಡ್ಡ ದೊಡ್ಡ ಕಂಪೆನಿಗಳಿಗೆ ತೆರಿಗೆ ಇಳಿಸಿರುವ ಈ ಕ್ರಮವು, ಅರ್ಥವ್ಯವಸ್ಥೆಯ ಮಂದ ಗತಿಯನ್ನು ಉಲ್ಬಣಗೊಳಿಸುವುದರ ಜೊತೆಗೆ ದುಡಿಯುವ ಜನತೆಯ ಮೇಲೆ ಅಧಿಕ ಹೊರೆಯನ್ನೂ ಹೊರಿಸುತ್ತದೆ. ಮೇಲಾಗಿ, ವರಮಾನ ಮತ್ತು ಸಂಪತ್ತಿನ ಹಂಚಿಕೆಯಲ್ಲಿರುವ ವೈಷಮ್ಯವನ್ನು ಹೆಚ್ಚಿಸುತ್ತದೆ. ಆರ್ಥಿಕ ಬಿಕ್ಕಟ್ಟಿನಿಂದ ಹೊರಬರುವ ಹೋರಾಟದ ಹೆಸರಿನಲ್ಲಿ ಇಂತಹ ಒಂದು ಕ್ರಮ ಜಾರಿ ಮಾಡಲು ಹೊರಟಿರುವ ಅಂಶವು, ಆರ್ಥಿಕ ವಿಷಯಗಳ ಬಗ್ಗೆ ಸರ್ಕಾರದ ಅಜ್ಞಾನ ಎಷ್ಟಿದೆಯೊ, ಅದರ ನಿರ್ಲಜ್ಜ ವರ್ಗ ಪಕ್ಷಪಾತವೂ ಅಷ್ಟೇ ಇದೆ ಎಂಬುದನ್ನು ಸೂಚಿಸುತ್ತದೆ. ಈ ಪಕ್ಷಪಾತಪೂರ್ಣ ಕ್ರಮವು ದುಡಿಯುವ ಜನರನ್ನು ಹಿಂಡಿ ಏಕಸ್ವಾಮ್ಯ ಬಂಡವಾಳವನ್ನು ಇನ್ನಷು ಬಲಗೊಳಿಸುತ್ತದೆ.

ಒಟ್ಟಾರೆ ಬೇಡಿಕೆಯ ಕೊರತೆಯಿಂದಾಗಿಯೇ ಈ ಬಿಕ್ಕಟ್ಟು ಉಂಟಾಗಿದೆ ಎಂಬುದು ಸ್ಪಷ್ಟ. ಈ ಸಮಸ್ಯೆ ಪರಿಹರಿಸಲು, ಸರ್ಕಾರವು ಮಧ್ಯಪ್ರವೇಶ ಮಾಡಿದಾಗ, ವರಮಾನಕ್ಕೆ ಹೋಲಿಸಿದರೆ, ತಮ್ಮ ಉಪಭೋಗದ ಖರ್ಚುಗಳಿಗಾಗಿ ತಮ್ಮ ವರಮಾನದ ಅತಿ ಸಣ್ಣ ಭಾಗವನ್ನು ಯಾರು ಬಳಸುತ್ತಾರೋ ಅಂತಹವರ (ಶ್ರೀಮಂತರು) ಮೇಲೆ ತೆರಿಗೆ ಹಾಕಿ, ಆ ತೆರಿಗೆಯ ಹಣವನ್ನು ಸರ್ಕಾರವು ತನ್ನ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಬೇಕು, ಇಲ್ಲವೇ ವರಮಾನದ ಅತಿ ದೊಡ್ಡ ಭಾಗವನ್ನು ತಮ್ಮ ಉಪಭೋಗದ ಖರ್ಚುಗಳಿಗಾಗಿ ಬಳಸಬೇಕಾಗಿರುವ ದುಡಿಯುವ ಜನವಿಭಾಗಗಳಿಗೆ ವರ್ಗಾಯಿಸಬೇಕು.

ಕಂಪೆನಿಗಳು ತಮ್ಮ ವರಮಾನದ ಒಂದು ಸಣ್ಣ ಭಾಗವನ್ನಷ್ಟೇ ನೇರವಾಗಿ ಅಥವ ಪರೋಕ್ಷವಾಗಿ (ಡಿವಿಡೆಂಡ್ ಹಂಚುವ ಮೂಲಕ) ಉಪಭೋಗಕ್ಕಾಗಿ ಬಳಸುತ್ತವೆ ಮತ್ತು ಉಳಿದ ವರಮಾನವನ್ನು ತಮ್ಮಲ್ಲೇ (ಕಾದಿಟ್ಟ ಧನ) ಇಟ್ಟುಕೊಳ್ಳುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಹಾಗಾಗಿ, ಈ ಒಟ್ಟಾರೆ ಬೇಡಿಕೆಯ ಕೊರತೆಯ ಸಮಸ್ಯೆಯನ್ನು ಪರಿಹರಿಸುವ ಸರಿಯಾದ ಮಾರ್ಗವೆಂದರೆ, ಕಂಪೆನಿಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಿ ಅದರಿಂದ ಬರುವ ಆದಾಯವನ್ನು ಒಂದೊ ಸರ್ಕಾರವೇ ಅಭಿವೃದ್ಧಿ ಕಾರ್ಯಗಳಿಗೆ ಬಳಸಬಹುದು ಇಲ್ಲವೇ ಅದನ್ನು ಸರ್ಕಾರ ಬಯಸಿದ ರೀತಿಯಲ್ಲಿ ದುಡಿಯುವ ಜನರಿಗೆ ವರ್ಗಾವಣೆಗಾಗಿ ಬಳಸಬಹುದು. ಆದ್ದರಿಂದ, ಕಾರ್ಪೊರೇಟ್‌ಗಳಿಗೆ ತನ್ನ ಖಜಾನೆಯಿಂದ ತೆರಿಗೆ ರಿಯಾಯ್ತಿ ಒದಗಿಸಿ, ಅದನ್ನು ಸರಿದೂಗಿಸಲು, ಸರ್ಕಾರವು ತನ್ನ ಖರ್ಚುಗಳನ್ನು ಕಡಿತಗೊಳಿಸುವ ಕ್ರಮವಾಗಲಿ ಅಥವಾ ದುಡಿಯುವ ಜನರಿಗೆ ವರ್ಗಾವಣೆ ಮಾಡುವ ಹಣವನ್ನು ಕಡಿತಗೊಳಿಸುವ ಕ್ರಮವಾಗಲಿ ಅಥವಾ ದುಡಿಯು ಜನತೆಯ ಮೇಲೆ ಅಧಿಕ ತೆರಿಗೆ ಹೊರೆ ಹೊರಿಸುವ ಕ್ರಮವಾಗಲಿ, ಬೇಡಿಕೆ ಕೊರತೆ ಸಮಸ್ಯೆ ಪರಿಹರಿಸುವ ಉದ್ದೇಶದಿಂದ ಯಾವ ಕೆಲಸ ಮಾಡಬೇಕಿತ್ತೊ ಅದರ ವ್ಯತಿರಿಕ್ತ ಕ್ರಮವಾಗುತ್ತದೆ. ಅಂದರೆ, ಬೆಟ್ಟಕ್ಕೆ ಇನ್ನಷ್ಟು ಮಣ್ಣು ಹೊತ್ತಂತಾಗುತ್ತದೆ. ಹಾಗಾಗಿ, ಬೇಡಿಕೆ ಕೊರತೆಯ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳತ್ತದೆ.

ಕಾರ್ಪೊರೇಟ್ ವಲಯಕ್ಕೆ ವಿಸ್ತರಿಸುವ ತೆರಿಗೆ ರಿಯಾಯ್ತಿಗೆ, ಒಂದು ವೇಳೆ, ವಿತ್ತೀಯ ಕೊರತೆಯ ಮೂಲಕ ಹಣ ಹೊಂದಿಸಿಕೊಂಡರೆ, ಆಗ, ಬಿಕ್ಕಟ್ಟು ಉಲ್ಬಣವಾಗುವ ಸಮಸ್ಯೆ ಇರುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳಬಹುದು. ಆದರೆ, ಇಂತಹ ಕ್ರಮ (ವಿತ್ತೀಯ ಕೊರತೆಯ ಮೂಲಕ ಹಣ ಹೊಂದಿಸಿಕೊಳ್ಳುವ ಕ್ರಮ) ಕೈಗೊಳ್ಳುವಾಗ, ಪರಿಣಾಮ ಬೀರುವಂತಹ ಕೊನೆಯ ಪಕ್ಷ ಐದು ಅಂಶಗಳನ್ನು ಗಮನದಲ್ಲಿಡಬೇಕಾಗುತ್ತದೆ.

ಮೊದಲನೆಯದು, ಕಾರ್ಪೊರೇಟ್ ವಲಯಕ್ಕೆ ಒದಗಿಸುವ ತೆರಿಗೆ ರಿಯಾಯ್ತಿಯನ್ನು ಭಾಗಶಃ ವಿತ್ತೀಯ ಕೊರತೆಯ ಮೂಲಕ ಮತ್ತು ಭಾಗಶಃ ಸರ್ಕಾರದ ಖರ್ಚುಗಳ ಕಡಿತದ ಮೂಲಕವಾಗಲಿ ಅಥವಾ ದುಡಿಯುವ ಜನರಿಗೆ ವರ್ಗಾವಣೆಯ ಕಡಿತದ ಮೂಲಕವಾಗಲಿ ಅಥವಾ ದುಡಿಯುವ ಜನತೆಯ ಮೇಲೆ ಅಧಿಕ ಹೊರೆ ಹೊರಿಸುವ ಮೂಲಕವಾಗಲಿ ಹೊಂದಿಸಿಕೊಂಡಾಗಲೂ ಸಹ, ಮುಖ್ಯವಾಗಿ, ವಿತ್ತೀಯ ಕೊರತೆಯ ಮೂಲಕ ಹೊಂದಿಸಿಕೊಳ್ಳುವ ಹಣದ ಭಾಗ ಬಹಳ ಸಣ್ಣದಿದ್ದ ಸಂದರ್ಭದಲ್ಲಿ, ಬೇಡಿಕೆ ಕೊರತೆ ಸಮಸ್ಯೆ ಹಾಗೆಯೇ ಉಳಿಯಬಹುದು.

ಎರಡನೆಯದು, ಕಾರ್ಪೊರೇಟ್ ವಲಯಕ್ಕೆ ಒದಗಿಸುವ ತೆರಿಗೆ ರಿಯಾಯ್ತಿಗೆ ಬೇಕಾಗುವ ಹಣವನ್ನು ಪೂರ್ಣವಾಗಿ ವಿತ್ತೀಯ ಕೊರತೆಯ ಮೂಲಕವೇ ಹೊಂದಿಸಿಕೊಂಡರೆ ಒಟ್ಟು ಬೆಡಿಕೆಯಲ್ಲಿ ಇಳಿಕೆಯಾಗುವುದಿಲ್ಲ ಎಂಬುದು ನಿಜ. ಆದರೆ, ದೊಡ್ಡ ಬಂಡವಾಳಿಗರ ಕೈಗಿಡುವಷ್ಟೇ ಹಣವನ್ನು, ಅವರ ಬದಲಿಗೆ, ಸರ್ಕಾರವೇ ಖರ್ಚು ಮಾಡಿದರೆ ಅಥವಾ ದುಡಿಯುವ ಜನರಿಗೆ ವರ್ಗಾಯಿಸಿದರೆ ಒಟ್ಟಾರೆ ಬೇಡಿಕೆಯಲ್ಲಿ ಒಂದು ದೊಡ್ಡ ಹೆಚ್ಚಳವಾಗುತ್ತಿತ್ತು. ಅಂದರೆ, 1.45 ಲಕ್ಷ ಕೋಟಿ ರೂಗಳನ್ನು ದೊಡ್ಡ ಬಂಡವಾಳಿಗರ ಕೈಗಿಡುವ ಕ್ರಮವು, ಒಟ್ಟಾರೆ ಬೇಡಿಕೆ ಹೆಚ್ಚಿಸುವ ನಿಟ್ಟಿನಲ್ಲಿ ಕನಿಷ್ಠ ಪರಿಣಾಮಕಾರಿಯೂ ಮತ್ತು ವರಮಾನ ಮತ್ತು ಸಂಪತ್ತಿನ ಹಂಚಿಕೆಯ ದೃಷ್ಟಿಯಲ್ಲಿ ಅಪಾಯಕಾರಿಯೂ ಆಗುತ್ತದೆ.

ಮೂರನೆಯದು, ಇಷ್ಟು ದೊಡ್ಡ ಮೊತ್ತದ ಹಣವನ್ನು ದೊಡ್ಡ ಬಂಡವಾಳಿಗರ ಕೈಗಿಟ್ಟಾಗ, ಒಟ್ಟಾರೆ ಬೇಡಿಕೆ ಹೆಚ್ಚಿಸುವಲ್ಲಿ ಅದು ಕನಿಷ್ಠ ಪರಿಣಾಮಕಾರಿ ಎಂಬುದಕ್ಕಿಂತಲೂ, ಅದು ಬೇಡಿಕೆ ಹೆಚ್ಚಿಸುವುದೇ ಇಲ್ಲ ಎಂಬುದು ಮುಖ್ಯ ವಿಷಯ. ಏಕೆಂದರೆ, ಲಾಭದ ಹಣವನ್ನು ಖರ್ಚುಗಳಿಗೆ ಬಳಸುವುದು ಬಂಡವಾಳಿಗರ ಪ್ರವೃತ್ತಿಯಲ್ಲ. ಅವರು ಒಂದು ನಿರ್ದಿಷ್ಟ ಅವಧಿಯಲ್ಲಿ ತಮ್ಮ ವರಮಾನದ ಒಂದು ನಗಣ್ಯ ಎನ್ನುವಷ್ಟು ಭಾಗವನ್ನು ಮಾತ್ರ ಖರ್ಚು ಮಾಡುತ್ತಾರೆ. ಹಾಗಾಗಿ, ಅವರ ಬಳಕೆಯ ಖರ್ಚುಗಳು ಅತಿ ಕಡಿಮೆ ಇರುವ ಕಾರಣದಿಂದಾಗಿ, ಅವರಿಗೆ ಒದಗಿಸಿದ ತೆರಿಗೆ ರಿಯಾಯ್ತಿಯು ಒಟ್ಟಾರೆ ಬೇಡಿಕೆಯ ಮೇಲೆ ಉಂಟುಮಾಡುವ ಪರಿಣಾಮವು ಶೂನ್ಯವೇ.

ನಾಲ್ಕನೆಯದು, ವರಮಾನ ಮತ್ತು ಸಂಪತ್ತಿನ ಹಂಚಿಕೆಗೆ ಸಂಬಂಧಿಸುತ್ತದೆ. ದೊಡ್ಡ ದೊಡ್ಡ ಬಂಡವಾಳಿಗರಿಗೆ ಒದಗಿಸಿದ ತೆರಿಗೆ ರಿಯಾಯ್ತಿಯು ಒಟ್ಟಾರೆ ಬೇಡಿಕೆಯ ಮೇಲೆ ಪರಿಣಾಮವಾಗದ ಪರಿಸ್ಥಿತಿಯಲ್ಲಿ, ವಿತ್ತೀಯ ಕೊರತೆಯ ಮೂಲಕ ಕಾರ್ಪೊರೇಟ್ ವಲಯಕ್ಕೆ ತೆರಿಗೆ ರಿಯಾಯ್ತಿ ಒದಗಿಸುವ ಕ್ರಮವು ಸಮಾಜದಲ್ಲಿ ಅನಿವಾರ್ಯವಾಗಿ ಮತ್ತು ಅಗತ್ಯವಾಗಿ ವರಮಾನ ಮತ್ತು ಸಂಪತ್ತಿನ ಹಂಚಿಕೆಯನ್ನು ಹದಗೆಡಿಸುತ್ತದೆ. ವಿತ್ತೀಯ ಕೊರತೆ ಎಂದರೆ ಸರ್ಕಾರ ಸಾಲ ಮಾಡುತ್ತದೆ ಎಂದರ್ಥ. ಯಾರು ಸರ್ಕಾರಕ್ಕೆ ಸಾಲ ಕೊಡುತ್ತಾರೊ ಅವರು ಬಂಡವಾಳಗಾರರೇ. ತೆರಿಗೆ ವಿನಾಯ್ತಿ ಎಷ್ಟಿದೆಯೊ ಅಷ್ಟೇ ಮೊತ್ತದ ವಿತ್ತೀಯ ಕೊರತೆಯಾಗಿದೆ. ಅಷ್ಟೇ ಮೊತ್ತದ ಹಣವನ್ನು ಬಂಡವಾಳಿಗರು ಸರ್ಕಾರಕ್ಕೆ ಸಾಲ ಕೊಟ್ಟಿದ್ದಾರೆ. ಅಂದರೆ, ಬಂಡವಾಳಿಗರ ಸಂಪತ್ತು, ವಿತ್ತೀಯ ಕೊರತೆ ಅಥವಾ ಸಾಲದ ಮೊತ್ತಕ್ಕೆ ಸಮನಾಗಿ ವೃದ್ಧಿಯಾಗುತ್ತದೆ ಎಂಬುದೇ ಇದರ ಒಟ್ಟು ಅರ್ಥ. ಹಾಗಾಗಿ ವಿತ್ತೀಯ ಕೊರತೆಯು ಸಂಪತ್ತಿನ ಹಂಚಿಕೆಯನ್ನು ಅಗತ್ಯವಾಗಿ ಹದಗೆಡಿಸುತ್ತದೆ.

ಕೊನೆಯದಾಗಿ, ವಿತ್ತೀಯ ಕೊರತೆಯ ಹೆಚ್ಚಳದಿಂದಾಗಿ, ವಿದೇಶಿ ಬಂಡವಾಳದ ಒಳ ಹರಿವಿನ ಪ್ರಮಾಣ ಇಳಿಯುವ ಸಾಧ್ಯತೆ ಇದೆ. ಆದ್ದರಿಂದ, ಬಂಡವಾಳದ ಒಳ-ಹೊರ ಹರಿವು ಮತ್ತು ವಿದೇಶಿ ವ್ಯಾಪಾರಗಳ ಮೇಲೆ ಸರ್ಕಾರದ ನಿಯಂತ್ರಣ ಇಲ್ಲದಿರುವ ಪರಿಸ್ಥಿತಿಯಲ್ಲಿ ಚಾಲ್ತಿ ಖಾತೆಯ ಕೊರತೆಯನ್ನು (ಅಂದರೆ, ವಿದೇಶಿ ವಿನಿಮಯದ ಕೊರತೆಯನ್ನು) ನಿಭಾಯಿಸುವುದು ಕಷ್ಟವಾಗುತ್ತದೆ. ಕಾರ್ಪೊರೇಟ್ ವಲಯಕ್ಕೆ ತೆರಿಗೆ ರಿಯಾಯ್ತಿ ಒದಗಿಸಿರುವುದರ ಜೊತೆಯಲ್ಲೇ ವಿದೇಶಿ ಹೂಡಿಕೆದಾರರಿಗೂ ಅವರ ಷೇರು ವ್ಯವಹಾರಗಳಲ್ಲಿ ತೆರಿಗೆ ವಿನಾಯ್ತಿ ಕೊಡಲಾಗಿದೆ. ಅಷ್ಟಾಗಿಯೂ, ಒಂದು ವೇಳೆ, ವಿತ್ತೀಯ ಕೊರತೆಯ ಗಾತ್ರ ಹೆಚ್ಚಿದರೆ, ಬಂಡವಾಳದ ಒಳ ಹರಿವಿನ ಪ್ರಮಾಣ ತಗ್ಗುತ್ತದೆ. ಅದರ ಅನುಸಾರವಾಗಿ ವಿತ್ತೀಯ ಕೊರತೆಯನ್ನು ಹದ್ದುಬಸ್ತಿನಲ್ಲಿ ಇಡಬೇಕಾಗುತ್ತದೆ. ಆಗ, ಕಾರ್ಪೊರೇಟ್ ತೆರಿಗೆ ರಿಯಾಯ್ತಿಗಳು ಒಟ್ಟಾರೆ ಬೇಡಿಕೆಯ ಮಟ್ಟವನ್ನು ಇಳಿಸುವಲ್ಲಿ ಪರಿಣಮಿಸುತ್ತವೆ. ಆಗ ಬಿಕ್ಕಟ್ಟು ಇನ್ನೂ ಉಲ್ಬಣಗೊಳ್ಳುತ್ತದೆ.

ಇದುವರೆಗೆ ನಾವು ಬಳಕೆಯ ಮುಖಾಂತರ ಒಟ್ಟಾರೆ ಬೇಡಿಕೆಯಲ್ಲಿ ಆಗುವ ಚಲನವಲನಗಳನ್ನು ಚರ್ಚಿಸಿದೆವು. ಆದರೆ, ತೆರಿಗೆ ವಿನಾಯ್ತಿಗಳು ಹೆಚ್ಚಿನ ಹೂಡಿಕೆಯನ್ನು ಉತ್ತೇಜಿಸುತ್ತವೆ ಎಂದೂ ವಾದಿಸಬಹುದು. ಇದು ಸಂಪೂರ್ಣವಾಗಿಯೂ ತಪ್ಪು. ಹೂಡಿಕೆಯು, ಹಾಲಿ ಬಂಡವಾಳವು ಕೊಡುತ್ತಿರುವ ಲಾಭದ ದರ ಎಷ್ಟೇ ಇರಲಿ, ಅದರ ಮೇಲೆ ಅಧಿಕವಾಗಿ ತೊಡಗಿಸಿದ ಬಂಡವಾಳವು ಸಂಪಾದಿಸುವ ಲಾಭದ ದರ ಎಷ್ಟು ಎಂಬುದನ್ನು ಅವಲಂಬಿಸುತ್ತದೆ.

ಉದಾಹರಣೆಗೆ, ವಾಹನಗಳಿಗೆ ಬೇಡಿಕೆ ಸ್ಥಗಿತವಾಗುವ ನಿರೀಕ್ಷೆ ಇದೆ ಎಂದುಕೊಳ್ಳೋಣ. ಹಾಲಿ ಉತ್ಪಾದನಾ ಸಾಮರ್ಥ್ಯವೇ ಅದನ್ನು ಪೂರೈಸಲು ಸಾಧ್ಯವಿರುವಾಗ, ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಯಾರೂ ಅಧಿಕವಾಗಿ ಹೂಡಿಕೆ ಮಾಡುವುದಿಲ್ಲ, ಏಕೆಂದರೆ, ಅದರಿಂದ ಬರುವ ಲಾಭವು ಒಂದು ಸೊನ್ನೆಯೇ. ಹಾಲಿ ಲಾಭವು ಶೇ. ಹತ್ತೋ, ಇಪ್ಪತ್ತೊ, ಅಥವಾ ಐವತ್ತೇ ಇರಲಿ, ನಿರೀಕ್ಷಿತ ಲಾಭವು ಸೊನ್ನೆ ಎಂದಾಗ ಅಧಿಕವಾಗಿ ಹೂಡಿಕೆ ಮಾಡಲು ಯಾರೂ ಮುಂದಾಗುವುದಿಲ್ಲ. ಹಾಗಾಗಿ, ಕಾರ್ಪೊರೇಟ್ ತೆರಿಗೆ ರಿಯಾಯ್ತಿಗಳು ಲಾಭದ ಹಾಲಿ ದರವನ್ನು ಹೆಚ್ಚಿಸುತ್ತವೆಯೇ ವಿನಃ ಹೂಡಿಕೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ಅದಕ್ಕಿಂತಲೂ ಮುಖ್ಯವಾಗಿ, ಸರ್ಕಾರವು ತನ್ನ ಯಾವುದೊ ಖರ್ಚುಗಳ ಕಡಿತದ ಮೂಲಕ ಅಥವಾ ದುಡಿಯುವ ಜನತೆಯ ಮೇಲೆ ಅಧಿಕ ಹೊರೆ ಹೊರಿಸುವ ಮೂಲಕ ಎಷ್ಟು ಹಣವನ್ನು ಹೊಂದಿಸಿಕೊಂಡು ಕಾರ್ಪೊರೇಟ್‌ಗಳಿಗೆ ರಿಯಾಯ್ತಿ ಕೊಡುತ್ತದೆಯೊ ಅಷ್ಟರ ಮಟ್ಟಿಗೆ ಒಟ್ಟಾರೆ ಬೇಡಿಕೆಯಲ್ಲಿ ನಿವ್ವಳ ಇಳಿಕೆಯಾಗುತ್ತದೆ. ತೆರಿಗೆ ವಿನಾಯ್ತಿಯನ್ನು ಎಷ್ಟು ಹೆಚ್ಚಿಸಿದರೂ ಕಾರ್ಪೊರೇಟ್‌ಗಳ ಹಾಲಿ ಲಾಭ ಹೆಚ್ಚುತ್ತದೆಯೇ ವಿನಃ ಹೂಡಿಕೆ ಹೆಚ್ಚುವುದಿಲ್ಲ, ಇಳಿಯುತ್ತದೆ.

ಇದೇ ಪ್ರಮಾಣದ ತೆರಿಗೆ ವಿನಾಯ್ತಿಯನ್ನು ಹಣಕಾಸಿನ ಬಿಗಿತಕ್ಕೆ ಒಳಗಾಗಿರುವ ಸಣ್ಣ ಪ್ರಮಾಣದ ಕೈಗಾರಿಕಾ ವಲಯಕ್ಕೆ (ಇಲ್ಲಿ ಬೇಡಿಕೆಯ ಬಿಗಿತವಿಲ್ಲ) ಕೊಟ್ಟಿದ್ದರೆ, ಈ ವಲಯದಲ್ಲಿ ಹೆಚ್ಚಿನ ಹೂಡಿಕೆಯಾಗುತ್ತಿತ್ತು ಎಂದು ಸಹಜವಾಗಿಯೇ ಭಾವಿಸಬಹುದು.

ಮೋದಿ ಸರ್ಕಾರದ "ಉತ್ತೇಜನ" ಕ್ರಮಗಳು, ಒಂದು ವಿಡಂಬನೆಯೋ ಎಂಬಂತೆ, ಉತ್ಪತ್ತಿ ಮತ್ತು ಉತ್ಪಾದನೆಗಳ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತವೆ. ಅದೇ ಸಮಯದಲ್ಲಿ ವರಮಾನ ಮತ್ತು ಸಂಪತ್ತಿನ ಹಂಚಿಕೆಯನ್ನೂ ಹದಗೆಡಿಸುತ್ತವೆ. ಅರ್ಥಶಾಸ್ತ್ರದ ಬಗ್ಗೆ ಈ ಸರಕಾರದ್ದು ನಿಕೃಷ್ಟ ಜ್ಞಾನ ಎಂಬುದು ಮನೆ ಮಾತಾಗಿ ಬಿಟ್ಟಿರುವಾಗ ಇಂತಹ ಸರ್ಕಾರವು ಇಂತಹ ಕ್ರಮ ಕೈಗೊಳ್ಳುವುದು ಆಶ್ಚರ್ಯವೇನಲ್ಲ.



1.45 ಲಕ್ಷ ಕೋಟಿ ರೂಗಳನ್ನು ದೊಡ್ಡ ಬಂಡವಾಳಿಗರ ಕೈಗಿಡುವ ಕ್ರಮವು, ಒಟ್ಟಾರೆ ಬೇಡಿಕೆ ಹೆಚ್ಚಿಸುವ ನಿಟ್ಟಿನಲ್ಲಿ ಕನಿಷ್ಠ ಪರಿಣಾಮಕಾರಿಯೂ ಮತ್ತು ವರಮಾನ ಮತ್ತು ಸಂಪತ್ತಿನ ಹಂಚಿಕೆಯ ದೃಷ್ಟಿಯಲ್ಲಿ ಅಪಾಯಕಾರಿಯೂ ಆಗುತ್ತದೆ.





ವಸಾಹತು ಪರಂಪರೆ, ಸಮಾಜವಾದೀ ಭವಿಷ್ಯ?

ಹಾಂಗ್ ಕಾಂಗ್ ಪ್ರತಿಭಟನೆಗಳ ಹಿಂದಿನ ಸಂಕೀರ್ಣ ಚರಿತ್ರೆ

"ಒಂದು ದೇಶ ಎರಡು ವ್ಯವಸ್ಥೆಗಳು" ಮಾದರಿ ರಾಜಕೀಯ ತತ್ವಗಳ ಹಾಗೂ ಚಿಂತನೆಗಳ ನಡುವಿನ ಘರ್ಷಣೆಯನ್ನು ಪ್ರತಿಬಿಂಬಿಸುತ್ತದೆ. ಒಂದೆಡೆ, ಹೊಸ ಮತ್ತು ವಿಶ್ವಾಸಗೊಳ್ಳುತ್ತಿರುವ ಸಮಾಜವಾದಿ ಪ್ರಜಾಪ್ರಭುತ್ವವು ಚೀನಾದ ಇತಿಹಾಸದಲ್ಲಿ ಬೇರೂರಿದೆ. ಇದು ಒಂದೇ ಆಳುವ ಪಕ್ಷದೊಂದಿಗೆ ಜನತಾ ಆಡಳಿತವನ್ನು ನೇರವಾಗಿ ಸಬಲೀಕರಣಗೊಳಿಸುವ ಮಾರ್ಗವನ್ನು ಕಂಡುಕೊಳ್ಳುತ್ತಿದೆ. ಮತ್ತೊಂದೆಡೆ, ಬ್ರಿಟಿಷ್ ವಸಾಹತುಶಾಹಿ ಆಕ್ರಮಣದಿಂದ ರೂಪಿಸಲ್ಪಟ್ಟ ನಿರ್ಬಂಧಿತ ಪ್ರಜಾಪ್ರಭುತ್ವ ಆಡಳಿತ ಮಾದರಿಯಿದೆ. ಈ ವೈರುಧ್ಯವನ್ನು ಪರಿಹರಿಸುವುದು ನಿರಂತರ ಸವಾಲು ಮತ್ತು ಕೆಲಮೊಮ್ಮೆ ನೋವಿನ ಪ್ರಕ್ರಿಯೆ ಕೂಡ. (ಆಧಾರ: ಪೀಪಲ್ಸ್ ವರ್ಲ್ಡ್)

ಕಳೆದ ಕೆಲವು ತಿಂಗಳಿನಿಂದ ಹಾಂಗ್‌ಕಾಂಗ್ ಅನ್ನು ಹಿಡಿದಿಟ್ಟುಕೊಂಡಿರುವ ಪ್ರತಿಭಟನೆಗಳು, ಒಂದು ಕಡೆ, ಕಡಿಮೆಯಾಗುವ ಕೆಲವು ಲಕ್ಷಣಗಳು ಕಂಡುಬರುತ್ತಿವೆ ಎನ್ನುತ್ತಿರುವಾಗಲೇ, ಮತ್ತೊಂದೆಡೆ, ಚೀನಾದ ಸಮಾಜವಾದಿ ಕ್ರಾಂತಿಯ 70 ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ "ರಾಷ್ಟ್ರೀಯ ದಿನ" ದ ಆಚರಣೆಯ ಸಂದರ್ಭದಲ್ಲಿ ಮತ್ತೆ ಪ್ರತಿಭಟನೆ ನಡೆದು, ಪೋಲಿಸರ ಗುಂಡಿಗೆ ಒಬ್ಬ ಯುವಕ ಬಲಿಯಾಗಿರುವುದು ವರದಿಯಾಗಿದೆ.

ಈ ಪ್ರತಿಭಟನೆಗಳಿಗೆ ಚಾರಿತ್ರಿಕ ಹಿನ್ನೆಲೆ ಇದೆಯಾದರೂ, ಕಳೆದ ಜೂನ್ 16 ಮತ್ತು ಆಗಸ್ಟ್ 18 ರ ಪ್ರತಿಭಟನಾ ಪ್ರದರ್ಶನಗಳಲ್ಲಿ ಸುಮಾರು 17 ಲಕ್ಷಕ್ಕೂ ಮೀರಿದ ಯುವಕ-ಯುವತಿಯರು ಹಾಂಗ್‌ಕಾಂಗ್‌ನಾದ್ಯಂತ ಭಾಗವಹಿಸಿದ್ದರು ಎನ್ನಲಾಗಿದೆ. ಇದಕ್ಕೆ ಕಾರಣವೆಂದರೆ, ಹಾಂಗ್‌ಕಾಂಗ್‌ನ ಶಾಸನ ಸಭೆಯಲ್ಲಿ "ಎಕ್ಸ್ಟ್ರಾಡಿಷನ್ ಲಾ" (ಹಸ್ತಾಂತರ ಕಾನೂನು) ಮಸೂದೆಯನ್ನು ಮಂಡಿಸಿದ್ದು, ಪ್ರಸ್ತುತ ಈ ಪ್ರತಿಭಟನೆಗಳಿಗೆ ಕಿಡಿ ಹಚ್ಚಿದಂತಾಯಿತು ಎಂದು ವಿಶ್ಲೇಷಣೆ ಮಾಡಲಾಗಿದೆ. ಈ ಪ್ರಸ್ತಾವಿತ ಕಾನೂನಿನ ಪ್ರಕಾರ, ತೈವಾನ್, ಮಕಾವು ಹಾಗೂ ಪ್ರಧಾನವಾಗಿ ಚೀನಾದಲ್ಲಿ ಅಪರಾಧಗಳನ್ನು ವೆಸಗುವ ಜನರನ್ನು ಬಂಧಿಸಲು ಹಾಗೂ ಹಸ್ತಾಂತರ ಮಾಡಲು, ಹಾಂಗ್‌ಕಾಂಗ್ ಅಧಿಕಾರಿಗಳಿಗೆ ವಿಚಾರಣೆ ನಡೆಸಲು ಈ ಕಾನೂನು ಅನುವು ಮಾಡಿಕೊಡುತ್ತದೆ.

ಮೂಲತಃ, ಮಸೂದೆ ಮಂಡನೆಗೆ ಕಾರಣವಾಗಿದ್ದ ಘಟನೆ: ಹಾಂಗ್‌ಕಾಂಗ್‌ನ ವ್ಯಕ್ತಿಯೊಬ್ಬ ತನ್ನ ಗೆಳತಿ ತೈವಾನ್‌ಗೆ ಬೇಟಿ ನೀಡುತ್ತಿದ್ದ ಸಂದರ್ಭದಲ್ಲಿ ಅವಳನ್ನು ಕೊಲೆ ಮಾಡಿದ. ಈ ಹಿನ್ನೆಲೆಯಲ್ಲಿ, 'ಹಸ್ತಾಂತರ ಮಸೂದೆ' ಯನ್ನು ಮಂಡಿಸಲಾಯಿತು. ಇಂತಹ ಅಪರಾದ ಗೈದವರನ್ನು ವಿಚಾರಣೆ ನಡೆಸಿ ಬಂಧಿಸಿ ಶಿಕ್ಷೆ ವಿಧಿಸಲು ಚೀನಾ ಅಥವಾ ಹಾಂಗ್‌ಕಾಂಗ್ ಎರಡು ಸರ್ಕಾರಗಳ ಬಳಿ ಇಲ್ಲಿಯ ವರೆವಿಗೂ ಯಾವುದೇ ಕಾನೂನುಗಳು ಇರಲಿಲ್ಲ. ಆದ್ದರಿಂದ, ಈ ಹೊಸ ಕಾನೂನನ್ನು ಹಾಂಗ್‌ಕಾಂಗ್‌ನಲ್ಲಿ ತರಲಾಯಿತು. ಆದರೆ, ಹಾಂಗ್‌ಕಾಂಗ್ ಸರ್ಕಾರದ ನಿಲುವುಗಳನ್ನು ವಿರೋಧಿಸುವವರ ಮೇಲೆ, ಬೀಜಿಂಗ್ ಸರಕಾರ ರಾಜಕೀಯ ಪ್ರೇರಿತ ಅಪರಾಧಗಳನ್ನು ಕೈಗೊಳ್ಳಲು ಈ ಕಾನೂನನ್ನು ಉಪಯೋಗಿಸಿಕೊಳ್ಳಬಹುದು ಎಂಬ ಆತಂಕವನ್ನು ಪ್ರತಿಭಟನೆಕಾರರು ವ್ಯಕ್ತ ಪಡಿಸಿದ್ದಾರೆ.

ನಿರಂತರವಾಗಿ ನಡೆಯುತ್ತಲೇ ಇರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ, ಹಾಂಗ್‌ಕಾಂಗ್ ನ ಮುಖ್ಯ ಕಾರ್ಯನಿರ್ವಾಹಕ ಕ್ಯಾರಿ ಲ್ಯಾಮ್, ಸೆಪ್ಟೆಂಬರ್ 4 ರಂದು, ಶಾಸನ ಸಭೆಯಲ್ಲಿ ಮಂಡಿಸಲಾಗಿದ್ದ ಮಸೂದೆಯನ್ನು ಹಿಂಪಡೆದು ಕೊಂಡರು. ಆದಾಗ್ಯೂ, ಪ್ರತಿಭಟನೆಕಾರರು, ಮೂಲ ಮಸೂದೆಯನ್ನು ಮೀರಿದ ಹೆಚ್ಚುವರಿ ಬೇಡಿಕೆಗಳನ್ನು ಮುಂದಿಟ್ಟಿರುವುದರಿಂದ, ಇದು ಯಾವ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಚೀನಾವು, ತನ್ನ ಸಮಾಜವಾದಿ ವ್ಯವಸ್ಥೆಯ 70 ನೇ ವಾರ್ಷಿಕೋತ್ಸವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ, ಅದು ಚೀನಿಯರ ಗುಣಲಕ್ಷಣಗಳಿಗೆ ಅನುಗುಣವಾಗಿ, ತನ್ನ ಅರ್ಥವ್ಯವಸ್ಥೆಯ ಬುನಾದಿಯನ್ನು ಗಟ್ಟಿಗೊಳಿಸಿಕೊಂಡು ಮುನ್ನಡೆ ಸಾಧಿಸುತ್ತಿದೆ ಹಾಗೂ ಜಗತ್ತಿನ ಅತ್ಯಂತ ಬಲಿಷ್ಟ ಆರ್ಥಿಕತೆ ಹೊಂದುವ ರಾಷ್ಟವಾಗಿ ಬೆಳೆಯುತ್ತಿರುವುದನ್ನು ಸಹಿಸಲಾರದೆ, ಯುಎಸ್ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು, ಹಾಂಗ್‌ಕಾಂಗ್ ಅನ್ನು ಚೀನಾದಿಂದ ಬೇರ್ಪಡಿಸುವ ಸಲುವಾಗಿ, "ಹಾಂಗ್‌ಕಾಂಗ್ ನಲ್ಲಿ ಬಣ್ಣ ಕ್ರಾಂತಿ" ಯನ್ನು ಪ್ರಚೋದಿಸಲು, ಪ್ರತಿಭಟನೆಕಾರರ ಸಾಮೂಹಿಕ ಅಸಮಾಧಾನವನ್ನು ಬಳಸಿಕೊಳ್ಳುತ್ತಿದೆ ಎಂದು ಚೀನಾದ ಆಡಳಿತಗಾರರು ಶಂಕೆ ವ್ಯಕ್ತ ಪಡಿಸಿದ್ದಾರೆ. ಇದರಲ್ಲಿ ವಾಸ್ತವತೆ ಇಲ್ಲವೆಂದಲ್ಲ, ಯುಎಸ್ ನ ಇತಿಹಾಸವನ್ನು ಬಲ್ಲವರಿಗೆ ಇದು ಅವಾಸ್ತವ ಎನಿಸುವುದಿಲ್ಲ. ಪ್ರಜಾಸತ್ತಾತ್ಮಕ ಹಾಗೂ ಕಾನೂನುಬದ್ದವಾಗಿ ಆಡಳಿತ ನಡೆಸುತ್ತಿರುವ ಸರಕಾರಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಿ, ಆಡಳಿತವನ್ನು ತನ್ನ ಹಿಂಬಾಲಕರಿಗೆ ವರ್ಗಾವಣೆ ಮಾಡುವುದು, ಯುಎಸ್ ಗೆ ಹೊಸದೇನಲ್ಲ.

ಪ್ರತಿಭಟನೆಕಾರರ ಬೇಡಿಕೆಗಳು ವಿಪರೀತವಾಗಿವೆ. ಅದು ಕೇವಲ " ಹಸ್ತಾಂತರ ಮಸೂದೆ " ಗೆ ಮಾತ್ರ ಸೀಮಿತ ವಾಗಿರಲಿಲ್ಲ. ಇವು ತುಂಬಾ ಸಂಕೀರ್ಣವಾಗಿವೆ. ಇವುಗಳಲ್ಲಿ,ಪ್ರಜಾಪ್ರಭುತ್ವದ ಹಕ್ಕುಗಳು, ರಾಷ್ಟ್ರೀಯ ಅಸ್ಮಿತೆ, ಚೀನಾದ ಸಮಾಜವಾದಿ ವ್ಯವಸ್ಥೆ ಹಾಗೂ ಬ್ರಿಟಿಷ್ ವಸಾಹತುಶಾಹಿಯ ಪರಂಪರೆ ಅಂದರೆ, ಸಾಮಾನ್ಯ ಕಾನೂನು ವ್ಯವಸ್ಥೆ, ಅಸ್ಥಿರ ಮಾರುಕಟ್ಟೆ ಮತ್ತು ಆರ್ಥಿಕತೆ ಬೆಳವಣಿಗೆಗಳು ಒಳಗೊಂಡಿವೆ.

ಹಾಂಗ್‌ಕಾಂಗ್ ಅಸ್ಮಿತೆಯ ಸ್ಥೂಲ ಚಿತ್ರಣ:-

ಬಹುಶಃ, ಇತಿಹಾಸವು ಅಸ್ಮಿತೆಯನ್ನು ರೂಪಿಸುತ್ತದೆ ಎಂದು ಪರಿಗಣಿಸುವುದಾದರೆ, ಎರಡು ಸಹಸ್ರಮಾನದ ವರೆವಿಗೂ, ವ್ಯಾಪಿಸಿರುವ ಸಂಕೀರ್ಣ ಇತಿಹಾಸವನ್ನು ಹಾಂಗ್‌ಕಾಂಗ್ ನ ಅಸ್ಮಿತೆ ಹೊಂದಿ, ರೂಪುಗೊಂಡಿದೆ ಎನ್ನಬಹುದು.

ಕ್ರಿ.ಪೂ 220 ರಲ್ಲಿ ಕ್ವಿಂಗ್ ರಾಜವಂಶದ ಅವಧಿಯಲ್ಲಿ ತುಂಬಾ ವಿರಳ ಜನಸಂಖ್ಯೆ ಯನ್ನು ಹೊಂದಿದ್ದ ಹಾಂಗ್‌ಕಾಂಗ್ ದ್ವೀಪವು ಚೀನಾದ ಭಾಗವಾಗಿತ್ತು. ಹಾಗೆಯೇ, ಸಾವಿರಾರು ವರ್ಷಗಳಿಂದಲೂ, ಇದೊಂದು, ಉಪ್ಪು ಮತ್ತು ಮುತ್ತುಗಳ ಮೂಲವಾಗಿ ಹೆಚ್ಚು ಹೆಚ್ಚಾಗಿ ಅಂತರರಾಷ್ಟ್ರೀಯ ವ್ಯಾಪಾರ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಈ ಮಧ್ಯೆ ಚೀನಾ ಮತ್ತು ಯುರೋಪಿಯನ್ ವಸಾಹತುಶಾಹಿ ಶಕ್ತಿಗಳ ನಡುವಿನ ಕಡಲ ವ್ಯಾಪಾರವು 1500 ರ ಶತಕದಲ್ಲಿ ಪ್ರಾರಂಭವಾಯಿತು. ಈಸ್ಟ್ ಇಂಡಿಯಾ ಟೀ ಕಂಪನಿ 1711 ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತ್ತು. ಅಂತಿಮವಾಗಿ ಹಾಂಗ್‌ಕಾಂಗ್ ನಲ್ಲಿ ಚಹಾ, ಪಿಂಗಾಣಿ ಮತ್ತು ರೇಷ್ಮೆಯಲ್ಲಿ ವ್ಯಾಪಾರ ವು ಪ್ರವರ್ಧಮಾನಕ್ಕೆ ಬಂದಿತು.

ಬ್ರಿಟಿಷರು ಅಫೀಮ್ ಅನ್ನು ವಿನಿಮಯ ಸಾಧನವಾಗಿ ಕಳ್ಳಸಾಗಣೆ ಮಾಡಲು ಆರಂಭಿಸಿದರು. ಏಕೆಂದರೆ, ಬೆಳ್ಳಿಯನ್ನು ವಿನಿಮಯ ಮಾಡಿ ಚಹಾವನ್ನು ಪಾವತಿಸಲು ಅವರಿಗೆ ಇಷ್ಟವಿರಲಿಲ್ಲ. ಲಕ್ಷಾಂತರ ಮಂದಿ ಮಾದಕ ವಸ್ತುಗಳ ವ್ಯಸನಿಗಳಾಗಿ ಪ್ರಭುತ್ವದ ಆಡಳಿತವೂ ಭ್ರಷ್ಟವಾದಾಗ ಅಫೀಮು ಅನ್ನು ನಿಷೇಧಿಸಲು ಪ್ರಯತ್ನಿಸಲಾಯಿತು. ಇದರ ಪರಿಣಾಮವಾಗಿಯೇ "ಯುರೋಪಿಯನ್-ಚೀನೀ ಸಂಘರ್ಷದ ಮೊದಲ ಅಫೀಮು ಯುದ್ದ ನಡೆಯಿತು. 1841 ರಲ್ಲಿ ಸೋಲಿಸಲ್ಪಟ್ಟ ಚೀನಾ "ನಾನ್ಜಿಂಗ್ ಒಪ್ಪಂದ"ದ ಭಾಗವಾಗಿ ಹಾಂಗ್‌ಕಾಂಗ್ ದ್ವೀಪ ವನ್ನು ಬ್ರಿಟಿಷ್‌ರಿಗೆ ಬಿಟ್ಟು ಕೊಡ ಬೇಕಾಯಿತು.

18960 ರಲ್ಲಿ, ಹಾಂಗ್ ಕಾಂಗ್ ಪಕ್ಕದಲ್ಲಿರುವ 'ಕೌಲೂನ್ ಪರ್ಯಾಯ ದ್ವೀಪ' ವನ್ನು ಶಾಶ್ವತವಾಗಿ ಮತ್ತು 1898 ರಲ್ಲಿ ಹೊಸ ಪ್ರಾಂತ್ಯ ಗಳನ್ನು ಬ್ರಿಟಿಷ್‌ರಿಗೆ 99 ವರ್ಷಗಳ ಕಾಲ ಗುತ್ತಿಗೆಗೆ ನೀಡಲು, ಚೀನಾವನ್ನು ಒತ್ತಾಯಿಸಲಾಯಿತು. ಆದರೆ, ಚೀನಾ ಒಪ್ಪಿರಲಿಲ್ಲ. ಆ ನಂತರ ಹಾಂಗ್‌ಕಾಂಗ್ ಬ್ರಿಟಿಷ್ ಸಾಮ್ರಾಜ್ಯದ ವಸಾಹತುವಾಯಿತು. ಇಂದಿಗೂ ಈ ಎಲ್ಲಾ ಪ್ರದೇಶಗಳು ಹಾಂಗ್‌ಕಾಂಗ್ ನ ಇವತ್ತಿನ ಪ್ರದೇಶಗಳ ಭಾಗವಾಗಿವೆ. ಎರಡನೇ ಮಹಾಯುದ್ಧದ ಸಮಯದಲ್ಲಿ ಜಪಾನೀಯರು ಹಾಂಗ್‌ಕಾಂಗ್ ಅನ್ನು ಆಕ್ರಮಿಸಿಕೊಂಡರು. ಆದರೆ, ಯುದ್ಧದ ನಂತರ, ಮತ್ತೆ ಹಾಂಗ್‌ಕಾಂಗ್ ಬ್ರಿಟಿಷ್ ರ ಮಡಿಲಿಗೆ ಮರಳಿತು.

1949 ರಲ್ಲಿ ಚೀನಾದ ಪ್ರಮುಖ ಭೂಭಾಗದಲ್ಲಿ ಸಮಾಜವಾದ ಸ್ಥಾಪಿತವಾಯಿತು. ಆ ನಂತರ ಶೀತಲ ಸಮರದಲ್ಲಿ ಎರಡೂ ಕಡೆಯವರಿಗೆ ಆರ್ಥಿಕವಾಗಿ ಮತ್ತು ರಾಜತಾಂತ್ರಿಕವಾಗಿ ಉಪಯುಕ್ತವಾದ ಮಹತ್ವದಾಯಕ ವ್ಯಾಪಾರ ಮತ್ತು ಹಣಕಾಸು ಕೇಂದ್ರವಾಗಿ ಹಾಂಗ್‌ಕಾಂಗ್ ಕಾರ್ಯ ನಿರ್ವಹಿಸಿಕೊಂಡು ಬಂದಿತ್ತು. 1997 ರಲ್ಲಿ 99 ವರ್ಷಗಳ ಗುತ್ತಿಗೆ ಅವಧಿ ಮುಗಿದಾಗ ಹಾಂಗ್‌ಕಾಂಗ್ ನ ಸಾರ್ವಭೌಮತ್ವವನ್ನು ಸಮಾಜವಾದಿ ಒಲವಿನ 'ಚೀನಾ ಜನತಾ ಗಣತಂತ್ರ' (ಪೀಪಲ್ಸ್ ರಇಪಬ್ಲಿಕ್ ಆಫ್ ಚೈನಾ-ಪಿ ಆರ್ ಸಿ) ಕ್ಕೆ ವರ್ಗಾವಣೆ ಮಾಡಲು ಬ್ರಿಟನ್‌ಗೆ ಒತ್ತಾಯಿಸಲಾಯಿತು. ಈ ನಿಟ್ಟಿನಲ್ಲಿ ಬ್ರಿಟನ್ ಮತ್ತು ಪಿ ಆರ್ ಸಿ, ಜಂಟಿಯಾಗಿ ಚೀನಾ-ಬ್ರಿಟಿಶ್ ಜಂಟಿ ಘೋಷಣೆ ಎಂಬ ಒಂದು ಸಂಕ್ರಮಣ ಘಟ್ಟದ ಒಪ್ಪಂದವನ್ನು ಮಾಡಿಕೊಂಡು, ಹಾಂಗ್‌ಕಾಂಗ್‌ನ ವರ್ಗಾವಣೆ ಮತ್ತು ಪರಿವರ್ತನೆಯ ಬಗ್ಗೆ ಮಾತುಕತೆ ನಡೆಸಲಾಯಿತು.

ಈ ಘೋಷಣೆಯ ಅಡಿಯಲ್ಲಿ ಚೀನಾವು 'ಹಾಂಗ್ ಕಾಂಗ್ ವಿಶೇಷ ಆಡಳಿತ ಪ್ರದೇಶ '(ಎಚ್.ಕೆ.ಎಸ್.ಎ.ಆರ್) ಎಂದು ಗೊತ್ತು ಪಡಿಸಿತು. 1984 ರಲ್ಲಿನ ಮತ್ತೊಂದು ಒಪ್ಪಂದದ ಭಾಗವಾಗಿ, ಚೀನಾವು ತನ್ನ ಆರ್ಥಿಕ ಮತ್ತು ವ್ಯಾಪಾರ ನೀತಿಗಳು, ಹಾಗೆಯೇ, ನ್ಯಾಯಾಂಗ, ಕಾರ್ಯನಿರ್ವಾಹಕ ಮತ್ತು ಶಾಸಕಕಾಂಗ ಅಧಿಕಾರಗಳನ್ನು ಒಳಗೊಂಡಂತೆ, ಹಾಂಗ್ ಕಾಂಗ್ ಗೆ 'ಅರೆ ಸ್ವಾಯತ್ತತೆ' ಯನ್ನು 2047 ರವರೆಗೂ ವಿಸ್ತರಿಸಲು ಒಪ್ಪಿಕೊಂಡಿತು. ಈ ಹಿನ್ನೆಲೆಯಲ್ಲಿಯೇ ಜನಿಸಿದ್ದು "ಒಂದು ದೇಶ, ಎರಡು ವ್ಯವಸ್ಥೆಗಳು" ಎಂಬ ಪರಿಕಲ್ಪನೆ. ಇದೇ ಪ್ರಸ್ತುತ ಸಂಘರ್ಷದ ಮೂಲದಲ್ಲಿರುವ ಒಂದು ವೈರುಧ್ಯ.

ಹೀಗಾಗಿಯೇ, 1997 ರಿಂದೀಚೆಗೆ, ಹಾಂಗ್ ಕಾಂಗ್ "ಮೂಲ ಕಾನೂನಿ'ನ ನಿಯಂತ್ರಣದಲ್ಲಿದೆ. ಇದರಿಂದಾಗಿ, ಅಲ್ಲಿನ ನಿವಾಸಿಗಳ ಹಕ್ಕುಗಳು ಮತ್ತು ಸ್ವಾತಂತ್ರ್ಯ, ಸರ್ಕಾರದ ರಚನೆ,

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಪರೋಕ್ಷ ಚುನಾವಣಾ ವ್ಯವಸ್ಥೆ ಮತ್ತು ಆಸ್ತಿ ಹಕ್ಕುಗಳು ಇವೆಲ್ಲವನ್ನೂ, ಈ ಮೂಲ ಕಾನೂನು ಖಾತ್ರಿ ಪಡಿಸುತ್ತದೆ. ಈ ಮೂಲ ಕಾನೂನಿನ ಬಹುತೇಕ ಅಂಶಗಳು ಬ್ರಿಟಿಷ್ ವಸಾಹತುಶಾಹಿಯಿಂದ ಮುಂದುವರೆದವುಗಳು. ಆದಾಗ್ಯೂ ಬೀಜಿಂಗ್ ಇವೆಲ್ಲಾ ಕಾನೂನು ತತ್ವ ಗಳನ್ನು ತನ್ನ ಹಿಡಿತದಲ್ಲಿ ನಿಯಂತ್ರಣ ಮಾಡುತ್ತಿದೆ ಎಂಬ ಆರೋಪವನ್ನು ಎದುರಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಕೆಲವು ಪ್ರತಿಭಟನೆಕಾರರು, ಚೀನಾದಿಂದ ಹಾಂಗ್ ಕಾಂಗ್ ಅನ್ನು ಪ್ರತ್ಯೇಕಗೊಳಿಸಬೇಕೆಂಬ ಕರೆ ನೀಡಿದ್ದಾರೆ. ಆದರೆ, ಚೀನಾ ದೇಶದ 'ರಾಷ್ಟ್ರೀಯ ಜನತಾ ಸಭೆ'(ಎನ್‌ಪಿಸಿ) ಈ ಪ್ರತ್ಯೇಕಗೊಳ್ಳುವ ಬೇಡಿಕೆಯನ್ನು ಎಂದಿಗೂ ಒಪ್ಪುವುದಿಲ್ಲ.

ವಸಾಹತುಶಾಹಿ ದಬ್ಬಾಳಿಕೆಯ ಅವಮಾನವನ್ನು ತೀವ್ರವಾಗಿ ಅನುಭವಿಸಿದ ಚೀನಾ, ಐತಿಹಾಸಿಕವಾಗಿ ರೂಪುಗೊಂಡ ಭೂ ಪ್ರದೇಶದ ವಿಘಟನೆಯನ್ನು ಮತ್ತೆ ಅನುಸರಿಸುವುದಿಲ್ಲ ಹಾಗೂ ಸಮಾಜವಾದಿ ವ್ಯವಸ್ಥೆಯನ್ನು ಯಾವುದೇ ಕಾರಣಕ್ಕೂ ಅಸ್ಥಿರ ಗೊಳಿಸಲು ಎಂದೆಂದಿಗೂ ಬಿಡುವುದಿಲ್ಲ ಎಂಬ ಸದೃಢ ನಿಲುವನ್ನು ಹೊಂದಿದೆ.

ಹಾಂಗ್ ಕಾಂಗ್ ಸ್ಥಿತಿ ಬದಲಾವಣೆ:ಚೀನಾದ ಬದ್ಧತೆ

ಚೀನಾ ಬ್ರಿಟಿಷ್ ಜಂಟಿ ಘೋಷಣೆಯು 1980 ರ ದಶಕದ ಮಧ್ಯದಲ್ಲಿ ಸ್ಥಗಿತಗೊಂಡಿತು. ಜೊತೆಗೆ, ಚೀನಾದಲ್ಲಿ ಭೌಗೋಳಿಕ ರಾಜಕೀಯ ಶಕ್ತಿ ಗಳ ಸಮತೋಲನ ಮತ್ತು ಅದರ ಆರ್ಥಿಕ ಅಭಿವೃದ್ಧಿ ಅಗತ್ಯಗಳು ಹಾಂಗ್ ಕಾಂಗ್ ನಲ್ಲಿ ಪ್ರತಿ ಬಿಂಬಿಸಲು ಆರಂಭಿಸಿದವು. ಚೀನಾ ತನ್ನ "ಮುಕ್ತ ಆರ್ಥಿಕ" ಸುಧಾರಣೆಗಳನ್ನು ಪ್ರಾರಭಿಸಿತು. ಈ ನಿಟ್ಟಿನಲ್ಲಿ ಬೃಹತ್ ವಿದೇಶಿ ಬಂಡವಾಳ ಹೂಡಿಕೆಗೆ ತೆರೆಯ ಬೇಕಾದ ಅಗತ್ಯತೆ ಸೃಷ್ಟಿಯಾಯಿತು. ಆ ಸಂದರ್ಭದಲ್ಲಿ ಹಾಂಗ್ ಕಾಂಗ್ ಅನ್ನು ಅಂತಹ ಹೂಡಿಕೆಗೆ ಒಂದು ಮಾರ್ಗ ಮಾಡಿಕೊಂಡಿತು. ಅದಕ್ಕಿಂತ ಪ್ರಮುಖ ವಾಗಿ, 1989 ರಲ್ಲಿ "ಟಿಯಾನನ್ನ್ ಮೆನ್ ಸ್ಕ್ವೇರ್" ನಲ್ಲಿ ನಡೆದ ಘಟನೆಯ ನಂತರ, ಚೀನಾವು ಹಾಂಗ್ ಕಾಂಗ್ ಮತ್ತು ವಿದೇಶಿ ಬಂಡವಾಳ ಹೂಡಿಕೆ ದಾರರಿಗೆ ಸ್ಥಿರತೆಯ ಖಾತ್ರಿ ಒದಗಿಸುವ ಸಲುವಾಗಿಯೇ, . ಎಚ್.ಕೆ.ಎಸ್.ಎ.ಆರ್., ಒಂದು ಪ್ರಮುಖ ಹಣಕಾಸು ಮತ್ತು ವ್ಯಾಪಾರ ಕೇಂದ್ರವಾಗಿ ಉಳಿದಿದೆ ಎಂದು ಖಚಿತ ಪಡಿಸಿತು.

ಇದೀಗ ಈ ಪ್ರದೇಶ ಚೀನಾ ದೇಶವು ಬಂಡವಾಳಶಾಹಿ ವಿಶ್ವ ಆರ್ಥಿಕತೆಗೆ ಸಂಪರ್ಕಿಸುವ ದ್ವಾರವಾಗಿದೆ. ಅನೇಕ ವಿಷಯಗಳಲ್ಲಿ ಚೀನಾ ಮತ್ತು ಹಾಂಗ್ ಕಾಂಗ್ ಅಭಿವೃದ್ಧಿ ಎರಡು ವಿಭಿನ್ನ ಹಾದಿಗಳಾಗಿದ್ದರೂ ಒಂದೇ ಸಮನಾದ ಆರ್ಥಿಕ ಆಯಾಮವನ್ನು ಹೊಂದಿವೆ. ಹೀಗೆ ಹಾಂಗ್ ಕಾಂಗ್ ನ ಆರ್ಥಿಕ ಸ್ಥಿತಿ ಯಲ್ಲಿ ಸ್ಥಿರತೆ ತರಲು ' ಒಂದೇ ದೇಶ, ಎರಡು ವ್ಯವಸ್ಥೆ' ಗಳು ಯಶಸ್ಸು ತಂದಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ, ಬ್ರಿಟನ್ 150 ವರ್ಷಗಳ ಕಾಲ ಹಾಂಗ್ ಕಾಂಗ್ ಅನ್ನು ವಸಾಹತು ಪ್ರದೇಶವಾಗಿ ನಿರ್ವಹಿಸಿತ್ತು. ಇದರ ಪರಿಣಾಮದಿಂದಾಗಿ ಅದರ ಗುರುತು, ಜೀವನ ಶೈಲಿ ಮತ್ತು ಕಾನೂನು ವ್ಯವಸ್ಥೆ ಅದರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ ಮತ್ತು ಅದರ ಸಂಸ್ಕೃತಿ, ಭಾಷೆ ಮತ್ತು ಪ್ರಜಾಪ್ರಭುತ್ವದ ಸಂವೇದನೆಗಳ ಮೇಲೆ ಅಳಿಸಲಾಗದ ಮುದ್ರೆ ಹಾಕಿದೆ.

ವ್ಯಾಪಾರ ಮತ್ತು ಹಣಕಾಸು ಕೇಂದ್ರವಾಗಿ, ಹಾಂಗ್ ಕಾಂಗ್ ವಲಸಿಗರ ನಗರವಾಗಿ ಮಾರ್ಪಟ್ಟಿತು. 1949 ರ ಚೀನೀ ಕ್ರಾಂತಿಯ ನಂತರ ವಲಸಿಗರ ಅಲೆಗಳು ಹೆಚ್ಚಾಯಿತು. ಮತ್ತೆ 1970 ಮತ್ತು 1980 ರ ದಶಕಗಳಲ್ಲಿ ಆರ್ಥಿಕ ಸುಧಾರಣೆಗಳ ನಂತರ ಮತ್ತು ಚೀನಾದ ಸಮಾಜವಾದಿ ಕ್ರಾಂತಿಯನ್ನು ಬೆಂಬಲಿಸದ ಅನೇಕರನ್ನು ಒಳಗೊಂಡಂತೆ ವಾರುಕಟ್ಟೆಗೆ ತೆರೆಯಲ್ಪಟ್ಟಿತ್ತು. ಬ್ರಿಟಿಷ್ ವಸಾಹತು ಶಾಹಿಯ ಅಡಿಯಲ್ಲಿ ಹಾಂಗ್ ಕಾಂಗ್ ಎಂದಿಗೂ ಪೂರ್ಣ ಪ್ರಜಾಪ್ರಭುತ್ವ ಮತ್ತು ಸಾರ್ವತ್ರಿಕ ಮತದಾನವನ್ನು ಅನುಭವಿಸದಿದ್ದರೂ, ಆ ಆದರ್ಶಗಳ ಭರವಸೆಗಳ ಮಾರ್ದನಿ ಮಾತ್ರ ಪ್ರತಿನಿಧಿಸುತ್ತಿತ್ತು.

1980 ಮತ್ತು 1990 ರ ದಶಕಗಳಲ್ಲಿ, ಹಾಂಗ್ ಕಾಂಗ್ ಅನುಭವಿಸಿದ ಆರ್ಥಿಕ ಬೆಳವಣಿಗೆ ಚೀನಾದ ಆರ್ಥಿಕ ಸುಧಾರಣೆಗಳು ಮತ್ತು ವಿದೇಶಿ ಬಂಡವಾಳದ ಅಗತ್ಯಕ್ಕೆ ಸಂಬಂಧಿಸಿದೆ. ಆದರೆ ಸಮಯ ಬದಲಾಗಿದೆ. 1997 ರಲ್ಲಿ ಹಾಂಗ್ ಕಾಂಗ್ ನ ಒಟ್ಟು ದೇಶೀಯ ಉತ್ಪನ್ನವು ಚೀನಾದ ಜಿಡಿಪಿ ಯ ಶೇ.27 ರಷ್ಟು ಆಗಿತ್ತು. ಇದು ಈಗ ಶೇ.3 ಕ್ಕೆ ಕ್ಷೀಣಿಸಿದೆ. ವಿಶ್ವದ ಅತಿ ದೊಡ್ಡ ಬ್ಯಾಂಕುಗಳು ಈಗ ಚೀನಾದಲ್ಲಿವೆ. ಇವೆಲ್ಲವೂ ಸರ್ಕಾರಿ ಸ್ವಾಮ್ಯದಲಿಯೇ ಅಸ್ಥಿತ್ವದಲ್ಲಿವೆ. ಶೆನ್ ಜೆನ್ ಮತ್ತು ಇತರ ಪ್ರಮುಖ ಚೀನಿ ನಗರಗಳು ಹಣಕಾಸು ಮತ್ತು ಉತ್ಪಾದನಾ ಕೇಂದ್ರ ಗಳಾಗಿ ಹಾಂಗ್ ಕಾಂಗ್ ಅನ್ನು ಮೀರಿಸಿವೆ. ಆದರೆ, ಹಾಂಗ್ ಕಾಂಗ್ ಷೇರು ಮಾರುಕಟ್ಟೆಯಲ್ಲಿ ಅನೇಕ ಚೀನಿ ಕಂಪನಿಗಳನ್ನು ಪಟ್ಟಿ ಮಾಡಲಾಗಿದೆ.

ಸಮಾಜವಾದಿ ಪ್ರಭುತ್ವ ನಿರ್ಮಿಸುವ ಸವಾಲುಗಳು

"ಚೀನೀ ಗುಣಲಕ್ಷಣಗಳೊಂದಿಗೆ" ಅಂತಿಮವಾಗಿ ಸಮಾಜವಾದ ನಿರ್ಮಿಸಲು ಚೀನಾ 1949 ರಲ್ಲಿ ಕ್ರಾಂತಿಕಾರಿ ಹಾದಿಯನ್ನು ಹಿಡಿಯಿತು. 40 ವರ್ಷಗಳ ಹಿಂದೆ ಆರ್ಥಿಕ ಸುಧಾರಣೆಗಳು ಪ್ರಾರಂಭ ವಾದಾಗಿನಿಂದ ಚೀನಾ ಐತಿಹಾಸಿಕವಾಗಿ ಅಭೂತಪೂರ್ವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳಿಗೆ ಒಳಗಾಗಿದೆ. ಇದು ಜಗತ್ತಿಗೆ ತಿಳಿದಿರುವ ಸಂಗತಿ.

ಊಳಿಗಮಾನ ಪದ್ಧತಿಯಿಂದ ಹೊರಬಂದು ಹುಟ್ಟಿಕೊಂಡ'ಚೀನ ಜನತಾ ಗಣತಂತ್ರ' ಅಭಿವೃದ್ಧಿ ಹೊಂದಿದ, ಬೂರ್ಜ್ವಾ ಪ್ರಜಾಪ್ರಭುತ್ವ, ಪತ್ರಿಕಾ ಸ್ವಾತಂತ್ರ್ಯ ಅಥವಾ ವಾಕ್ ಸ್ವಾತಂತ್ರ್ಯ ವನ್ನು ಅನುವಂಶಿಕವಾಗಿ ಪಡೆಯಲಿಲ್ಲ. ಬದಲಿಗೆ, ಅದು ತನ್ನ ಸಂಪ್ರದಾಯಗಳು ಮತ್ತು ಇತಿಹಾಸದ ಆಧಾರದಲ್ಲಿ ಒಂದು ಆಧನಿಕ ಸಮಾಜವಾದಿ ಆರ್ಥಿಕವನ್ನು ಮತ್ತು ಆಡಳಿತ ಮಾದರಿಯನ್ನು ರೂಪಿಸಿಕೊಳ್ಳಬೇಕಾಗಿತ್ತು. ಇದನ್ನು ತ್ವರಿತವಾಗಿ ಮಾಡಬೇಕಾಗಿತ್ತು, ಮಾಡಿತು ಕೂಡ.

"ಒಂದು ದೇಶ, ಎರಡು ವ್ಯವಸ್ಥೆಗಳು" ಮಾದರಿಯನ್ನು 2047 ರ ಹೊತ್ತಿಗೆ ಹಾಂಗ್ ಕಾಂಗ್ ಅನ್ನು ಸಂಪೂರ್ಣವಾಗಿ ಚೀನಾಕ್ಕೆ ಸಂಯೋಜನೆ ಗೊಳಿಸುವ ರೀತಿಯಲ್ಲಿ ರೂಪಿಸಲಾಗಿತ್ತು. ಅನೇಕ ವಿಧಗಳಲ್ಲಿ ಈ ಪ್ರಕ್ರಿಯೆಯು ಮಾನವ ಇತಿಹಾಸದಲ್ಲಿ ಅಭೂತಪೂರ್ವವಾಗಿದೆ. ಚೀನಾದ ಸರ್ಕಾರ ಹಾಂಗ್ ಕಾಂಗ್ ನ ಮುಖ್ಯ ಭೂಭಾಗದ ಸಾರ್ವಭೌಮತ್ವ ವನ್ನು ಮತ್ತು ಅದರ ಅಧಿಕಾರವನ್ನು ಹೆಚ್ಚು ಹೆಚ್ಚು ಪ್ರತಿಪಾದಿಸುತ್ತಿದಂತೆ, ವಿರೋಧಾಭಾಸಗಳು ಮತ್ತು ಘರ್ಷಣೆ ಗಳು ಕೂಡಾ ಹೆಚ್ಚಾಗಿ ಸಂಭವಿಸುತ್ತವೆ. ಇದರ ಫಲವೇ ಇಂದಿನ ಪ್ರತಿಭಟನೆಗಳು. ಬ್ರಿಟಿಷರು ಹಾಂಗ್ ಕಾಂಗ್ ಅನ್ನು ತೊರೆದು 22 ವರ್ಷಗಳು ಕಳೆದಿವೆ. ಒಂದು ದೇಶ, ಮತ್ತು ಎರಡು ವ್ಯವಸ್ಥೆಯ ಯೋಜಿತ 50 ವರ್ಷಗಳ ಅರ್ಧದಷ್ಟು ಜೀವಿತಾವಧಿಯು ಮುಗಿದಿದೆ. ಆದಾಗ್ಯೂ, ಹಸ್ತಾಂತರ ಒಪ್ಪಂದ ಕ್ಕೆ ಸಂಬಂಧಿಸಿದಂತೆ ಚೀನಾ, ಮಕಾವು ಅಥವಾ ತೈವಾನ್ ನೊಂದಿಗೆ ಯಾವುದೇ ಕಾನೂನುಗಳು ಇಲ್ಲಿಯವರೆಗೂ ಅಸ್ಥಿತ್ವದಲ್ಲಿಲ್ಲ. ಈ ಹಿನ್ನೆಲೆಯಲ್ಲಿ ಹಸ್ತಾಂತರ ಮಸೂದೆಯನ್ನು ಜಾರಿಗೆ ತರಲು ನಿರ್ದರಿಸಲಾಗಿತ್ತು. ಆರ್ಥಿಕ ಹಾಗೂ ಸಾಮಾಜಿಕ ಅಪರಾಧಗಳನ್ನು ಮಾಡಿದ ಮತ್ತು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು, ಅಥವಾ ಹಾಂಗ್ ಕಾಂಗ್ ಗೆ ಓಡಿಹೋದ ಶ್ರೀಮಂತ ಚೀನಿಯರು ಸಹಜವಾಗಿಯೇ ಇದೀಗ ತುಂಬಾ ಚಿಂತಾಕ್ರಾಂತರಾಗಿದ್ದಾರೆ ಎನ್ನಲಾಗಿದೆ.

ಆಳವಾದ ಸಾಮಾಜಿಕ ಸಮಸ್ಯೆಗಳು

ಹಸ್ತಾಂತರ ಕಾನೂನು ಪ್ರತಿಭಟನೆಗಳ ಸ್ಫೋಟವನ್ನು ಪ್ರಚೋದಿಸಿದರೂ ಸಹಾ, ಅದು ಇಅದರೊಳಗೆ ಹುದುಗಿರುವ ಇನ್ನೂ ಆಳವಾದ ಸಮಸ್ಯೆಗಳ ಬೆಂಕಿಗೂಡಾಗಿದೆ. 2019 ರಲ್ಲಿ ಚೀನಾದ ಜಿಡಿಪಿ ಶೇ.6 ರಷ್ಟಿದ್ದರೆ, ಹಾಂಗ್ ಕಾಂಗ್ ನ ಜಿಡಿಪಿ ಕೇವಲ ಶೇ.1 ಅಥವಾ 2 ರಷ್ಟು ಮಾತ್ರವಿದೆ. ಇದು ಸಮಸ್ಯೆಗಳನ್ನು ತೀಕ್ಷ್ಣ ಗೊಳಿಸಿದೆ. ಈ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಬ್ರಿಟಿಷ್ ವಸಾಹತುಶಾಹಿಯ ಪರಿಣಾಮದ ಕೊಡುಗೆಗಳು. ಇದರ ಪರಿಣಾಮದಿಂದಾಗಿ, ಚೀನಾದ ಮುಖ್ಯ ಭೂಭಾಗ ಮತ್ತು ಸರ್ಕಾರದ ವಿರುದ್ಧ ಕೆಲವು ಶಕ್ತಿ ಗಳಿಂದ ಪ್ರತಿಭಟನೆಗಳ ಮೂಲಕ ಆತಂಕವನ್ನು ಸೃಷ್ಟಿಸಲಾಗುತ್ತಿದೆ.

ಆಕ್ಸ್‌ಫ್ಯಾಮ್ ಪ್ರಕಾರ, ವಿಶ್ವದ ಎಲ್ಲಾ ಅಭಿವೃದ್ಧಿ ಹೊಂದಿದ ಆರ್ಥಿಕ ದೇಶಗಳಲ್ಲಿ ಹಾಂಗ್ ಕಾಂಗ್ ಅತ್ಯಂತ ಅಸಮಾನತೆ ಹೊಂದಿದ ಭಾಗವಾಗಿದೆ. ಅಗ್ರ ಐದು ಹಾಂಗ್ ಕಾಂಗ್ ಬಂಡವಾಳಶಾಹಿಗಳು, ಜಾಗತಿಕ ವಾಗಿ ಅಗ್ರ 100 ರಲ್ಲಿ ಸ್ಥಾನ ಪಡೆದಿದ್ದಾರೆ. ಲಂಡನ್ ನಂತರ, ವಿಶ್ವದ ಎರಡನೇ ಅತ್ಯಂತ ದುಬಾರಿ ನಗರ ಹಾಂಗ್ ಕಾಂಗ್, ಆದರೂ, ಶೇ.21 ರಷ್ಟು ಹಾಂಗ್ ಕಾಂಗ್ ಜನರು, ಬಡತನ ರೇಖೆಗಿಂತ ಕೆಳಗಿದ್ದಾರೆ. ಆಸ್ತಿ ಮಾರಾಟದಿಂದ ಬರುವ ಆದಾಯವು ಹಾಂಗ್ ಕಾಂಗ್ ಸರ್ಕಾರದ ಪ್ರಾಥಮಿಕ ಆದಾಯ ಮೂಲ ವಾಗಿದೆ. ಇಲ್ಲಿನ ಆಸ್ತಿಯ ಮೌಲ್ಯ ಗಳು ವಿಶ್ವದಲ್ಲೇ ಅತಿಹೆಚ್ಚು. ವೇತನಗಳು ಸ್ಥಗಿತಗೊಂಡಿದ್ದರು ಸಹಾ, ಆಸ್ತಿ ಬೆಲೆಗಳು 2010 ರಿಂದ 2018 ರ ನಡುವೆ ದ್ವಿಗುಣಗೊಂಡಿವೆ.

ಪ್ರಸ್ತುತ ಪ್ರತಿಭಟನೆಗಳ ಮೂಲಗಳು


ಹಾಂಗ್ ಕಾಂಗ್ ನ ಜನಸಾಮಾನ್ಯರಲ್ಲಿ ಪ್ರತಿಭಟನೆ ಗಳಿಗೆ ಬೆಂಬಲದ ವಿಸ್ತಾರ ಮತ್ತು ಆಳ ಸ್ಪಷ್ಟವಾಗಿಲ್ಲ. ಇದರಲ್ಲಿ ಚೀನಾ ಸರ್ಕಾರವನ್ನು ಬೆಂಬಲಿಸುವವರು ಹೇರಳವಾಗಿದ್ದಾರೆ. ಅನೇಕ ನಿವಾಸಿಗಳು, ಸಣ್ಣ ಉದ್ಯಮಗಳ ಮಾಲೀಕರು ಮತ್ತು ಹಣಕಾಸು ಮತ್ತು ಪ್ರವಾಸೋದ್ಯಮ ಕಂಪನಿಗಳು ಪ್ರತಿಭಟನೆಕಾರರ ಕಡೆಯಿಂದ ನಡೆಯುವ ಹಿಂಸಾಚಾರ ಮತ್ತು ಸಾರ್ವಜನಿಕ ಆಸ್ತಿಗಳ ವಿನಾಶದಿಂದ ಮನ ನೊಂದಿದ್ದಾರೆ.

ಆರಂಭದಲ್ಲಿ, ಹಲವರು ಹಸ್ತಾಂತರ ಕಾನೂನಿನ ಭಯದ ಸುತ್ತ ಸಂಘಟಿತರಾಗಿದ್ದರು. ಆದರೆ, ಪ್ರಸ್ತುತ ಪ್ರತಿಭಟನೆಗಳು ಚೀನಾ ಸರ್ಕಾರದ ಅಧಿಕಾರವನ್ನು ವಿರೋಧಿಸುವ, ಹಿಂದಿನ ಚಳುವಳಿಗಳೊಂದಿಗೆ ಸಂಪರ್ಕ ಹೊಂದಿರುವುದು ಇದೀಗ ಬೆಳಕಿಗೆ ಬಂದಿದೆ. ಅಂದರೆ, ಇದರ ಹಿಂದೆ ಬಾಹ್ಯ ಕೊಂಡಿಗಳು ಸುತ್ತಿಕೊಂಡಿರುವುದು ಗೊತ್ತಾಗಿದೆ.

ಅಂತಿಮವಾಗಿ, "ಒಂದು ದೇಶ ಮತ್ತು ಎರಡು ವ್ಯವಸ್ಥೆಗಳು" ಮಾದರಿ ರಾಜಕೀಯ ತತ್ವಗಳ ಹಾಗೂ ಚಿಂತನೆಗಳ ನಡುವಿನ ಘರ್ಷಣೆಯನ್ನು ಪ್ರತಿಬಿಂಬಿಸುತ್ತದೆ. ಒಂದೆಡೆ, ಹೊಸ ಮತ್ತು ವಿಶ್ವಾಸಗೊಳ್ಳುತ್ತಿರುವ ಸಮಾಜವಾದಿ ಪ್ರಜಾಪ್ರಭುತ್ವವು ಚೀನಾದ ಇತಿಹಾಸದಲ್ಕಿ ಬೇರೂರಿದೆ. ಇದು ಒಂದೇ ಆಳುವ ಪಕ್ಷದೊಂದಿಗೆ ಜನತಾ ಆಡಳಿತವನ್ನು ನೇರವಾಗಿ ಸಬಲೀಕರಣಗೊಳಿಸುವ ಮಾರ್ಗವನ್ನು ಕಂಡುಕೊಳ್ಳುತ್ತಿದೆ. ಮತ್ತೊಂದೆಡೆ, ಬ್ರಿಟಿಷ್ ವಸಾಹತುಶಾಹಿ ಆಕ್ರಮಣದಿಂದ ರೂಪಿಸಲ್ಪಟ್ಟ ನಿರ್ಬಂಧಿತ ಪ್ರಜಾಪ್ರಭುತ್ವ ಆಡಳಿತ ಮಾದರಿಯಿದೆ. ಈ ವೈರುಧ್ಯಗಳನ್ನು ಪರಿಹರಿಸುವುದು ನಿರಂತರ ಸವಾಲು ಮತ್ತು ಕೆಲಮೊಮ್ಮೆ ನೋವಿನ ಪ್ರಕ್ರಿಯೆ ಕೂಡ.

●

ಚೀನಾ ಜನತಾ ಗಣತಂತ್ರ ಅಕ್ಟೋಬರ್ 1ರಂದು ತನ್ನ 70ನೇ ವಾರ್ಷಿಕೋತ್ಸವವನ್ನು ಆಚರಿಸಿತು
–ರಾಜಧಾನಿ ಬೀಜಿಂಗ್‌ನ ತಿಯನ್ ಆನ್ ಮೆನ್ ಚೌಕದಲ್ಲಿ ರಾಷ್ಟ್ರೀಯ ದಿನದ ಆಚರಣೆ



JANASHAKTHI KANNADA VARA PATRIKE October 7-13 , 2019 Price: Rs. 10/- Date of Publication: 4 October 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ದಲಿತರ “ಲಿಂಚಿಂಗ್”ಗೂ ಪ್ರಧಾನಿ ಮೋದಿಯವರಿಗೂ ಈ ದೇಶದಲ್ಲಿ ಯಾವುದೇ “ಲಿಂಕಿಂಗ್” ಇಲ್ಲವೆ ?

ಗೋಪಾಲಕೃಷ್ಣ ಹರಳಹಳ್ಳಿ





ದಲಿತರನ್ನು ಲಿಂಚಿಗ್ ಮಾಡುವ ಅಂದರೆ, “ಹೊಡೆದು ಕೊಲ್ಲುವ” ಪ್ರವೃತ್ತಿಗೆ ಕೊನೆಯೇ ಇಲ್ಲವೇ? ಪ್ರಧಾನಿ ಮೋದಿಯವರೇ? ಎಂದು ನೇರವಾಗಿ ಪ್ರಶ್ನೆ ಕೇಳಿದರೆ, ಸಚಿವರೊಬ್ಬರು, ಎಲ್ಲೋ ದಾರಿಯಲ್ಲಿ ಕಾರು ಹೋಗುವಾಗ, ನಾಯಿಮರಿ ಕಾರಿನ ಚಕ್ರಕ್ಕೆ ಸಿಕ್ಕಿ ಕೊಲ್ಲಲ್ಪಟ್ಟರೆ, ಪ್ರಧಾನಿ ಹೇಗೆ ಕಾರಣ ಕರ್ತರಾಗುತ್ತಾರೆ. ಎಲ್ಲದಕ್ಕೂ ಪ್ರಧಾನಿಯವರನ್ನೇ ಅರೋಪಿ ಸ್ಥಾನದಲ್ಲಿ ನಿಲ್ಲಿಸುವುದು ಸರಿಯಲ್ಲ ಎಂಬ ವಾಡಿಕೆಯ ಮಾತುಗಳು ಪ್ರತಿಕ್ರಿಯೆಯಾಗಿ ಬಂದಿದ್ದವು. ಈ ಹಿಂದೆ ಹರಿಯಾಣ ರಾಜ್ಯದ ಫರಿದಾಬಾದ್ ಜಿಲ್ಲೆಯ ಬಲ್ಲಾಬ್ಗರ್ ಹಳ್ಳಿಯಲ್ಲಿ, ಇಬ್ಬರು ದಲಿತ ಕಂದಮ್ಮಗಳನ್ನು ಸುಟ್ಟು ಹಾಕಿದ ಘಟನೆ ನಡೆದಾಗ ಹೀಗೆ ಉತ್ತರಿಸಲಾಗಿತ್ತು ಎಂದು ನಿಮ್ಮ ನೆನಪಿಗಾಗಿ ಅಷ್ಟೇ. ಅಂದರೆ, ಈ ದೇಶದ ದಲಿತರನ್ನು ನಾಯಿಗಳಿಗೆ ಹೋಲಿಸಲಾಗಿತ್ತು. ಇದು ಅಸ್ಪೃಶ್ಯತೆಯ ಕ್ರೂರ ಅಭಿವ್ಯಕ್ತಿಯಾಗಿತ್ತು. ಇದು 2015 ರ ಅಕ್ಟೋಬರ್ 19ರಂದು ನಡೆದಿತ್ತು.

ಈ ಪ್ರಕರಣದಲ್ಲಿ ಭಾಗಿಯಾಗಿದ್ದ 11 ಮಂದಿ ಮೇಲ್ಜಾತಿಯರನ್ನು ಬಂಧಿಸಲಾಗಿತ್ತು. ಆ ನಂತರ ಸಾಕ್ಷಿಗಳು ಸಿಗದೆ ಅವರೆಲ್ಲರು ಖುಲಾಸೆ ಗೊಂಡರು ಎಂದು ಪತ್ರಿಕೆಯುಲ್ಲಿ ಓದಿದ ನೆನಪು.

ಇದೀಗ ಏಕೆ ಆ ನೆನಪು ಎನ್ನುವಿರಾ? ಎರಡು ದಿನಗಳ ಹಿಂದೆ, ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯ ಭಾವಕೇಡಿ ಹಳ್ಳಿಯಲ್ಲಿ ಬಯಲಿನಲ್ಲಿ ಶೌಚ ಮಾಡುತ್ತಿದ್ದ ಇಬ್ಬರು ದಲಿತ ಮಕ್ಕಳನ್ನು ಹೊಡೆದು ಕೊಂದ ದಾರುಣ ಘಟನೆ ನಡೆದಿದೆ. ಕಾಕತಾಳೀಯವೆಂದರೆ, ಅಂದೇ ನಮ್ಮ ಪ್ರಧಾನಮಂತ್ರಿ ಯವರಿಗೆ, ಅಮೆರಿಕಾದ ನ್ಯೂಯಾರ್ಕ್ ನಗರದ “ಬಿಲ್ ಅಂಡ್ ಮೆಲಿಂದಾ ಗೇಟ್ಸ್ ಫೌಂಡೇಶನ್” ಸಂಸ್ಥೆಯ “ಲಿಂಕ್ಲೊನ್ ಸೆಂಟರ್” ನವರು, ಮೋದಿ ಸರ್ಕಾರದ ‘ಸ್ವಚ್ಛ ಭಾರತ್ ಅಭಿಯಾನ’ಕ್ಕಾಗಿ “ಗ್ಲೋಬಲ್ ಗೋಲ್ ಕೀಪರ್” ಪ್ರಶಸ್ತಿ ಯನ್ನು ನೀಡಿ ಗೌರವಿಸಿದ್ದಾರೆ.

ಸ್ವಚ್ಛ ಭಾರತದ ಅಭಿಯಾನದ ಉದ್ದೇಶಗಳೆಂದರೆ ಪ್ರಮುಖವಾಗಿ, ಭಾರತದಲ್ಲಿರುವ ಸುಮಾರು 6.5 ಲಕ್ಷ ಹಳ್ಳಿಗಳನ್ನು ಬಯಲು ಶೌಚ ಮುಕ್ತ ಮಾಡಬೇಕು ಎಂಬುದಾಗಿತ್ತು. ಇದಕ್ಕಾಗಿ ಪ್ರತಿ ಹಳ್ಳಿಗೆ ವಾರ್ಷಿಕ 20 ಲಕ್ಷ ರೂ. ಮೀಸಲಿಡಲು ಘೋಷಿಸಲಾಗಿತ್ತು. 2014ರ ಅಕ್ಟೋಬರ್ 2 ರಂದು “ಈ ಸ್ವಚ್ಛ ಭಾರತ ಅಭಿಯಾನ” ವನ್ನು ಪ್ರಧಾನಿ ನರೇಂದ್ರ ಮೋದಿಯವರೆ, ಒಂದು ದೊಡ್ಡದಾದ ಕಸಬೊರಕೆಯನ್ನು ಕೈಯಲ್ಲಿ ಹಿಡಿದು, ದೆಹಲಿಯ ಬೀದಿಗಳಲ್ಲಿ ಕಸ ಗುಡಿಸಿದ್ದನ್ನು ನಾವೆಲ್ಲಾ ಪ್ರತ್ಯಕ್ಷವಾಗಿ ಮಾಧ್ಯಮಗಳ ಮೂಲಕ ನೋಡಿದ್ದೇವೆ ಕೂಡ. ಇದೀಗ 5 ವರ್ಷಗಳ ನಂತರ, ಮತ್ತೆ ಗಾಂಧೀ ಜಯಂತಿ ಆಗಮಿಸಿದೆ. ಅಂದು ಇಡೀ ಗ್ರಾಮೀಣ ಭಾರತ “ಬಯಲು ಶೌಚ ಮುಕ್ತವಾಗಿದೆ” ಎಂದು ಅಬ್ಬರದ ಘೋಷಣೆ ಮಾಡಲಾಗಿದೆ. ಅಂದರೆ, ಸ್ವಚ್ಛ ಭಾರತ ಮಿಷನ್ (ಎಸ್‌ಬಿಎಂ) ಅಡಿಯಲ್ಲಿ ಭಾರತ ದೇಶವನ್ನು “ಬಯಲು ಮಲ ವಿಸರ್ಜನೆ ಮುಕ್ತ” ಎಂದು ಘೋಷಿಸಲು ಕೇಂದ್ರ ಸರ್ಕಾರ ಘೋಷಿಸಿದೆ. ಆದರೆ, ಶಿವಪುರಿ ಘಟನೆ ನಮ್ಮ “ಬಯಲು ಶೌಚ ಮುಕ್ತ” ಸ್ವಚ್ಛ ಭಾರತವನ್ನು ಅಣಕಿಸುತ್ತಿದೆ ಅಲ್ಲವೇ? ನಾಗರೀಕ ಸಮಾಜ ತಲೆ ತಗ್ಗಿಸಬೇಕು.


ಶಿವಪುರಿ ಜಿಲ್ಲೆಯಲ್ಲಿ, ಕೊಲ್ಲಲ್ಪಟ್ಟ ಇಬ್ಬರು ಮಕ್ಕಳಾದ, ರೋಶನಿ ಬಾಲ್ಮಿಕಿ (12) ಮತ್ತು ಅವಿನಾಶ್ ಬಾಲ್ಮಿಕಿ (10), ಗ್ರಾಮ ಪಂಚಾಯತಿ ಕಟ್ಟಡದ ಬಳಿ ಬಯಲಿನಲ್ಲಿ ಶೌಚಕ್ಕೆ ಕುಳಿತ್ತಿದ್ದು, ಅಲ್ಲಿ ಮಲ ವಿಸರ್ಜನೆ ಮಾಡಿದ್ದಕ್ಕಾಗಿ ಅವರನ್ನು ಚೆನ್ನಾಗಿ ತಳಿಸಿ ಕೊಂದು ಹಾಕಿರುವ ಈ ಘಟನೆ ನಡೆದಿದೆ. ಬಹುಶಃ ಇವರಿಬ್ಬರು ಮೇಲ್ಜಾತಿಯವರ ಮಕ್ಕಳಾಗಿದ್ದರೆ ಬದುಕಿ ಉಳಿಯುತ್ತಿದ್ದರೇನೋ?

ಬಯಲು ಶೌಚ ಮುಕ್ತ ಭಾರತ ನಿರ್ಮಾಣ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರು, ಈಗಾಗಲೇ ನ್ಯೂಯಾರ್ಕ್‌ನಲ್ಲಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಲ್ಲಿ ನರೇಂದ್ರ ಮೋದಿಯವರು “ಈ ಕುಖ್ಯಾತ ಬಯಲು ಮಲ ವಿಸರ್ಜನೆಯನ್ನು ನಾವು ತೊಡೆದು ಹಾಕಿದ್ದೇವೆ” ಎಂದಿದ್ದಾರೆ. ಇದು ನಿಜವಲ್ಲವೆಂದು ಶಿವಪುರಿ ಸಾರಿ ಸಾರಿ ಹೇಳುತ್ತಿದೆ. ಹಾಗಾದರೆ, ಪ್ರತಿ ಹಳ್ಳಿಗೆ ವಾರ್ಷಿಕ 20 ಲಕ್ಷವೆಂದರೆ, 5 ವರ್ಷಗಳಲ್ಲಿ ಒಂದು ಹಳ್ಳಿಗೆ 1 ಕೋಟಿ, ಅಂದರೆ, 6.5 ಲಕ್ಷದ ಭಾರತದ ಹಳ್ಳಿಗಳಿಗೆ ಒಟ್ಟು, 6.5 ಲಕ್ಷ ಕೋಟಿಗಳು ರೂ. ಖರ್ಚು ಮಾಡಲಾಗಿದೆಯೇ? ಇದು ನರೇಂದ್ರ ಮೋದಿ ಸರ್ಕಾರದ ಅಸತ್ಯವಲ್ಲವೇ? ಅವರ ಪ್ರಶಸ್ತಿಗೆ ಏನಾದರೂ ಸ್ವಲ್ಪ ಗೌರವ ಸಿಗಬೇಕೆಂದರೆ, ನಿಜವನ್ನು ಹೇಳಬೇಕಲ್ಲವೇ? ಅದೂ ಗಾಂಧಿ ಜಯಂತಿ–150ರಂದು ವಾಸ್ತವ ಪರಿಸ್ಥಿತಿಯನ್ನು ದೇಶಕ್ಕೆ ತಿಳಿಸಬೇಕಲ್ಲವೆ?.


ಮತ್ತೊಂದು ಕಡೆ ಪ್ರತಿ ದಿನವೂ ದಲಿತರ ಮೇಲೆ ನಡೆಯುವ ದೌರ್ಜನ್ಯಗಳ ಪಟ್ಟಿಯನ್ನು ಎನ್.ಸಿ.ಆರ್.ಬಿ ವರದಿ ಸಲ್ಲಿಸುತ್ತದೆ. ಅದರಂತೆ, ಪಿಒಎ ಅಡಿಯಲ್ಲಿ ಕಳೆದ ಐದು ವರ್ಷಗಳಲ್ಲಿ ದಲಿತರ ಮೇಲೆ, 2.3 ಲಕ್ಷ ದೌರ್ಜನ್ಯ ಪ್ರಕರಣಗಳು ನಡೆದಿವೆ. ಎಂದಾದರೂ ಇವುಗಳನ್ನು ಪ್ರಧಾನಿ ಖಂಡಿಸಿದ್ದಾರೆಯೇ? ಅದಕ್ಕಾಗಿಯೇ ಪ್ರಧಾನಿ ಮೋದಿಗೂ, ದಲಿತರ ಮೇಲೆ ನಡೆಯುವ ಲಿಂಚಿಂಗ್‌ಗಳಿಗೂ ಏನು ಲಿಂಕಿಂಗ್ ಇಲ್ಲವೇ ಎಂಬ ಅನುಮಾನ ಕಾಡುತ್ತದೆ. ಸಂಬಂಧ ಪಟ್ಟವರು ಉತ್ತರಿಸಲು ಸಾಧ್ಯವೇ ?

ಈ ಎರಡೂ ಕುಟುಂಬಗಳು ಬಡತನದ ರೇಖೆಯ ಕೆಳಗಿನ ಕುಟುಂಬಗಳೆನಿಸಿದರೂ ಅವರಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನಾದ ಅಡಿಯಲ್ಲಿ ಮನೆಯೂ ಸಿಕ್ಕಿಲ್ಲ, ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಶೌಚಾಲಯಕ್ಕೆ ಹಾಕಿದ್ದ ಈ ಎರಡೂ ದಲಿತ ಕುಟುಂಬಗಳ ಅರ್ಜಿಗಳನ್ನು ಕೂಡ ಊರ ಸರಪಂಚ ತಿರಸ್ಕರಿಸಿದ್ದಾನೆ.





ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**